# ಕಾರ್ಮಿಕ ದೃಷ್ಟಿಕೋನ


## ಒಳ ಪುಟಗಳಲ್ಲಿ............


ಮಹಾನ್ ಲೆನಿನ್ - ಒಂದು ಸಂಕ್ಷಿಪ್ತ ಯಶೋಗಾಥೆ - ಭಾಗ 3 ----------------------------------4

‘ಎನ್‌ಡಿಎ’ ಅಥವಾ ‘ಇಂಡಿಯಾ’ - ಇವೆರಡೂ ಜನಪರ ಪರ್ಯಾಯಗಳಲ್ಲ!--------------------5

ಪಕ್ಷಾಂತರ ಆಯೋಜಿಸುವ ‘ವಿಭಿನ್ನ ಮಾದರಿಯ ಪಕ್ಷ’ - ಬಿಜೆಪಿ------------------------6

ಪ್ರತಿಭಟನೆಯ ಅಲೆಗೆ ಸಾಕ್ಷಿಯಾಗುತ್ತಿದೆ ಯುರೋಪ್-------7

ನಾಜಿವಾದದ ವಿರುದ್ಧ ಸಿಡಿದೆದ್ದ ಜರ್ಮನಿ ಜನತೆ---------------9

ಇಸ್ರೈಲ್‌ನ ಗಾಜಾ ನೀತಿಯ ವಿರುದ್ಧ ಪಾಶ್ಚಿಮಾತ್ಯ ದೇಶಗಳ ಅಧಿಕಾರಿಗಳ ಪ್ರತಿರೋಧ-----------12



**ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್**
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

**SUCI(C)**

**ಸಂಪುಟ: 37 ಸಂಚಿಕೆ: 02**
**ಏಪ್ರಿಲ್ 2024 ಬೆಲೆ: ರೂ. 7/–**


**ಏಪ್ರಿಲ್ 24**

## ಎಸ್‌ಯುಸಿಐ(ಸಿ) ಪಕ್ಷದ ಸಂಸ್ಥಾಪನಾ ದಿನ



ಚುನಾವಣೆ ಬಂಡವಾಳಶಾಹಿಗಳ ರಾಜಕೀಯ. ಜನರಲ್ಲಿ ರಾಜಕೀಯ ಪ್ರಜ್ಞೆ ಇಲ್ಲದಿದ್ದರೆ, ಕಾರ್ಮಿಕವರ್ಗ ಹೋರಾಟದ ಮಧ್ಯೆ ಇಲ್ಲದಿದ್ದರೆ, ಅದಕ್ಕೆ ತನ್ನದೇ ವರ್ಗದ ಸಂಘಟನೆ ಇಲ್ಲದಿದ್ದರೆ, ಜನಾಂದೋಳನ ಇಲ್ಲದಿದ್ದರೆ ಹಾಗೂ ಜನರು ಪ್ರಜ್ಞಾವಂತ ಸಂಘಟನೆಯ ಬಲದಿಂದ ಸಜ್ಜಿತರಾಗಿಲ್ಲದಿದ್ದರೆ, ದೊಡ್ಡ ಕೈಗಾರಿಕಾಪತಿಗಳು, ವ್ಯಾಪಾರಸ್ಥರು ಮತ್ತು ಪ್ರತಿಗಾಮಿ ಶಕ್ತಿಗಳು ಧನ ಮತ್ತು ಭುಜಬಲದಿಂದ ಎಂಥಾ ಅತಿರಂಜಿತ ಪ್ರಚಾರವನ್ನು ಹರಿಬಿಡುತ್ತಾರೆಂದರೆ, ನೀರಿನ ಪ್ರವಾಹದಲ್ಲಿ ಹುಲ್ಲುಕಡ್ಡಿಯೊಂದು ತೇಲಿಹೋಗುವ ಹಾಗೆ ಜನ ಸಾಮಾನ್ಯರು ಅದರಲ್ಲಿ ಕೊಚ್ಚಿಹೋಗುತ್ತಾರೆ.

**– ಕಾಮ್ರೇಡ್ ಶಿವದಾಸ್ ಘೋಷ್**
(ಈ ಯುಗದ ಅಪ್ರತಿಮ ಮಾರ್ಕ್ಸ್‌ವಾದಿಗಳು ಮತ್ತು ಎಸ್‌ಯುಸಿಐ(ಸಿ) ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳು)

# ಚುನಾವಣೆ ಬಗ್ಗೆ ಕ್ರಾಂತಿಕಾರಿಗಳ ನಿಲುವು

*(ದೇಶ ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿರುವಾಗ, ನಾವು ನಮ್ಮ ಪಕ್ಷ ಎಸ್‌ಯುಸಿಐ(ಸಿ)ಯ ಸಂಸ್ಥಾಪಕ ಕಾರ್ಯದರ್ಶಿಗಳೂ, ಓರ್ವ ಅಮೋಘ ಮಾರ್ಕ್ಸ್‌ವಾದಿಗಳೂ ಆದ ಕಾಮ್ರೇಡ್ ಶಿವದಾಸ್ ಘೋಷ್‌ರವರ ಕೃತಿಗಳಿಂದ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ; ಈ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕವರ್ಗದ ಕ್ರಾಂತಿ ಸಾಕಾರವಾಗಲು ವ್ಯಕ್ತಿನಿಷ್ಠ ಮತ್ತು ವಸ್ತುನಿಷ್ಠ ಪರಿಸ್ಥಿತಿಗಳು ಪಕ್ವವಾಗುವ ತನಕ, ಚುನಾವಣೆಯ ಕುರಿತು ನೈಜ ಕ್ರಾಂತಿಕಾರಿಗಳು ಹೊಂದಿರಬೇಕಾದ ನಿಲುವಿನ ಬಗ್ಗೆ ಇವು ಬೆಳಕು ಚೆಲ್ಲುತ್ತವೆ.)*

“ಚುನಾವಣೆಗಳಿಂದ ಯಾವ ಪ್ರಯೋಜನವೂ ಇಲ್ಲ ಎಂದು ಸ್ವಘೋಷಿತ ಕ್ರಾಂತಿಕಾರಿಗಳು, ಮಾರ್ಕ್ಸ್‌ವಾದಿಗಳು, ಎಲ್ಲರೂ ಹೇಳುತ್ತಿದ್ದಾರೆ. ನಾವೂ ಇದನ್ನೇ ಹೇಳುವುದು. ನಮ್ಮನ್ನು ಮಾರ್ಕ್ಸ್‌ವಾದಿಗಳು ಎಂದು ಕರೆದುಕೊಳ್ಳುವ ನಾವು ಚುನಾವಣಾ ರಾಜಕೀಯದಲ್ಲಿ ನಮಗೆ ನಂಬಿಕೆ ಇದೆ ಎಂದಾಗಲೀ, ನಮಗೆ ಕ್ರಾಂತಿ ಬೇಡ ಎಂದಾಗಲೀ ಎಂದೂ ಹೇಳುವುದಿಲ್ಲ. ಏಕೆಂದರೆ, ಇದರಿಂದ ನಾವು ತತ್‌ಕ್ಷಣವೇ ಪಶ್ಚಿಮ ಬಂಗಾಲದ ಪ್ರಜಾತಾಂತ್ರಿಕ, ಕ್ರಾಂತಿಕಾರಿ ಮನಸ್ಸುಳ್ಳ ಜನರಿಂದ ದೂರ ಸರಿಯುತ್ತೇವೆ.......

.......ಈ ಬಗ್ಗೆ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಸಿದ್ಧಾಂತ ಹೇಳುವುದೇನು? ಜನರಲ್ಲಿ ಸಂಸತ್ತಿನ ಬಗ್ಗೆ ಭ್ರಮೆ ಇರುವುದರಿಂದಲೇ ಮಾರ್ಕ್ಸ್‌ವಾದಿಗಳು ಸಂಸತ್ತಿಗೆ ಹೋಗುತ್ತಾರೆ ಎಂದು ಅದು ಹೇಳುತ್ತದೆ. ಸಂಸತ್ತಿನ ಬಗ್ಗೆ ಭ್ರಮೆ ಎಂದರೇನು? ಅಂದರೆ, ಮಿಥ್ಯಾ–ಪ್ರಜಾತಂತ್ರವಾದಿಗಳು, ಮಿಥ್ಯಾ–ಸಮಾಜವಾದಿಗಳು, ಮಿಥ್ಯಾ–ಕ್ರಾಂತಿಕಾರಿಗಳು, ಪ್ರಜಾತಾಂತ್ರಿಕ ಶಕ್ತಿಗಳ ಮೇಲೆ, ಅಂದರೆ, ರೈತರು–ಮಧ್ಯಮವರ್ಗದವರ ಮೇಲೆ, ಅಂದರೆ, ಕ್ರಾಂತಿಯ ಅಂಗವಾದ ಈ ಮಿತ್ರವರ್ಗಗಳ ಮೇಲೆ ಈ ಶಕ್ತಿಗಳು ಈಗಲೂ ಸಾಕಷ್ಟು ಪ್ರಭಾವ ಬೀರುತ್ತವೆ ಮತ್ತು ಸಂಸತ್ತಿನ ಬಗ್ಗೆ ಭ್ರಮೆ ಹರಡುವವರು ಇವರುಗಳೇ. ಅಂದರೆ, ಜನರು ಕ್ರಾಂತಿಯನ್ನು ಸಾಕಾರಗೊಳಿಸಬೇಕಾದರೆ ಅವಶ್ಯವಿರುವಂತಹ ಪರಿಸ್ಥಿತಿ ಇನ್ನೂ ಪಕ್ವವಾಗಿಲ್ಲ; ಅಥವಾ, ಒಂದು ಕ್ರಾಂತಿಕಾರಿ ಪಕ್ಷದ ನೇತೃತ್ವದಲ್ಲಿ ಅಧಿಕಾರವನ್ನು ನೇರವಾಗಿ ಕೈವಶಮಾಡಿಕೊಳ್ಳುವ ಸ್ವಲ್ಪವೇ ಮುನ್ನ, ಅದರ ಮುಂದಳ ತಾನು ಹೊಂದಬೇಕಾದ ಗುಣಲಕ್ಷಣಗಳೊಂದಿಗೆ ಸಜ್ಜಾಗಲು ಇನ್ನೂ ಸಾಧ್ಯವಾಗಿಲ್ಲ. ಅಂದರೆ, ನಾವಿನ್ನೂ ಪ್ರಜಾತಾಂತ್ರಿಕ ಹೋರಾಟದ ಹಂತದಲ್ಲೇ ಇದ್ದೇವೆ; ಹಾಗಾಗಿ, ಇಲ್ಲಿ ಜನರನ್ನು ಸಂಸದೀಯ ರಾಜಕೀಯದ ಭ್ರಮೆಯಿಂದ ಮುಕ್ತಗೊಳಿಸುವ ಸಲುವಾಗಿ ನಾವು ಚುನಾವಣೆಗಳಲ್ಲಿ ಪಾಲ್ಗೊಳ್ಳಲೇ ಬೇಕಾಗುತ್ತದೆ; ನಾವೇನಾದರೂ ಚುನಾವಣೆಯಲ್ಲಿ ಬಹುಮತ ಪಡೆದರೆ ನಾವು ಸರ್ಕಾರವನ್ನು ರಚಿಸಲೂ ಬೇಕಾಗುತ್ತದೆ, ಮತ್ತು ಸಾಧ್ಯವಾಗುವಷ್ಟರ ಮಟ್ಟಿಗೆ ಕ್ರಾಂತಿಕಾರಿ ಹೋರಾಟಗಳನ್ನು ಕಟ್ಟಲು ಆ ಸರ್ಕಾರವನ್ನು ಬಳಸಿಕೊಳ್ಳಬೇಕಾಗುತ್ತದೆ. ನಾವು ಪೊಲೀಸರಿಗೆ ನಿರ್ಬಂಧ ವಿಧಿಸಿ, ನಮ್ಮ ಮುಂದಳಗಳನ್ನು ಜನ ಹೋರಾಟಗಳ ಅಸ್ತ್ರಗಳನ್ನಾಗಿ ಬಳಸಬೇಕಾಗುತ್ತದೆ.

ಈ ಕಾರಣಕ್ಕಾಗಿಯೇ, ನಾವು ಚುನಾವಣೆಯಲ್ಲಿ ಪಾಲ್ಗೊಳ್ಳುವುದು, ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ನಿಲ್ಲಿಸುವುದು. ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಸಿದ್ಧಾಂತದ ಪ್ರಕಾರ, ಮಿಥ್ಯಾ–ಪ್ರಜಾತಂತ್ರವಾದಿಗಳು, ಮಿಥ್ಯಾ–ಸಮಾಜವಾದಿಗಳು, ಮಿಥ್ಯಾ–ಕ್ರಾಂತಿಕಾರಿಗಳು, ಇವರನ್ನೆಲ್ಲಾ ರೈತರು–ಮಧ್ಯಮವರ್ಗಗಳಿಂದ ಬೇರ್ಪಡಿಸುವ ತನಕ; ಅಂದರೆ ಕ್ರಾಂತಿಯ ಅಂಗವಾಗಿರುವ ಈ ಮಿತ್ರವರ್ಗಗಳು 3ನೇ ಪುಟಕ್ಕೆ

# ಚುನಾವಣಾ ಬಾಂಡ್ ಹಗರಣ

### ಕಡು ಭ್ರಷ್ಟ ಬಂಡವಾಳಶಾಹಿ ವ್ಯವಸ್ಥೆಯನ್ನು ಬಟಾಬಯಲುಗೊಳಿಸಿದೆ

**ಸಿಬಿಐ, ಇಡಿ, ಆದಾಯ ತೆರಿಗೆ ಇಲಾಖೆಗಳನ್ನು ಬಳಸಿಕೊಂಡು ಸಾವಿರಾರು ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಹಲವಾರು ಪ್ರಾದೇಶಿಕ ಪಕ್ಷಗಳೂ ಈ ಹಗರಣದಲ್ಲಿ ಪಾಲುದಾರರೇ!!**

ಚುನಾವಣಾ ಬಾಂಡ್‌ಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಬಹಿರಂಗಪಡಿಸಲು ಮೀನ–ಮೇಷ ಎಣಿಸಿದ ದೇಶದ ಅತಿ ದೊಡ್ಡ ಬ್ಯಾಂಕ್ ಎಸ್‌ಬಿಐ, ಸುಪ್ರೀಂ ಕೋರ್ಟಿನಿಂದ ಛೀಮಾರಿ ಹಾಕಿಸಿಕೊಂಡ ಬಳಿಕ 4 ತಿಂಗಳು ಸತಾಯಿಸಿ ಕೊನೆಗೆ ಚುನಾವಣಾ ಆಯೋಗಕ್ಕೆ ವಿವರಗಳನ್ನು ಸಲ್ಲಿಸಿತು. ಎಸ್‌ಬಿಐ ವಿಳಂಬ ಮಾಡಿದ ರೀತಿ ಮತ್ತು ಅದು ಮಂಡಿಸಿದ ಮೊಂಡುವಾದದಿಂದ, ಅದು ತುಂಬಿಸಿಕೊಂಡಿರುವ ಕೊಳಕು ಮತ್ತು ಅದರಲ್ಲಿ ಶಾಮೀಲಾಗಿರುವ ಕೇಂದ್ರ ಸರ್ಕಾರದ ಪಾತ್ರದ ವಾಸನೆ ದೇಶದ ಜನತೆಗೆ ತಲುಪಿತ್ತು. ಚುನಾವಣಾ ಬಾಂಡ್‌ಗಳ ವಿವರಗಳು ಹೊರಬಂದ ಮೇಲೆ ಈಗ ದೇಶದ ಬಂಡವಾಳಶಾಹಿ ವ್ಯವಸ್ಥೆಯ ಕರಾಳ ಸ್ವರೂಪ ಬಟಾಬಯಲಾಗಿದೆ. ಕಾರ್ಪೊರೇಟ್ ಕಂಪನಿಗಳು, ಬಂಡವಾಳಗಾರರಿಂದ ದೊಡ್ಡ ಮೊತ್ತಗಳಲ್ಲಿ ಚುನಾವಣೆಗಳಿಗಾಗಿ ದೇಣಿಗೆ ಪಡೆದ ಬಂಡವಾಳಶಾಹಿಗಳ ಪರ ಪಕ್ಷಗಳ ನಿಜ ಬಣ್ಣ ಕಾಣತೊಡಗಿದೆ. “ನಾನು ತಿನ್ನುವುದಿಲ್ಲ, ತಿನ್ನುವುದಕ್ಕೆ ಬಿಡುವುದಿಲ್ಲ” ಎಂದು ದೇಶಕ್ಕೆ ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದ ನರೇಂದ್ರ ಮೋದಿಯವರ ಬಿಜೆಪಿ ಈ ಚುನಾವಣಾ ಬಾಂಡ್‌ಗಳ ಅತಿ ದೊಡ್ಡ ಫಲಾನುಭವಿ ಪಕ್ಷವಾಗಿದ್ದು ಅತ್ಯಂತ ಕಡು ಭ್ರಷ್ಟ ಪಕ್ಷ ಎಂಬುದು ಸಾಬೀತಾಗಿದೆ. ಚುನಾವಣಾ ಬಾಂಡ್‌ಗಳ ಮೂಲಕ ತಾನು ಹಣ ವಸೂಲಿ ಮಾಡಿದ ಬಂಡವಾಳಗಾರರಿಗೆ ಲಕ್ಷಾಂತರ ಕೋಟಿ ರೂಪಾಯಿಗಳ ಸರ್ಕಾರದ ಗುತ್ತಿಗೆಗಳನ್ನು ದಯಪಾಲಿಸಿದೆ. ಬಿಜೆಪಿಯ ಈ ಲಜ್ಜೆಗಟ್ಟ ನಡೆಯನ್ನು ಖಂಡಿಸಿರುವ ಸಾರ್ವಜನಿಕರು “ಚಂದಾ ಕೊಡು – ದಂಧೆ ಮಾಡು” ಎನ್ನುವ ಸಾಮಾಜಿಕ ಜಾಲತಾಣ ಅಭಿಯಾನವನ್ನು ಮಾಡುವಂತಾಗಿದೆ! ಇನ್ನೊಂದೆಡೆ ವಿರೋಧ ಪಕ್ಷಗಳಾದ ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಮುಂತಾದ ಪಕ್ಷಗಳೂ ಈ ಅಕ್ರಮದಲ್ಲಿ ಭಾಗಿಯಾದ ಕಿರಿಯ ಪಾಲುದಾರರೇ ಆಗಿದ್ದಾರೆ!!

### ಚುನಾವಣಾ ಬಾಂಡ್ ಯೋಜನೆಯನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಜಾರಿಗೊಳಿಸಿದ ನೂತನ ಚುನಾವಣಾ ಬಾಂಡ್ ಯೋಜನೆಯು ದೇಶದಲ್ಲಿ ಭಾರೀ ವಿವಾದವನ್ನು ಸೃಷ್ಟಿ ಮಾಡಿತ್ತು. ಹಲವಾರು ಜನ ಸುಚಿಂತನಾಶೀಲ ವ್ಯಕ್ತಿಗಳು, ಸಾಮಾಜಿಕ ಸಂಘಟನೆಗಳು, ವಿರೋಧ ಪಕ್ಷಗಳು ಈ ಯೋಜನೆಯನ್ನು ತೀವ್ರವಾಗಿ ವಿರೋಧಿಸಿದ್ದರೂ, ಅದಕ್ಕೆ ಕವಡೆ ಕಾಸಿನ ಕಿಮ್ಮತ್ತು ಕೊಡದ ಕೇಂದ್ರ ಸರ್ಕಾರ ತನ್ನ ನಡೆ ಪರಿಶುದ್ಧ ಮತ್ತು ಪ್ರಶ್ನಾತೀತ ಎಂದು ಬಿಂಬಿಸಿಕೊಳ್ಳುತ್ತಾ ಬಂದಿತ್ತು. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಈ ತೀರ್ಪಿನಿಂದ ಕೇಂದ್ರ ಸರ್ಕಾರಕ್ಕೆ ಕಪಾಳ ಮೋಕ್ಷವಾಗಿದ್ದು, ದೊಡ್ಡ ಮುಖಭಂಗವಾಗಿದೆ. ಈಗ ಈ ತೀರ್ಪು ಪ್ರಜ್ಞಾವಂತ ಜನಗಳಲ್ಲಿ ದೊಡ್ಡ ಚರ್ಚೆಯನ್ನು ಹುಟ್ಟು ಹಾಕಿದೆ. ಚುನಾವಣಾ ರಾಜಕೀಯಕ್ಕೆ ಸಂಬಂಧಪಟ್ಟ ಈ ವಿವಾದವನ್ನು, ಇದರ ವಿವಿಧ ಆಯಾಮಗಳನ್ನು ಸಮಾಜದ ಬಗ್ಗೆ ಕಳಕಳಿ ಹೊಂದಿರುವ ಪ್ರತಿಯೊಬ್ಬರೂ ಆಳವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ.

### ಏನಿದು ಚುನಾವಣಾ ಬಾಂಡ್ ಯೋಜನೆ?

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದ ಮೇಲೆ 2016–17ರ ಬಜೆಟ್ ಮಂಡನೆ ಸಂದರ್ಭದಲ್ಲಿ ಪ್ರಥಮ ಬಾರಿಗೆ ಈ ಚುನಾವಣಾ ಬಾಂಡ್ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಲಾಯಿತು. 2018ರ ಜನವರಿ ತಿಂಗಳಲ್ಲಿ ಈ ಯೋಜನೆಗೆ ಕಾನೂನಿನ ರೂಪಕೊಟ್ಟು ಅದನ್ನು ಜಾರಿಗೊಳಿಸಲಾಯಿತು. ಸರ್ಕಾರ ಜಾರಿಗೊಳಿಸಿದ ಈ ಯೋಜನೆಯ ನಿಯಮಗಳ ಪ್ರಕಾರ ದೇಶದ ಅತಿದೊಡ್ಡ ಬ್ಯಾಂಕ್, ಸರ್ಕಾರಿ ಸ್ವಾಮ್ಯದ ಎಸ್‌ಬಿಐ ಮೂಲಕ, ಈ ಚುನಾವಣಾ ಬಾಂಡ್‌ಗಳನ್ನು ಒಂದು ಲಕ್ಷ, ಹತ್ತು ಲಕ್ಷ, ಒಂದು ಕೋಟಿ, ಹೀಗೆ ವಿವಿಧ ಮುಖ ಬೆಲೆಯಲ್ಲಿ ಮಾರಾಟ ಮಾಡಲಾಗುವುದು ಎಂದು ತಿಳಿಸಲಾಯಿತು. ಈ ಬಾಂಡ್‌ಗಳನ್ನು ಖರೀದಿ ಮಾಡಿದವರು ತಮಗೆ ಇಷ್ಟವಾದ ರಾಜಕೀಯ ಪಕ್ಷಗಳಿಗೆ ಅವನ್ನು ದೇಣಿಗೆಯಾಗಿ ನೀಡಬಹುದು. ಈ ಬಾಂಡ್‌ಗಳನ್ನು ಖರೀದಿ ಮಾಡಿದ ರಾಜಕೀಯ ಪಕ್ಷಗಳು ಎಸ್‌ಬಿಐ ಬ್ಯಾಂಕ್‌ನಲ್ಲಿ ನಗದೀಕರಿಸಿಕೊಳ್ಳಬೇಕು. ಪ್ರಜಾಪ್ರತಿನಿಧಿ ಕಾಯ್ದೆ 1951ರ 29 (ಎ) ರಲ್ಲಿ ನೋಂದಣಿ ಹೊಂದಿರುವ ರಾಜಕೀಯ ಪಕ್ಷಗಳು ಅಥವಾ ದೇಶದ ಯಾವುದೇ ವಿಧಾನಸಭೆ ಅಥವಾ ಲೋಕಸಭಾ ಚುನಾವಣೆಗಳಲ್ಲಿ ಕನಿಷ್ಠ ಶೇ.1ರಷ್ಟು ಮತ ಪಡೆದ ರಾಜಕೀಯ ಪಕ್ಷಗಳು ಮಾತ್ರ ಈ ಬಾಂಡ್‌ಗಳನ್ನು ಪಡೆಯಲು ಅರ್ಹತೆ ಹೊಂದಿರುವ ಪಕ್ಷಗಳಾಗಿವೆ. ಬಾಂಡ್‌ಗಳನ್ನು ಪಡೆದ ಪಕ್ಷಗಳು 15 ದಿನಗಳೊಳಗೆ ನಗದೀಕರಿಸಿಕೊಳ್ಳದಿದ್ದರೆ ಪ್ರಧಾನಮಂತ್ರಿ ಪರಿಹಾರ ನಿಧಿಗೆ ಈ 2ನೇ ಪುಟಕ್ಕೆ

# ಚುನಾವಣಾ ಬಾಂಡ್ ಹಗರಣ

1ನೇ ಪುಟದಿಂದ ಹಣ ಸಂದಾಯವಾಗುವಂತೆ ಕಾನೂನು ರೂಪಿಸಲಾಗಿದೆ.

### ಬಿಜೆಪಿ ಸರ್ಕಾರದ ಆಕರ್ಷಕ ವಾದಗಳು

ಈ ಚುನಾವಣಾ ಬಾಂಡ್ ಯೋಜನೆಯನ್ನು ಜಾರಿಗೊಳಿಸುವ ಮುನ್ನ ಬಿಜೆಪಿ ಸರ್ಕಾರ, ಅದು ದೇಶದಲ್ಲಿ 'ಚುನಾವಣಾ ಸುಧಾರಣೆ'ಗಳನ್ನು ತರುವ ತನ್ನ ಯೋಜನೆಯ ಭಾಗವೆಂದು ಬಿಂಬಿಸಿಕೊಂಡಿತು. ಚುನಾವಣೆಯಲ್ಲಿ ಭಷ್ಟಾಚಾರ, ಕಪ್ಪು ಹಣದ ನಿರ್ಮೂಲನೆಗಾಗಿ ಮತ್ತು ಚುನಾವಣೆಗಳಲ್ಲಿ ಖರ್ಚಾಗುವ ಹಣಕ್ಕೆ ಪಾರದರ್ಶಕತೆಯನ್ನು ತರುವುದಕ್ಕಾಗಿ ಹೀಗೆ ಮಾಡಲಾಗುತ್ತಿದೆ ಎಂದು ಕೊಚ್ಚಿಕೊಂಡಿತು. ನಂತರ, ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿದ ಸರ್ಕಾರದ ವಕ್ತಾರರೂ ಕೂಡ ಚುನಾವಣಾ ಬಾಂಡ್‌ಗಳ ಯೋಜನೆಯನ್ನು ಬಲವಾಗಿ ಸಮರ್ಥಿಸುತ್ತಾ, ಇದು ಈ ಹಿಂದಿನ ಚುನಾವಣೆಗಳಲ್ಲಿ ಬಳಕೆಯಾಗುತ್ತಿದ್ದ ಹಣದ ಚಲಾವಣೆಯನ್ನು ನಿರ್ಬಂಧಿಸುವ ಕ್ರಮವಾಗಿದೆ ಎಂದು ಹೇಳಿದರು.

**ವಿಚಿತ್ರ ಮತ್ತು ದುರಂತದ ವಿಷಯವೆಂದರೆ ಬಂಡವಾಳಶಾಹಿ ಮತ್ತು ಕಾರ್ಪೋರೇಟ್ ಕಂಪನಿಗಳಿಂದ ಹರಿದು ಬರುವ ಈ ಹಣ ನೈತಿಕ ನೆಲೆಗಳಲ್ಲಿ ಅಕ್ರಮವಾಗಿದ್ದರೂ, ಬೂರ್ಜ್ವಾ ಕಾನೂನಿನ ಅಡಿಯಲ್ಲಿ ನ್ಯಾಯಸಮ್ಮತವಾಗಿರುವುದು! ಪಂಡಿತರ ಚಾವಡಿಯಲ್ಲಿ ನಡೆಯುತ್ತಿರುವ ಚರ್ಚೆಗಳು ಹೇಳುವುದು, ಕಾರ್ಪೋರೇಟ್ ಕಂಪನಿಗಳಿಂದ, ಬಂಡವಾಳಿಗರಿಂದ ಹಣ ತೆಗೆದುಕೊಳ್ಳಬಾರದೆನ್ನುವುದಲ್ಲ, ಬದಲಾಗಿ ಅದರ ಸ್ವರೂಪ, ಪ್ರಮಾಣ ಪಾರದರ್ಶಕವಾಗಿರಬೇಕೆಂಬುದು!!**

ರಾಜಕೀಯ ಪಕ್ಷಗಳಿಗೆ ಹರಿದು ಬರುವ ಅನಿಯಂತ್ರಿತ ಹಾಗೂ ಲೆಕ್ಕಕ್ಕೆ ಒಳಪಡದ ಹಣದ ಚಲಾವಣೆಗೆ ಪರ್ಯಾಯವಾಗಿ, ನಿಯಂತ್ರಿತ, ಲೆಕ್ಕಕ್ಕೆ ಒಳಪಡುವ ಮತ್ತು ಡಿಜಿಟಲೀಕರಣಗೊಂಡ ಈ ಪದ್ಧತಿ ಪಾರದರ್ಶಕವಾಗಿದೆಯೆಂದೇ ಬಿಂಬಿಸಿಕೊಂಡರು. ಇದು ಆಧುನಿಕ ವ್ಯವಸ್ಥೆಯಲ್ಲಿ ಚುನಾವಣೆ ನಡೆಸಲು ರಾಜ್ಯದ ಅಂದರೆ ಬಂಡವಾಳಶಾಹಿ ವ್ಯವಸ್ಥೆಯ ಹಿತಾಸಕ್ತಿಗಳಿಗನುಗುಣವಾಗಿಯೇ ಈ ಕಾನೂನನ್ನು ತರಲಾಗಿದೆ ಎಂದು ಹೇಳಿಕೊಂಡರು!!!

### ಬಿಜೆಪಿಯ ಇಬ್ಬಗೆಯ ನೀತಿ

ಚುನಾವಣಾ ಸುಧಾರಣೆಗಳ ಭಾಗವಾಗಿ ಚುನಾವಣಾ ಬಾಂಡ್‌ಗಳನ್ನು ತಂದಿರುವುದಾಗಿ ಬಿಜೆಪಿ ಸರ್ಕಾರ ಹೇಳಿಕೊಂಡರೂ, ತಾನು ಘೋಷಿಸಿದ ಎಲ್ಲಾ ನಿಯಮಗಳನ್ನು ತಾನೇ ಗಾಳಿಗೆ ತೂರಿತು. ಪಾರದರ್ಶಕತೆಯ ಬಗ್ಗೆ ಮಾತನಾಡಿದ ಸರ್ಕಾರ ಚುನಾವಣಾ ಬಾಂಡ್‌ಗಳ ದೇಣಿಗೆ ಕೊಡುವ ದಾನಿಗಳ ಹೆಸರನ್ನು ಬಹಿರಂಗಗೊಳಿಸಲಾಗದು ಎಂದು ನಿಯಮ ರೂಪಿಸಿತು. ಇದಕ್ಕೆ ಪೂರಕವಾಗಿ ಈ ಹಿಂದೆ ಇದ್ದ ಹಲವಾರು ಕಾಯ್ದೆಗಳಿಗೆ ತಿದ್ದುಪಡಿ ತರಲಾಯಿತು. 20,000 ರೂ.ಗಳಿಗಿಂತ ಹೆಚ್ಚು ದೇಣಿಗೆ ಪಡೆದ ರಾಜಕೀಯ ಪಕ್ಷಗಳು ಅದರ ಮೂಲವನ್ನು ತಿಳಿಸಬೇಕು ಎನ್ನುವ 1951ರ ಪ್ರಜಾಪ್ರತಿನಿಧಿ ಕಾಯ್ದೆ, ಪಾರದರ್ಶಕತೆ ಕಾಪಾಡುವ ರಿಸರ್ವ್ ಬ್ಯಾಂಕ್ ಕಾಯ್ದೆ 1934, ಆದಾಯ ತೆರಿಗೆ ಕಾಯ್ದೆ 1964, ವಿದೇಶಿ ದೇಣಿಗೆ ನಿಯಂತ್ರಣಾ ಕಾಯ್ದೆ 2018. ಕಂಪನಿ ಕಾಯ್ದೆ 2013 ಇತ್ಯಾದಿ ಎಲ್ಲಾ ಕಾಯ್ದೆಗಳ ಕಾನೂನು ನಿಯಮಗಳನ್ನು ಬದಲಾಯಿಸಲಾಗಿದೆ.

ಈ ಎಲ್ಲಾ ಕಾನೂನುಗಳನ್ನು ಬದಲಾಯಿಸುವ ಕ್ರಮಕ್ಕೆ ಕೇಂದ್ರ ಸರ್ಕಾರ ಮುಂದಾದಾಗ ಅಂದಿನ ಚುನಾವಣಾ ಆಯುಕ್ತರು ಮತ್ತು ರಿಸರ್ವ್ ಬ್ಯಾಂಕ್‌ನ ಉನ್ನತ ಅಧಿಕಾರಿಗಳು, ಹಣಕಾಸು ತಜ್ಞರು ಈ ಕ್ರಮಗಳನ್ನು ತೀವ್ರವಾಗಿ ವಿರೋಧಿಸಿ, ಇವು ಘೋಷಿತ ಉದ್ದೇಶಗಳಿಗೆ ವ್ಯತಿರಿಕ್ತವಾಗಿವೆ ಎಂದು ತಿಳಿಸಿದರೂ ಕೇಂದ್ರ ಸರ್ಕಾರ ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅದಾದ ನಂತರ ಕೆಲವು ಸಾಮಾಜಿಕ ಸಂಘಟನೆಗಳು, ಆರ್‌ಟಿಐ ಕಾರ್ಯಕರ್ತರು, ರಾಜಕೀಯ ಪಕ್ಷಗಳು 2019ರ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಮತ್ತು ಬಿಹಾರ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಈ ಚುನಾವಣಾ ಬಾಂಡ್‌ಗಳ ನಿಯಮಗಳನ್ನು ರದ್ದುಗೊಳಿಸಬೇಕೆಂದು ಕೋರಿ ಸುಪ್ರೀಂಕೋರ್ಟ್‌ಗೆ ಮೊರೆ ಹೋದರು. ಹಾಗೆಯೇ ದೇಣಿಗೆ ನೀಡುವವರ ವಿವರಗಳನ್ನು ಬಹಿರಂಗ ಪಡಿಸಬೇಕು, ಅದನ್ನು ತಿಳಿದುಕೊಳ್ಳುವ ಹಕ್ಕು ಈ ದೇಶದ ಪ್ರಜೆಗಳಿಗೆ ಇದೆ ಎಂದು ಆಗ್ರಹಿಸಿದರು. ಆದರೆ ಈ ವಿಷಯದ ಬಗ್ಗೆ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ ಅಂದಿನ ಮುಖ್ಯ ನ್ಯಾಯಾಧೀಶರಾದ(ಇಂದಿನ ಬಿಜೆಪಿ ರಾಜ್ಯಸಭಾ ಸದಸ್ಯರು) ರಂಜನ್ ಗೊಗೋಯ್ ಅವರು ಇದಕ್ಕೆ ಮಧ್ಯಂತರ ತಡೆ ನೀಡಲು ನಿರಾಕರಿಸಿದರೆ, ಮತ್ತೊಮ್ಮೆ ಇನ್ನೊಬ್ಬ ಮುಖ್ಯ ನ್ಯಾಯಾಧೀಶರಾದ ಎಸ್.ಎ.ಬೋಬ್ಡೆ ಅವರು ಅರ್ಜಿದಾರರ ವಾದದಲ್ಲಿ ಹುರುಳಿಲ್ಲ ಎಂದು ತಳ್ಳಿಹಾಕಿದರು.

### ಬಿಜೆಪಿ ಪಕ್ಷವೇ ದೊಡ್ಡ ಲಾಭ ಪಡೆದ ಫಲಾನುಭವಿ

ಕಳೆದ ಆರು ವರ್ಷಗಳಲ್ಲಿ ಈ ಚುನಾವಣಾ ಬಾಂಡ್‌ಗಳ ಲಾಭ ಪಡೆದ ಅತಿದೊಡ್ಡ ಫಲಾನುಭವಿ ಪಕ್ಷ ಬಿಜೆಪಿಯೇ ಆಗಿದೆ. 2018ರಲ್ಲಿ ಬಹಿರಂಗಗೊಂಡ ಮಾಹಿತಿಯ ಪ್ರಕಾರ ಶೇ. 95ರಷ್ಟು ಗರಿಷ್ಠ ಚುನಾವಣಾ ಬಾಂಡ್‌ಗಳ ರಾಜಕೀಯ ದೇಣಿಗೆ ಪಡೆದ ಪಕ್ಷ ಬಿಜೆಪಿ ಎಂದು ಸಾಬೀತಾಗಿದೆ. 2019–20ರಲ್ಲಿ ರೂ.2550 ಕೋಟಿ, 2020–21 ರಲ್ಲಿ ರೂ.22.385 ಕೋಟಿ, 2021–22ರಲ್ಲಿ ರೂ.1033.70 ಕೋಟಿ, 2022–23 ರಲ್ಲಿ ರೂ.1294.14 ಕೋಟಿಗಳನ್ನು ಸಂಗ್ರಹಿಸಿದ್ದರೆ. ಕಾಂಗ್ರೆಸ್ ಪಕ್ಷವು ಇದೇ ಅವಧಿಯಲ್ಲಿ ಕ್ರಮವಾಗಿ ರೂ.317.861 ಕೋಟಿ, ರೂ.10.073 ಕೋಟಿ, ರೂ.236.0995 ಕೋಟಿ, ರೂ.171.02 ಕೋಟಿಗಳನ್ನು ಸಂಗ್ರಹಿಸಿರುವ ಎರಡನೇ ಅತಿ ದೊಡ್ಡ ಪಕ್ಷವಾಗಿದೆ. ಈಗ ಎಸ್‌ಬಿಐ ನೀಡಿದ ಮಾಹಿತಿ ಪ್ರಕಾರ 2023ರಲ್ಲಿ ಸಂದಾಯವಾದ ಚುನಾವಣಾ ಬಾಂಡ್‌ಗಳ ಒಟ್ಟು ಮೊತ್ತದಲ್ಲಿ ಬಿಜೆಪಿ ಪಕ್ಷಕ್ಕೆ ಶೇ.54ರಷ್ಟು ತಲುಪಿದ್ದು, ಉಳಿದ ಮೊತ್ತ ದೇಶದ ಇತರ ಪಕ್ಷಗಳ ಪಾಲಾಗಿದೆ.

ಈಗ 2024ರ ಲೋಕಸಭಾ ಚುನಾವಣೆಗೆ ಮುಂಚಿತವಾಗಿ ಮತ್ತೆ ಈಗ ಹಿಂದಿನ ತೀರ್ಪುಗಳ ಮರುಪರಿಶೀಲನೆಗೆ ಅರ್ಜಿ ಸಲ್ಲಿಸಲಾಯಿತು. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ಇನ್ನುಳಿದ ನಾಲ್ವರನ್ನೊಳಗೊಂಡ ಐದು ಜನರ ಸಂವಿಧಾನ ಪೀಠವು ಫೆಬ್ರವರಿ 15ರಂದು ಹೊಸ ತೀರ್ಪು ಪ್ರಕಟಿಸಿತು. ಈಗ ಜಾರಿಯಲ್ಲಿರುವ ಚುನಾವಣಾ ಬಾಂಡ್‌ಗಳ ಯೋಜನೆಯಂತೆ ಅನಾಮಧೇಯ ವ್ಯಕ್ತಿಗಳು, ಕಂಪನಿಗಳಿಂದ ದೇಣಿಗೆ ಸಂಗ್ರಹಿಸುವ ಕ್ರಮ ಅಸಂವಿಧಾನಿಕವಾದದ್ದು, ಮಾಹಿತಿ ಹಕ್ಕು ಕಾಯ್ದೆಯ ಉಲ್ಲಂಘನೆಯಾಗಿದ್ದು, ಸಂವಿಧಾನದ ವಿಧಿ 19(1)(a) ಪ್ರಕಾರ ವ್ಯಕ್ತಿ ಸ್ವಾತಂತ್ರ್ಯದ ಮತ್ತು ಅಭಿವ್ಯಕ್ತಿಯ ಉಲ್ಲಂಘನೆಯಾಗುತ್ತದೆ ಎಂದು ಸರ್ವಾನುಮತದ ತೀರ್ಪನ್ನು ಪ್ರಕಟಿಸಿದೆ. ಈ ತೀರ್ಪು ಹೊರಬಂದ ನಂತರ ಚುನಾವಣಾ ಬಾಂಡ್‌ಗಳ ದಾನಿಗಳ ಎಲ್ಲಾ ವಿವರಗಳನ್ನು ಎಸ್‌ಬಿಐ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕೆಂದು, ನಂತರ ಒಂದು ವಾರದಲ್ಲಿ ಚುನಾವಣಾ ಆಯೋಗ ಅದನ್ನು ತನ್ನ ವೆಬ್‌ಸೈಟಿನಲ್ಲಿ ಪ್ರಕಟಿಸಿ ಬಹಿರಂಗಪಡಿಸಬೇಕೆಂದು ಆದೇಶಿಸಲಾಯಿತು. ಈ ಸಂದರ್ಭದಲ್ಲಿ ತನ್ನ ಜವಾಬ್ದಾರಿಗಳಿಂದ ನುಣುಚಿಕೊಳ್ಳಲು ಎಸ್‌ಬಿಐ ಎಲ್ಲಾ ಪ್ರಯತ್ನಗಳನ್ನೂ ಮಾಡಿ ಸುಪ್ರೀಂಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡದ್ದು ಈಗ ದೇಶಕ್ಕೆ ಗೊತ್ತಿರುವ ಸಂಗತಿ. ಈಗ ಅಂತಿಮವಾಗಿ ಸುಪ್ರೀಂಕೋರ್ಟ್ ವಿಧಿಸಿದ ಮಾರ್ಚ್ 12ನೇ ತಾರೀಖಿನ ಗಡುವಿನ ಒಳಗೆ ಎಸ್‌ಬಿಐ ತನ್ನ ಚುನಾವಣಾ ಬಾಂಡ್‌ಗಳ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದು ಮಾರ್ಚ್14ರಂದು ಚುನಾವಣಾ ಆಯೋಗ ತನ್ನ ವೆಬ್‌ಸೈಟ್‌ನಲ್ಲಿ ಆ ವಿವರಗಳನ್ನು ಬಹಿರಂಗಗೊಳಿಸಿದೆ.

ಈಗ ಬಹಿರಂಗಗೊಂಡ ಮಾಹಿತಿಯ ಪ್ರಕಾರ ಆಶ್ಚರ್ಯಕರ ವಿಷಯಗಳು ಬಯಲಾಗಿವೆ! 2019 ರಿಂದ 2024ರ ಅವಧಿಯಲ್ಲಿ ಖರೀದಿಸಲಾದ ಚುನಾವಣಾ ಬಾಂಡ್‌ಗಳ ಒಟ್ಟು ಮೊತ್ತವು ಅಧಿಕೃತವಾಗಿ ರೂ.12,156 ಕೋಟಿಗಳೆಂದು ಗೊತ್ತಾಗಿದ್ದು, ಇದರಲ್ಲಿ ಶೇ. 50ರಷ್ಟು ಬಾಂಡ್‌ಗಳನ್ನು ಕೇವಲ 20 ಕಂಪನಿಗಳು ಖರೀದಿಸಿವೆ. ಅತಿ ಹೆಚ್ಚು ದೇಣಿಗೆ ನೀಡಿದ ಮೊದಲ 5 ಕಂಪನಿಗಳಲ್ಲಿ 3 ಕಂಪನಿಗಳು ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಗಳು ತಮ್ಮ ಮೇಲೆ ದಾಳಿ ಮಾಡುವ ನೋಟಿಸ್‌ಗಳನ್ನು ಪಡೆದ ಮೇಲೆ ಒತ್ತಡಕ್ಕೆ ಒಳಗಾಗಿ ದೇಣಿಗೆ ನೀಡಿವೆ!

### ದೇಣಿಗೆ ನೀಡಿದ ಕಂಪನಿಗಳಿಗೆ ದೊಡ್ಡ ಗುತ್ತಿಗೆಗಳ ಕಾಣಿಕೆ.

ಚುನಾವಣಾ ಆಯೋಗ ತನ್ನ ವೆಬ್‌ಸೈಟಿನಲ್ಲಿ ಪ್ರಕಟಿಸಿದ ಚುನಾವಣಾ ಬಾಂಡ್‌ಗಳ ಮಾಹಿತಿಯ ಪ್ರಕಾರ 966 ಕೋಟಿ ರೂಪಾಯಿ ಮೌಲ್ಯದ ಚುನಾವಣಾ ಬಾಂಡ್‌ಗಳನ್ನು ಖರೀದಿಸಿದ ಮೇಘಾ ಇಂಜಿನಿಯರಿಂಗ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಎರಡನೇ ಗರಿಷ್ಠ ದೇಣಿಗೆ ನೀಡಿದ ಕಂಪನಿ. ಹೈದರಾಬಾದ್ ಮೂಲದ ಈ ಕಂಪನಿ ತಲಾ ಒಂದು ಕೋಟಿ ರೂ. ಮೌಲ್ಯದ 966 ಬಾಂಡ್‌ಗಳನ್ನು ಖರೀದಿಸಿದೆ. ಅದಕ್ಕೆ ಪ್ರತಿಯಾಗಿ ಹಲವು ಲಕ್ಷ ಕೋಟಿ ರೂಪಾಯಿ ಮೌಲ್ಯದ ಸರ್ಕಾರಿ ಯೋಜನೆಗಳ ಗುತ್ತಿಗೆ ಪಡೆದುಕೊಂಡಿದೆ. ಇದರಲ್ಲಿ 1.15ಲಕ್ಷ ಕೋಟಿ ರೂ. ಮೌಲ್ಯದ ಕಾಳೇಶ್ವರಂ ನೀರಾವರಿ ಯೋಜನೆ ಮತ್ತು 14 ಸಾವಿರ ಕೋಟಿ ರೂ. ಮೌಲ್ಯದ ಥಾಣೆ–ಬೊರಿವಿಲಿ ಅವಳಿ ಸುರಂಗ ಮಾರ್ಗ ಯೋಜನೆ ಪ್ರಮುಖವಾದವುಗಳು. ಇದು ಒಂದು ಉದಾಹರಣೆ ಅಷ್ಟೆ. ಹಿಮಪರ್ವತದ ಮೇಲಿನ ಒಂದು ಸಣ್ಣ ಮಂಜಿನಗಡ್ಡೆ!! ದೇಶದಲ್ಲಿ ಹಾದಿ–ಬೀದಿಗಳಲ್ಲಿ ಜನಗಳ ಬಾಯಲ್ಲಿ ಹರಿದಾಡುವ ದೊಡ್ಡ ಕುಳಗಳಾದ ಅಂಬಾನಿ–ಅದಾನಿ ಕಂಪನಿಗಳು ಭಾರತದ ಅತಿದೊಡ್ಡ ಮೂಲಸೌಕರ್ಯಗಳಾದ, ವಿಮಾನ ನಿಲ್ದಾಣಗಳು, ಬಂದರುಗಳು, ರೈಲ್ವೆ ನೆಟ್‌ವರ್ಕ್‌ಗಳನ್ನು ಕಬಳಿಸಿರುವುದು ಗೊತ್ತಿದ್ದರೂ ಬಹಿರಂಗಗೊಂಡ ಚುನಾವಣಾ ಬಾಂಡ್‌ಗಳ ಖರೀದಿದಾರರ ಪಟ್ಟಿಯಲ್ಲಿ ಅವರ ಹೆಸರು ಬಂದಿಲ್ಲವೆಂದರೆ ಮೋಸದ ಜಾಲದ ಆಳ–ಅಗಲ ಕೈಗೆಟುಕುವಂತಿಲ್ಲ ಎಂದು ತಿಳಿಯುತ್ತದೆ! ಕೆಲವು ಕಂಪನಿಗಳು ಸ್ಥಾಪನೆಯಾದ 6 ತಿಂಗಳು ಅಥವಾ 2 ವರ್ಷದೊಳಗೆ ಯಾವುದೇ ವ್ಯವಹಾರ ಮತ್ತು ಲಾಭವಿಲ್ಲದೇ ನೂರಾರು ಕೋಟಿ ರೂಪಾಯಿಗಳನ್ನು ದಾನ ಮಾಡಿವೆ ಎಂಬುದು ಬಹಿರಂಗವಾಗಿದೆ. ಅಂದರೆ ಮೇಲೆ ಹೆಸರಿಸಿದಂತಹ ದೇಶದ ದೊಡ್ಡ ತಿಮಿಂಗಿಲಗಳು ಮರೆಯಲ್ಲಿ ಅಡಗಿಕೊಂಡು ಇಂತಹ ಶೆಲ್ ಕಂಪನಿಗಳನ್ನು ಹುಟ್ಟಿಹಾಕಿರುವಂತಿದೆ.

**ಮೇಘಾ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ (ಎಂಇಐಎಲ್) ಮತ್ತು ಅದರ ಅಧೀನ ಸಂಸ್ಥೆಗಳು ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ಒಟ್ಟು ರೂ.1,226 ಕೋಟಿ ಮೊತ್ತದ ದೇಣಿಗೆ ನೀಡಿವೆ. ಈ ಕಂಪನಿಗಳಿಗೆ ಕೇಂದ್ರ ಸರ್ಕಾರದಿಂದ ಮತ್ತು ಹಲವು ರಾಜ್ಯ ಸರ್ಕಾರಗಳಿಂದ ಒಟ್ಟು ರೂ.1.87 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಗುತ್ತಿಗೆಗಳು ದೊರೆತಿವೆ.**

**ಸಿಬಿಐ, ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಗಳ ಮೂಲಕ ಬೆದರಿಸಿ, ಬಿಜೆಪಿಯು ಹಲವು ಕಂಪನಿಗಳಿಂದ ದೇಣಿಗೆ ವಸೂಲಿ ಮಾಡಿದೆ ಎಂಬುದು ಬಿಜೆಪಿ ವಿರುದ್ಧದ ಇನ್ನೊಂದು ಆರೋಪ. ಕೇಂದ್ರದ ಈ ತನಿಖಾ ಸಂಸ್ಥೆಗಳ ಮೂಲಕ ಕಂಪನಿಗಳ ಮೇಲೆ ಪ್ರಕರಣ ದಾಖಲಿಸಿ, ಶೋಧಕಾರ್ಯ ನಡೆಸಿ ಆನಂತರ ದೇಣಿಗೆ ವಸೂಲಿ ಮಾಡಲಾಗಿದೆ ಎನ್ನಲಾಗುತಿದೆ. ಎಸ್‌ಬಿಐ ಬಹಿರಂಗ ಪಡಿಸಿದ ಮಾಹಿತಿಗಳೂ ತನಿಖಾ ಸಂಸ್ಥೆಗಳ ಶೋಧಕಾರ್ಯದ ನಂತರ ಕಂಪನಿಗಳು ಬಿಜೆಪಿಗೆ ದೇಣಿಗೆ ನೀಡಿವೆ ಎಂಬುದನ್ನು ದೃಢಪಡಿಸಿವೆ. ಚುನಾವಣಾ ಬಾಂಡ್ ಚಾಲ್ತಿಯಲ್ಲಿ ಇದ್ದ ಅವಧಿಯಲ್ಲಿ ದೇಶದ 41 ಕಂಪನಿಗಳ ಮೇಲೆ ಹೀಗೆ ಶೋಧಕಾರ್ಯ ನಡೆಸಲಾಗಿದೆ. ಆ ಶೋಧಕಾರ್ಯದ ನಂತರ ಆ ಕಂಪನಿಗಳು ಬಿಜೆಪಿಗೆ ರೂ.1,698 ಕೋಟಿಯನ್ನು ಚುನಾವಣಾ ಬಾಂಡ್‌ಗಳ ಮೂಲಕ ನೀಡಿವೆ.**

**ಅತಿಹೆಚ್ಚು ದೇಣಿಗೆ ನೀಡಿದ ಫ್ಯೂಚರ್ ಗೇಮಿಂಗ್ ಅಂಡ್ ಹೋಟೆಲ್ ಸರ್ವಿಸಸ್ ಲಿಮಿಟೆಡ್ ತಮಿಳುನಾಡಿನ ಡಿಎಂಕೆಗೆ (ರೂ.509 ಕೋಟಿ), ಪಶ್ಚಿಮ ಬಂಗಾಳದ ಟಿಎಂಸಿಗೆ (ರೂ.540 ಕೋಟಿ), ಆಂಧ್ರಪ್ರದೇಶದ ವೈಎಸ್‌ಆರ್‌ಸಿಗೆ (ರೂ.154 ಕೋಟಿ), ಬಿಜೆಪಿಗೆ (ರೂ.104 ಕೋಟಿ), ಕಾಂಗ್ರೆಸ್‌ಗೆ (ರೂ. 50 ಕೋಟಿ) ದೇಣಿಗೆ ನೀಡಿದೆ. ರೂ.6,000 ಕೋಟಿ ಮೊತ್ತದ ವಂಚನೆ ಪ್ರಕರಣ ಎದುರಿಸುತ್ತಿರುವ ಕಂಪನಿಯಿಂದ ನೂರಾರು ಕೋಟಿ ದೇಣಿಗೆ ಪಡೆದುಕೊಂಡದ್ದು ಏಕೆ ಎಂಬುದಕ್ಕೆ ಬಿಜೆಪಿಯಾದಿಯಾಗಿ, ಈ ಎಲ್ಲಾ ಪಕ್ಷಗಳು ಉತ್ತರ ನೀಡಬೇಕಿದೆ.**

### ಚುನಾವಣೆ ಮತ್ತು ಅಕ್ರಮ ಹಣದ ಸಂಬಂಧ ಹೊಸದೇನಲ್ಲ

ಸ್ವತಂತ್ರ ಭಾರತದ ಮೊದಲ ಚುನಾವಣೆಯಿಂದಲೂ ಮತದಾರರನ್ನು ಸೆಳೆಯಲು ಮತ್ತು ಚುನಾವಣೆಯನ್ನು ಗೆಲ್ಲಲು ಅಕ್ರಮ ಹಣದ ಬಳಕೆಯಲ್ಲಿರುವುದು ಗೊತ್ತಿರುವ ವಿಷಯ. ಆದರೆ ಅದರ ಪ್ರಮಾಣ ಕಡಿಮೆಯಿತ್ತು. ಏಕೆಂದರೆ, ಆ ಹಣವನ್ನು ಪೂರೈಸುತ್ತಿದ್ದ ಅಂದಿನ ಬಂಡವಾಳಗಾರರ ಸಾಮರ್ಥ್ಯ ಮಿತಿಯಲ್ಲಿತ್ತು. 1957 ರಲ್ಲಿ ನಡೆದ "ಮುಂದ್ರಾ ಹಗರಣ" ಎಂದೇ ಕುಖ್ಯಾತಿ ಪಡೆದ, ದೇಶವನ್ನು ತಲ್ಲಣಗೊಳಿಸಿದ್ದ ಪ್ರಕರಣ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಹಗರಣವಾಗಿದೆ. ಕೋಲ್ಕತ್ತಾ ಮೂಲದ ಹರಿದಾಸ್ ಮುಂದ್ರಾ ಎನ್ನುವ ವ್ಯಾಪಾರಿ ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷಕ್ಕೆ ದೇಣಿಗೆ ನೀಡಿ ಅದಕ್ಕೆ ಪ್ರತಿಫಲವಾಗಿ ಕೇಂದ್ರದ ಅರ್ಥಸಚಿವರ ಪ್ರಭಾವ ಬಳಸಿ ನಷ್ಟದಲ್ಲಿದ್ದ ತನ್ನ ಕಂಪನಿಗಳ ಷೇರುಗಳನ್ನು ಸಾರ್ವಜನಿಕ ಸಂಸ್ಥೆ ಎಲ್.ಐ.ಸಿ ಗೆ ಮಾರಾಟ ಮಾಡಿ, ಸುಮಾರು 1.26 ಕೋಟಿಗಳಷ್ಟು ವಂಚನೆ ಮಾಡಿದ್ದರು. ತನಿಖೆಯಿಂದ ಸತ್ಯ ಸಾಬೀತಾದಾಗ ಅಂದಿನ ಅರ್ಥ ಸಚಿವ ಕೆ.ಕೆ. ಕೃಷ್ಣಮಾಚಾರಿ ರಾಜೀನಾಮೆ ಕೊಡಬೇಕಾಯಿತು. ಅದೇ ರೀತಿ, ಕಳೆದ ಆರು–ಏಳು ದಶಕಗಳಲ್ಲಿ ನಡೆದ ಬೋಫೋರ್ಸ್ ಹಗರಣ (1987), ಸೇಂಟ್ ಕಿಟ್ಸ್ ಹಗರಣ(1989), ಹರ್ಷದ್ ಮೆಹ್ತಾ ಭಾಗಿಯಾದ ಷೇರು ಹಗರಣ (1992), ಟೆಲಿಕಾಂ ಹಗರಣ (1996), ಸ್ಟಾಂಪ್ ಪೇಪರ್ ಹಗರಣ(2003), 2ಜಿ ಸ್ಪೆಕ್ಟ್ರಮ್ ಹಗರಣ (2008), ಇತ್ತೀಚಿನ ರಫೇಲ್ ಹಗರಣ ಮುಂತಾದವುಗಳು ದೇಶದ ಗಮನ ಸೆಳೆದ ಕೆಲವು ಹಗರಣಗಳು ಮಾತ್ರ. ಈ ಹಗರಣಗಳ ಗತಿ ಏನಾಯಿತು? ಈ ಎಲ್ಲಾ ಹಗರಣಗಳು ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ಮತ್ತು ಸಾರ್ವಜನಿಕರಿಗೆ ವಂಚನೆ ಮಾಡಿದ ಹಗರಣಗಳಾಗಿವೆ. ಈ ಹಗರಣಗಳಲ್ಲಿ ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್, ಬಿಜೆಪಿ, ಸಮ್ಮಿಶ್ರ ಸರ್ಕಾರಗಳ ಪಾಲುದಾರ ಪಕ್ಷಗಳು ಭಾಗಿಯಾಗಿವೆ. ಹೀಗೆ ಪ್ರತಿ ಚುನಾವಣೆಗಳಿಗೂ ಅಕ್ರಮ ಹಣದ ಆಳ ವಿಸ್ತಾರವಾಗುತ್ತಾ ಹೋಗಿರುವುದು ಮತ್ತು ಅದು ಕಾನೂನುಬದ್ಧವಾಗಿ ಮಾರ್ಪಾಡು ಹೊಂದಿರುವುದನ್ನು ಕಾಣಬಹುದಾಗಿದೆ.

### ಜನತೆಯ ಮುಂದಿರುವ ಸವಾಲು

ಸ್ವಾತಂತ್ರ್ಯಾ ನಂತರದ ಕಳೆದ 77 ವರ್ಷಗಳಲ್ಲಿ ಇಂತಹ ಎಷ್ಟು ಹಗರಣಗಳು ಬಯಲಾಗಿಲ್ಲ? ಅವುಗಳು ಆಯಾ ಚುನಾವಣೆಗಳಲ್ಲಿ ಅಂದಿನ ವಿರೋಧ ಪಕ್ಷಗಳು, ಅಧಿಕಾರದಲ್ಲಿದ್ದ ಪಕ್ಷವನ್ನು ಸೋಲಿಸಲು ಮತ್ತು ತಾವು ಅಧಿಕಾರಕ್ಕೆ ಬರಲು ಪ್ರಚಾರದ ಸಾಧನಗಳಾದವು ಅಷ್ಟೇ. ಜನಗಳಿಗೆ ಸಿಕ್ಕ ಪರಿಹಾರವೇನು? ಇದರಿಂದ ಈ ವ್ಯವಸ್ಥೆಯ ಬದಲಾವಣೆಗೆ ನಡೆದ ಹೋರಾಟಗಳಿಗೆ ಇಂಬು ಸಿಕ್ಕಿತೇ? ಸುಪ್ರಿಂ ಕೋರ್ಟ್ ತೀರ್ಪಿನಿಂದ ಈಗ ಈ ಹಗರಣ ಸುದ್ದಿಯಾಗುತ್ತಿದೆ. ವಿರೋಧ ಪಕ್ಷಗಳು ಇದನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಬಹುದು. ಆದರೆ ಈ ಭ್ರಷ್ಟ ನೀತಿ ತಂದವರಿಗೆ, ಈ ಭ್ರಷ್ಟ, ಅಪವಿತ್ರ ಮೈತ್ರಿಯಲ್ಲಿ ಭಾಗವಹಿಸಿದ ಪಕ್ಷಗಳಿಗೆ, ದೇಶವನ್ನು ಲೂಟಿ ಮಾಡಿದ ಈ ಎಲ್ಲಾ ಕಂಪನಿಗಳು ಮತ್ತು ವ್ಯಕ್ತಿಗಳಿಗೆ ಶಿಕ್ಷೆಯಾಗುವ ಬಗ್ಗೆ ಯಾರೂ ಸೊಲ್ಲೆತ್ತುತ್ತಿಲ್ಲ ಏಕೆ? ಇದು ಜನಗಳ, ಜನಾಂದೋಳನದ ಮುಂದಿರುವ ಸವಾಲು ಅಲ್ಲವೇ? ಈ ಭ್ರಷ್ಟ ವ್ಯವಸ್ಥೆಯನ್ನು ಪೋಷಿಸುತ್ತಿರುವ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಅವುಗಳ ನೀತಿಗಳ ವಿರುದ್ಧ ಹಾಗೂ ಕೊಳೆತು ನಾರುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಪ್ರಬಲ ಜನತಾಂತ್ರಿಕ ಹೋರಾಟಗಳು ಪರ್ಯಾಯವಾಗಬೇಕಿದೆ.

# ಚುನಾವಣೆ ಬಗ್ಗೆ ಕ್ರಾಂತಿಕಾರಿಗಳ ನಿಲುವು

1ನೇ ಪುಟದಿಂದ ಕ್ರಾಂತಿಕಾರಿ ಪಕ್ಷದ ನೇತೃತ್ವದಲ್ಲಿ ಅಧಿಕಾರವನ್ನು ಕೈವಶ ಮಾಡಿಕೊಳ್ಳುವ ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ತನಕ, ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳು ಪ್ರಜಾತಾಂತ್ರಿಕ ಮುಂದಳಗಳನ್ನು ಕಟ್ಟಿ ಚುನಾವಣೆಯಲ್ಲಿ ಪಾಲ್ಗೊಳ್ಳುತ್ತಾರೆ.....

ಕ್ರಾಂತಿ ಸಾಕಾರಗೊಳ್ಳುವ ತನಕ, ಜನರಿಗೆ ಚುನಾವಣೆಗಳು ಬೇಕೋ ಬೇಡವೋ, ಅವರಿಗೆ ಇಚ್ಛೆ ಇದೆಯೋ ಇಲ್ಲವೋ, ಅವರನ್ನು ಅವುಗಳೆಡೆಗೆ ಸೆಳೆಯಲಾಗುತ್ತದೆ, ಅವುಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಕ್ರಾಂತಿ ಎಂದರೆ, ಜನರಿಗೆ ಚುನಾವಣೆಗಳ ಅಗತ್ಯ ಇಲ್ಲ ಎಂದು ಮನವರಿಕೆಯಾಗಿರುವ ಘಟ್ಟ; ಅವರೆಲ್ಲರೂ ಸಂಘಟಿತರಾಗಿ, ಸಂಘಟಿತ ರೀತಿಯಲ್ಲಿ ಚುನಾವಣೆಗಳನ್ನು ಬಹಿಷ್ಕರಿಸಿ, ನಕಾರಾತ್ಮಕವಾಗಲ್ಲದೆ, ಸಕರಾತ್ಮಕವಾಗಿ, "ಚುನಾವಣೆಗಳು ಬೇಡವೇ ಬೇಡ, ಅಧಿಕಾರವನ್ನು ಕಸಿದುಕೊಳ್ಳಿ." ಎಂದು ಹೇಳುತ್ತಾ ಅಧಿಕಾರವನ್ನು ಕಸಿದುಕೊಳ್ಳುವ ಹಂತವನ್ನು ತಲುಪಿರುವ ಘಟ್ಟ. ಆಗ ಮಾತ್ರವೇ, ಚುನಾವಣೆಯಲ್ಲಿ ಪಾಲ್ಗೊಳ್ಳುವುದು ನಿಷ್ಫಲವೂ, ಅನಗತ್ಯವೂ ಆಗುತ್ತದೆ.

ಇಲ್ಲದಿದ್ದರೆ ಜನರು ಮತ್ತೆಮತ್ತೆ ಚುನಾವಣೆಯ ಜಾಲದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಹಾಗಾಗಿ, ಜನರೊಂದಿಗೇ ಇರುವ ಉದ್ದೇಶದಿಂದ ಕ್ರಾಂತಿಕಾರಿಗಳೂ, ಕ್ರಾಂತಿಕಾರಿಗಳಲ್ಲದೇ ಇರುವವರೂ, ಎಲ್ಲರೂ ಚುನಾವಣೆಯಲ್ಲಿ ಪಾಲ್ಗೊಳ್ಳಲೇ ಬೇಕಾಗುತ್ತದೆ. ನೈಜ ಕ್ರಾಂತಿಕಾರಿಗಳೂ ಹೀಗೆ ಮಾಡಲೇಬೇಕಾಗುತ್ತದೆ.......ತಮ್ಮದೇ ಸತ್ಯ ಎನ್ನುವ ಪಂಥೀಯ ಬಣದವರು, ವಾಸ್ತವದಲ್ಲಿ ಕ್ರಾಂತಿಕಾರಿ ರಾಜಕೀಯವನ್ನು ಅನುಷ್ಠಾನದಲ್ಲಿ ತರದವರು, ಇವರು ಮಾತ್ರವೇ ಚುನಾವಣೆಯಲ್ಲಿ ಪಾಲ್ಗೊಳ್ಳಲು ಹಿಂಜರಿದು ಅದರಲ್ಲಿ ಭಾಗವಹಿಸದೇ ಇರಬಹುದು. ಇವರ ಹೊರತಾಗಿ ಮಿಕ್ಕೆಲ್ಲರೂ ಪಾಲ್ಗೊಳ್ಳಲೇ ಬೇಕಾಗುತ್ತದೆ. ಹಾಗೆಂದ ಮಾತ್ರಕ್ಕೇ, ಚುನಾವಣೆಯಲ್ಲಿ ಪಾಲ್ಗೊಳ್ಳುವವರೆಲ್ಲರ ಧೋರಣೆಯೂ ಒಂದೇ ಎಂದರ್ಥವೇ?

ಹೊರನೋಟಕ್ಕಂತೂ ಪ್ರತಿಯೊಬ್ಬರೂ ಚುನಾವಣೆಯಲ್ಲಿ ಭಾಗಿಯಾಗುತ್ತಾರೆ.... ನಾನೂ ಭಾಗಿಯಾಗುತ್ತೇನೆ, ಕ್ರಾಂತಿಕಾರಿ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳಾದ ನಾವೂ ಭಾಗಿಯಾಗುತ್ತೇವೆ; ಹೊರನೋಟಕ್ಕಂತೂ, ಸೋಷಲ್ ಡೆಮಾಕ್ರಟ್‌ಗಳು, ನೈಜ ಮಾರ್ಕ್ಸ್‌ವಾದಿಗಳು, ಬಂಡವಾಳಶಾಹಿ ಪಕ್ಷಗಳು, ಮಿಥ್ಯಾ ಸಮಾಜವಾದಿಗಳು, ಎಲ್ಲರೂ ಒಂದೇ ತರಹ ಕಾಣುತ್ತಾರೆ. ಮತ್ತೆ, ಪ್ರತಿಯೊಂದು ಪಕ್ಷದವರೂ ನಾವೇ ಸರಿ, ವಿರೋಧ ಪಕ್ಷದವರೇ ತಪ್ಪು ಎನ್ನುತ್ತಾರೆ. ನಾನು ಸರಿಯಿರುವ ಕಾರಣ, ವಿರೋಧ ಪಕ್ಷದವರನ್ನು ಸೋಲಿಸಲು ನಡೆಸುವ ಯಾವುದೇ ನಡೆ ಅಥವಾ ಮಾಡುವ ತಂತ್ರ ಸಮರ್ಥನೀಯ ಎನ್ನುತ್ತಾರೆ. ನಿಮ್ಮ ವಾದವೂ ಹೀಗೇ ಇದ್ದರೆ, ಆಗ,




ನಿಮ್ಮ ಮತ್ತು ಬಂಡವಾಳಶಾಹಿಗಳ ನಿಲುವುಗಳಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ವಾಸ್ತವದಲ್ಲಿ, ನಿಮ್ಮ ಈ ಧೋರಣೆ ತಪ್ಪು ಎನ್ನುವುದನ್ನು ಒಂದು ಆಳವಾದ ವಿಶ್ಲೇಷಣೆ ತೋರಿಸಿಕೊಡುತ್ತದೆ.....

ಬಂಡವಾಳಶಾಹಿ ಪಕ್ಷಗಳ ಮುಖ್ಯ ಉದ್ದೇಶವೇ ಯಾವುದೇ ರೀತಿಯಲ್ಲಾದರೂ ಗರಿಷ್ಠ ಸಂಖ್ಯೆಯ ಸ್ಥಾನಗಳನ್ನು ದೋಚಿಕೊಂಡು ಅಧಿಕಾರದ ಗದ್ದುಗೆಯನ್ನೇರುವುದು. ಅಧಿಕಾರವನ್ನು ವಶ ಪಡಿಸಿಕೊಂಡ ಬಳಿಕ, ಪ್ರಸಕ್ತ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಅವರು ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಳ್ಳುತ್ತಾರೆ, ಸುಳ್ಳು ನೆಪಹೂಡಿ ಘೋಷಣೆ ಕೂಗುತ್ತಾರೆ. ಪ್ರಸಕ್ತ ವ್ಯವಸ್ಥೆಯನ್ನೇ ಮುಂದುವರೆಸಿಕೊಂಡು ಹೋಗುವ ಉದ್ದೇಶದಿಂದ, ಕೆಲಕಾಲದವರೆಗಾದರೂ ಜನರನ್ನು ಗೊಂದಲಕ್ಕೀಡುಮಾಡುವ ಮತ್ತು ಅವರನ್ನು ಮೋಸಗೊಳಿಸುವ ದೃಷ್ಟಿಯಿಂದ ಒಂದು ಪ್ರಗತಿಪರ ಮುಖವಾಡ ಧರಿಸಲು ಅವರು ಯಾವುದೇ ರೀತಿಯ ಪ್ರಚಾರಕ್ಕಾದರೂ ಮೊರೆಹೋಗುತ್ತಾರೆ. ಹಾಗಾಗಿ, ಕಪಟ–ಮೋಸದಿಂದಾದರೂ ಸರಿಯೇ, ಹೇಗಾದರೂ ಮಾಡಿ ಚುನಾವಣೆಯಲ್ಲಿ ಗರಿಷ್ಠ ಸಂಖ್ಯೆಯ ಸ್ಥಾನಗಳನ್ನು ಗಿಟ್ಟಿಸಿಕೊಳ್ಳುವುದೇ ಅವರ ಮುಖ್ಯ ಉದ್ದೇಶ. ಇದಕ್ಕೆ ವ್ಯತಿರಿಕ್ತವಾಗಿ, ಕ್ರಾಂತಿಕಾರಿ ಉದ್ದೇಶದಿಂದ, ಜನರ ಮಧ್ಯೆಯೇ ಇರುವ ಅವಶ್ಯಕತೆಯ ಅನಿವಾರ್ಯತೆಯಿಂದ ಕಾರ್ಮಿಕವರ್ಗದ ಪಕ್ಷ ಚುನಾವಣೆಯಲ್ಲಿ ಪಾಲ್ಗೊಂಡರೆ, ಅದು, ಜನಕ್ರಾಂತಿಯ ರಾಜಕೀಯ ನಿಲುವಿನ ಆಧಾರದ ಮೇಲೆ ಇದನ್ನು ಮಾಡುತ್ತದೆ. ಅದು ಗರಿಷ್ಠ ಸ್ಥಾನ ಗಳಿಸಲು ಶತಪ್ರಯತ್ನವನ್ನಂತೂ ಮಾಡುತ್ತದೆ, ಆದರೆ, ಹೇಗಾದರೂ ಮಾಡಿ ಗರಿಷ್ಠ ಸ್ಥಾನ ಗಳಿಸುವುದು ಅದರ ಉದ್ದೇಶವಾಗಿರುವುದಿಲ್ಲ. ಜನಕ್ರಾಂತಿಯ ರಾಜಕೀಯ ನಿಲುವಿನ ಆಧಾರದಲ್ಲಿ ಚುನಾವಣೆಯನ್ನು ಎದುರಿಸುವುದು ಹೇಗೆ ಎಂದು ಜನರಲ್ಲಿ ಅರಿವನ್ನು ಮೂಡಿಸುವುದೇ ಕ್ರಾಂತಿಕಾರಿ ಪಕ್ಷದ ಕೇಂದ್ರಬಿಂದುವಾಗಿದ್ದು, ಈ ನಿಟ್ಟಿನಲ್ಲಿ ನಮಗೆ ಗರಿಷ್ಠ ಸ್ಥಾನಗಳನ್ನು ಗೆಲ್ಲಲಾದರೆ, ಒಳ್ಳೆಯದೇ. ಹಾಗಿಲ್ಲದೆ, ನಮಗೆ ಒಂದೂ ಸ್ಥಾನ ಸಿಗದೆ ಹೋದರೂ ಪರವಾಗಿಲ್ಲ.....ಆದರೆ, ಮುಖ್ಯ ವಿಷಯ, ಕೇಂದ್ರಬಿಂದು ಎಂದರೆ, ಹೇಗಾದರೂ ಮಾಡಿ ಕೆಲ ಸ್ಥಾನಗಳನ್ನು ಗಳಿಸುವುದು ಎಂಬರ್ಥದಲ್ಲಿ ಅಲ್ಲವೇ ಅಲ್ಲ.

ಚುನಾವಣೆ ಸಂದರ್ಭದಲ್ಲಿ ನಾವು ಜನರೆಡೆಗೆ ಕೊಂಡೊಯ್ಯಬೇಕಾಗಿರುವ ಸಮೂಹ ಧೋರಣೆ ಮತ್ತು ಸಮೂಹಶೈಲಿಯ ಕಾರ್ಯಗಳು, ಕ್ರಾಂತಿಕಾರಿ ರಾಜಕೀಯ ನಿಲುವು, ಇವು ಏನೇನು? ನಾನು ಜನರೆಡೆಗೆ ಈ ಸಂದೇಶವನ್ನು ಕೊಂಡೊಯ್ಯುತ್ತೇನೆ: ನೀವು ಚುನಾವಣೆಯಲ್ಲಿ ಪಾಲ್ಗೊಳ್ಳುತ್ತಿರುವುದರಿಂದ, ಇದನ್ನು ಕ್ರಾಂತಿಕಾರಿ ರಾಜಕೀಯದ ಆಧಾರದ ಮೇಲೆ, ಜನರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಹೀಗೆ ಮಾಡುವಾಗ ನೀವೇ ಸ್ವತ: ನಿಮ್ಮ ನೆಲೆಯನ್ನು ಕಾಪಿಟ್ಟುಕೊಳ್ಳಬೇಕಾಗುತ್ತದೆ. ನೀವು ಎಷ್ಟೇ ಸ್ಥಾನಗಳನ್ನಾದರೂ ಪಡೆಯಿರಿ, ನಿಮಗೆ ಸಾಧ್ಯವಾಗುವಷ್ಟನ್ನು, ವಾದಕ್ಕಾಗಿ ಎಲ್ಲವನ್ನೂ ಅಂದುಕೊಳ್ಳೋಣ, ಅವನ್ನು ಈ ನಿಲುವಿನ ಆಧಾರದ ಮೇಲೆಯೇ ಪಡೆಯಿರಿ; ಈ ನಿಲುವಿನ ಆಧಾರದಲ್ಲಿ ಮಾತ್ರ ಎಂಬ ಅಂಶವನ್ನು ನೀವು ಯಾವ ಪರಿಸ್ಥಿತಿಯಲ್ಲೂ ಗೊಂದಲಗೊಳಿಸಿಕೊಳ್ಳತಕ್ಕದ್ದಲ್ಲ. ಬದಲಿಗೆ, ನೀವು, 'ವೈರಿಯನ್ನು ಸೋಲಿಸಲು ಏನು ಬೇಕಾದರೂ ಮಾಡಿ, ಎಲ್ಲವನ್ನೂ ಮಾಡಿ' ಎಂಬ ಭೂತ ತಂದರೆ, ಆಗ ನೀವೂ ಸಹ ವೈರಿಯನ್ನು ಹೋರಾಡುವ ನೆಪದಲ್ಲಿ, ಬಂಡವಾಳಶಾಹಿಗಳು ಚುನಾವಣೆಯನ್ನು ಗೆಲ್ಲಲು ಬಳಸುವ ಅದೇ ವಿಧಾನಕ್ರಮವನ್ನು ಮತ್ತು ತಂತ್ರಗಳನ್ನೇ ಕ್ರಾಂತಿಕಾರಿ ಮುಖವಾಡ ಧರಿಸಿ ಅಳವಡಿಸಲು ಪ್ರಯತ್ನಿಸುತ್ತಿದ್ದೀರಿ ಎಂಬಂತೆ ಆಗುತ್ತದೆ."

## ಕಾರ್ಲ್ ಮಾರ್ಕ್ಸ್‌ರಿಗೆ ಚಾರ್ಲ್ಸ್ ಡಾರ್ವಿನ್‌ರ ಪತ್ರ



**ವಿಕಾಸವಾದ ಸಿದ್ಧಾಂತದ ಪಿತಾಮಹ ಚಾರ್ಲ್ಸ್ ಡಾರ್ವಿನ್‌ರವರಿಗೆ ಮಹಾನ್ ತತ್ವಜ್ಞಾನಿ ಕಾರ್ಲ್ ಮಾರ್ಕ್ಸ್‌ರವರು ತಮ್ಮ ಅಮೋಘ ಕೃತಿ 'ಬಂಡವಾಳ'ವನ್ನು ಉಡುಗೊರೆಯಾಗಿ ಕಳುಹಿಸಿದ್ದರು. ಅದನ್ನು ಸ್ವೀಕರಿಸಿದ ಡಾರ್ವಿನ್‌ರವರ ಪ್ರತಿಕ್ರಿಯೆ ಹೀಗಿದೆ:**

"ಬಂಡವಾಳ ಕುರಿತ ತಮ್ಮ ಮಹಾನ್ ಕೃತಿಯನ್ನು ಕಳುಹಿಸಿ ನನಗೆ ಗೌರವ ನೀಡಿದಕ್ಕಾಗಿ ತಮಗೆ ಆಭಾರಿಯಾಗಿದ್ದೇನೆ; ರಾಜಕೀಯ ಆರ್ಥಿಕತೆಯ ಬಗ್ಗೆ ಗಹನವಾಗಿರುವ ಮತ್ತು ಪ್ರಾಮುಖ್ಯತೆ ಇರುವ ಈ ವಿಷಯದ ಕುರಿತು ಇನ್ನೂ ಹೆಚ್ಚು ತಿಳಿದುಕೊಂಡು ಈ ಕೊಡುಗೆಯನ್ನು ಸ್ವೀಕರಿಸಲು ನಾನು ಇನ್ನಷ್ಟು ಅರ್ಹನಾಗಿರಬೇಕಿತ್ತು ಎಂದು ನಾನು ಮನಸಾರೆ ಆಶಿಸುತ್ತೇನೆ. ನಮ್ಮ ಅಧ್ಯಯನಗಳು ಇಷ್ಟೊಂದು ಭಿನ್ನವಾಗಿದ್ದರೂ, ನಾವಿಬ್ಬರೂ ಸಹ ಜ್ಞಾನದ ವಿಕಾಸವನ್ನು ಮನ:ಪೂರ್ವಕವಾಗಿ ಬಯಸುತ್ತೇವೆ ಹಾಗೂ ಈ ಅಧ್ಯಯನ ಕಾಲಾಂತರದಲ್ಲಿ ಮನುಕುಲದ ಸಂತೋಷವನ್ನು ಹೆಚ್ಚಿಸುತ್ತದೆ ಎಂದು ನಾನು ನಂಬುತ್ತೇನೆ."

## ಪ್ಯಾಲೆಸ್ತೀನ್ ನರಮೇಧದಲ್ಲಿ ಭಾರತದ ಸಹಭಾಗಿತ್ವ : ನಾಗರಿಕ ಸಮಾಜದ ತೀವ್ರ ಖಂಡನೆ!

'ಪ್ಯಾಲೆಸ್ತೀನ್‌ಗಾಗಿ ಭಾರತೀಯರು' ಎಂಬ ನಾಗರಿಕರ ಸಂಘದ ವತಿಯಿಂದ ದಿನಾಂಕ 23–02–2024 ರಂದು ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್ ಆಫ್ ಇಂಡಿಯಾದಲ್ಲಿ ಸಭೆ ಸೇರಿದ್ದ ಖ್ಯಾತ ಅರ್ಥಶಾಸ್ತ್ರಜ್ಞರು, ನಾಗರಿಕ ಸಮಾಜದ ಮುಖಂಡರು, ಕಾರ್ಮಿಕ ಸಂಘಟನೆಗಳ ನಾಯಕರು, ವಕೀಲರು ಮತ್ತು ರಾಜಕೀಯ ನಾಯಕರು, ಇಸ್ರೇಲ್ ನಡೆಸುತ್ತಿರುವ ಪ್ಯಾಲೆಸ್ತೀನಿಯನ್ನರ ನರಮೇಧ ಮತ್ತು ಅದರಲ್ಲಿ ಭಾರತ ಮತ್ತು ಜಗತ್ತಿನ ಇತರೆ ದೇಶಗಳ ನಾಯಕರ ಸಹಭಾಗಿತ್ವದ ಕುರಿತು ಚರ್ಚಿಸಿದರು.

ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಆನಂದ್ ಗ್ರೋವರ್, "ಪ್ಯಾಲೆಸ್ತೀನ್‌ನಲ್ಲಿ ಇಸ್ರೇಲ್ ನಡೆಸುತ್ತಿರುವ ನರಮೇಧದ ಕುರಿತು ನಾವು ಮಾತನಾಡುತ್ತಿರುವ ಈ ಸಂದರ್ಭದಲ್ಲಿ, ಅಂತರರಾಷ್ಟ್ರೀಯ ನ್ಯಾಯಾಲಯವು (ICJ) ಪ್ಯಾಲೆಸ್ತೀನ್ ಮೇಲಿನ ದಾಳಿ ನಿಲ್ಲಿಸುವಂತೆ ಮಧ್ಯಂತರ ಆದೇಶ ನೀಡಿದ್ದರೂ, ಇಸ್ರೇಲ್‌ನಿಂದ ಗಾಜ಼ಾ ಮೇಲಿನ ಸತತವಾದ ದಾಳಿ ಮುಂದುವರೆದಿದೆ. ಮಧ್ಯಂತರ ಆದೇಶಕ್ಕೆ ಯಾವುದೇ ಕಿಮ್ಮತ್ತಿಲ್ಲ" ಎಂದು ಹೇಳಿದರು. ಜನವರಿ 26ರಂದು ಅಂತರರಾಷ್ಟ್ರೀಯ ನ್ಯಾಯಾಲಯ ತನ್ನ ಮಧ್ಯಂತರ ಆದೇಶದಲ್ಲಿ, ಗಾಜಾ ಪಟ್ಟಿಯಲ್ಲಿರುವ ಪ್ಯಾಲೆಸ್ತೀನಿಯರ ನರಮೇಧಕ್ಕೆ ಸಂಬಂಧಿಸಿದಂತೆ, ನೇರ ಮತ್ತು ಸಾರ್ವಜನಿಕ ಪ್ರಚೋದನೆಯನ್ನು ತಡೆಯಲು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಲು ಇಸ್ರೇಲ್ ತನ್ನ ಅಧಿಕಾರದೊಳಗಿನ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದನ್ನು ಉಲ್ಲೇಖಿಸಿ ಅವರು ಮಾತನಾಡುತ್ತಿದ್ದರು.

ದಿ ವೈರ್‌ನ ಸಂಸ್ಥಾಪಕ ಸಿದ್ಧಾರ್ಥ್ ವರದರಾಜನ್ ಮಾತನಾಡುತ್ತಾ, "ಪ್ಯಾಲೆಸ್ತೀನ್ ನರಮೇಧದ ವಿಷಯದಲ್ಲಿ ಅಮೆರಿಕಾ ಅತ್ಯಂತ ದೊಡ್ಡ ಅಪರಾಧಿ. ಭಾರತವೂ ಕೂಡ" ಎಂದರು. ಭಾರತವನ್ನು 'ವಿಶ್ವ ಮಿತ್ರ' ಎಂದು ಬಣ್ಣಿಸುವ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವರಾದ ಎಸ್. ಜೈಶಂಕರ್‌ರ ಹೇಳಿಕೆಯನ್ನು ಉಲ್ಲೇಖಿಸುತ್ತಾ, "ಪ್ಯಾಲೆಸ್ತೀನ್‌ನಲ್ಲಿ ನಡೆಯುತ್ತಿರುವ ವಿದ್ಯಮಾನದ ಕುರಿತಾದ ಸತ್ಯವನ್ನು ಹೇಳಲು ಬಯಸದಿರುವ ನೀವು ಎಂಥಾ ಮಿತ್ರ?" ಎಂದು ಪ್ರಶ್ನಿಸಿದರು.



ಖ್ಯಾತ ಅರ್ಥಶಾಸ್ತ್ರಜ್ಞ ಜೀನ್ ಡ್ರೇಜ್, ಪ್ಯಾಲೆಸ್ತೀನ್‌ನಲ್ಲಿ ನಡೆಯುತ್ತಿರುವ ನರಮೇಧದಲ್ಲಿ ಭಾರತ ಸರ್ಕಾರ ಕೂಡ ಭಾಗಿದಾರ ಎಂದು ಆರೋಪಿಸುತ್ತಾ, ಇಸ್ರೇಲ್, ತನ್ನ ದೇಶದಲ್ಲಿ ಪ್ಯಾಲೆಸ್ತೀನಿಯರ ಕೆಲಸದ ಪರವಾನಿಗೆಯನ್ನು ಅಮಾನತ್ತುಗೊಳಿಸಿರುವುದರಿಂದ, ಅಲ್ಲಿಗೆ ಭಾರತದ ಕಾರ್ಮಿಕರನ್ನು ಕಳುಹಿಸುವ ನೇಮಕಾತಿ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಸುಗಮಗೊಳಿಸುತ್ತಿದೆ ಎಂದರು. ಜೊತೆಗೆ ಅವರು, "ಪ್ಯಾಲಿಸ್ತೇನಿಯರ ವಿರುದ್ಧ ಬಳಸಬಹುದಾದ ಮಿಲಿಟರಿ ಡ್ರೋನ್ ಸೇರಿದಂತೆ ಇನ್ನಿತರ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಭಾರತ ಮತ್ತು ಇಸ್ರೇಲಿ ಸಹಭಾಗಿತ್ವದ ಕೈಗಾರಿಕೆಗಳಿಗೆ ಭಾರತ ಸರ್ಕಾರ ಸಬ್ಸಿಡಿ ನೀಡುತ್ತಿದೆ" ಎಂದು ಹೇಳಿದರು.

ಭಾರತದ ಪ್ರಮುಖ ಬಂದರುಗಳಲ್ಲಿ ಕೆಲಸ ಮಾಡುವ 3,500ಕ್ಕೂ ಹೆಚ್ಚು ಕಾರ್ಮಿಕರನ್ನು ಒಳಗೊಂಡಿರುವ ವಾಟರ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಶನ್ ಆಫ್ ಇಂಡಿಯಾ ಕಾರ್ಮಿಕ ಸಂಘಟನೆಯು, ಇಸ್ರೇಲ್ ಅಥವಾ ಇನ್ನಾವುದೇ ದೇಶದಿಂದ ಬರುವ, ಪ್ಯಾಲೆಸ್ತೀನ್ ವಿರುದ್ಧ ಬಳಸುವ ಮಿಲಿಟರಿ ಉಪಕರಣಗಳನ್ನು ಲೋಡ್ ಮಾಡಲು ಅಥವಾ ಇಳಿಸಲು ನಿರಾಕರಿಸಿದೆ ಎಂಬುದನ್ನು ಈ ಸಭೆಯಲ್ಲಿ ಉಲ್ಲೇಖಿಸಲಾಯಿತು. (ಮೂಲ: 24.02.24ರಂದು ಬಿಡುಗಡೆಗೊಂಡ ಸಂಘದ ಕರಪತ್ರ)

# ಮಹಾನ್ ಲೆನಿನ್ – ಒಂದು ಸಂಕ್ಷಿಪ್ತ ಯಶೋಗಾಥೆ – ಭಾಗ 3

*[ಕಳೆದ ಸಂಚಿಕೆಯಲ್ಲಿ ಲೆನಿನ್‌ರ ಜೀವನದ ಸಂಕ್ಷಿಪ್ತ ಯಶೋಗಾಥೆಯ ಎರಡನೆಯ ಭಾಗವನ್ನು ಪ್ರಕಟಿಸಲಾಗಿತ್ತು. ಇಲ್ಲಿ ಈಗ ಮೂರನೆಯ ಮತ್ತು ಅಂತಿಮ ಕಂತನ್ನು ಓದುಗರ ಮುಂದೆ ಇಡಲಾಗುತ್ತಿದೆ.]*

### ಸೋವಿಯತ್‌ಗಳ ಪ್ರಾಮುಖ್ಯತೆ

1905ರಲ್ಲೇ ಸೋವಿಯತ್(ಜನ ಸಮಿತಿ)ಗಳು ಉದಯಿಸಿದ್ದವು. ಆರಂಭದಲ್ಲಿ ಇವುಗಳಲ್ಲಿ ಕಾರ್ಮಿಕರು ಮಾತ್ರ ಇರುತ್ತಿದ್ದರು. 1917ರಲ್ಲಿ ಇವುಗಳಲ್ಲಿ ಸೈನಿಕರೂ ಸಹ ಸೇರಿಕೊಂಡರು. ಈ ಸೋವಿಯತ್‌ಗಳೇ ಜನತೆಯ ಪರ್ಯಾಯ ರಾಜಕೀಯ ಶಕ್ತಿ, ಸಶಸ್ತ್ರ ಸಂಘರ್ಷ ನಡೆಸಲು ಆಯುಧ ಮತ್ತು ಹೊಸ ಸಮಾಜವಾದಿ ರಾಜ್ಯದ ಆರಂಭಿಕ ಹಂತ. 'ಸೋವಿಯತ್‌ಗಳೇ ಹೊಸ ರಾಜ್ಯ ಶಕ್ತಿ. ಮೊದಲಿಗೆ ಇದು ಕಾರ್ಮಿಕರು ಮತ್ತು ರೈತರಿಗೆ ಸಶಸ್ತ್ರ ಬಲವನ್ನು ನೀಡುತ್ತದೆ. ಆದರೆ, ಈ ಬಲವು ಹಿಂದಿನ ಸೈನ್ಯದಂತೆ ಜನರಿಂದ ವಿಚ್ಛೇದಿತವಾಗಿಲ್ಲ. ಬದಲಿಗೆ, ಜನತೆಯೊಂದಿಗೆ ಅನ್ಯೋನ್ಯ ಬಾಂಧವ್ಯವನ್ನು ಹೊಂದಿದೆ......... ಈ ಕ್ರಾಂತಿಯ ಅತ್ಯಂತ ಅಪೂರ್ವವಾದ ಗುಣಲಕ್ಷಣವೇನೆಂದರೆ, ಇದು ಎರಡು ರಾಜ್ಯ ಶಕ್ತಿ(Dual Power)ಗಳಿಗೆ ಜನ್ಮ ನೀಡಿದೆ. ಬಂಡವಾಳಶಾಹಿಗಳ ಹಂಗಾಮಿ ಸರ್ಕಾರದ ಜೊತೆಯಲ್ಲಿಯೇ ಇನ್ನೊಂದು ಸರ್ಕಾರವು ಹುಟ್ಟಿಕೊಂಡಿದೆ. ಅದು ಇಲ್ಲಿಯ ತನಕವೂ ದುರ್ಬಲವಾಗಿತ್ತು. ಆದರೆ, ಈಗ ಅದು ಸ್ಪಷ್ಟವಾಗಿ ಅಸ್ತಿತ್ವದಲ್ಲಿದೆ ಮತ್ತು ಬೆಳೆಯುತ್ತಲಿದೆ. ಅದೇ ಕಾರ್ಮಿಕರ ಮತ್ತು ಯೋಧರ ಸೋವಿಯತ್‌ಗಳು"(ದಿ ಡ್ಯುಯಲ್ ಪವರ್, ಸಂಗ್ರಹ ಕೃತಿಗಳು ಸಂಪುಟ 24) ಎಂದು ಲೆನಿನ್ ವಿಶ್ಲೇಷಿಸಿದರು.

### ಏಪ್ರಿಲ್ ಮಹಾಪ್ರಬಂಧ ಮತ್ತು ಕ್ರಾಂತಿಗೆ ಕರೆ

"ಪ್ರತಿಯೊಂದು ಕ್ರಾಂತಿಯ ಮೂಲ ಪ್ರಶ್ನೆಯೇ ರಾಜ್ಯಾಧಿಕಾರವನ್ನು ಕುರಿತಾದದ್ದು. ಇದನ್ನು ಅರ್ಥ ಮಾಡಿಕೊಳ್ಳದಿದ್ದರೆ ಕ್ರಾಂತಿಯನ್ನು ಮುನ್ನಡೆಸುವ ಮಾತು ಹಾಗಿರಲಿ, ಅದರಲ್ಲಿ ಸರಿಯಾಗಿ ಭಾಗವಹಿಸಲೂ ಸಹ ಆಗುವುದಿಲ್ಲ" ಎಂದು ಹೇಳಿದ ಲೆನಿನ್, "ರಷ್ಯಾದಲ್ಲಿ ಹೊಸದೊಂದು ವರ್ಗಕ್ಕೆ ಅಂದರೆ ಬಂಡವಾಳಗಾರರು ಮತ್ತು ಭೂಮಾಲೀಕರು ಜೊತೆಯಲ್ಲಿರುವ ಬಂಡವಾಳಶಾಹಿ ವರ್ಗಕ್ಕೆ ರಾಜ್ಯಾಧಿಕಾರವು ಹಸ್ತಾಂತರವಾಗಿದೆ. ಇಷ್ಟರಮಟ್ಟಿಗೆ, ರಷ್ಯಾದಲ್ಲಿ ಬೂರ್ಜ್ವಾ ಜನತಾಂತ್ರಿಕ ಕ್ರಾಂತಿಯನ್ನು ಪೂರೈಸಲಾಗಿದೆ."(ದಿ ಏಪ್ರಿಲ್ ಥೀಸಿಸ್, ಸಂಗ್ರಹ ಕೃತಿಗಳು ಸಂಪುಟ 24) ಎಂದು ವ್ಯಾಖ್ಯಾನಿಸಿದರು. 1917ರ ಫೆಬ್ರವರಿ ಕ್ರಾಂತಿಯ ಮೂಲಕ ಬಂಡವಾಳಶಾಹಿ ವರ್ಗವನ್ನು ರಾಜ್ಯಾಧಿಕಾರದ ಸ್ಥಾನದಲ್ಲಿ ಕೂರಿಸಿದ ಕೂಡಲೇ ಬೂರ್ಜ್ವಾ ಜನತಾಂತ್ರಿಕ ಕ್ರಾಂತಿಯ ಘಟ್ಟವು ರಷ್ಯಾದಲ್ಲಿ ಮುಗಿದಿತ್ತು. ಹಾಗಾಗಿ, ರಷ್ಯಾವು ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯ ಘಟ್ಟಕ್ಕೆ ಬಂದು ನಿಂತಿತ್ತು ಮತ್ತು ಆ ಕ್ರಾಂತಿಯನ್ನು ರಷ್ಯಾದ ಕಾರ್ಮಿಕ ವರ್ಗದ ನೇತೃತ್ವದಲ್ಲಿ ರೈತಾಪಿ ವರ್ಗದ ಒಕ್ಕೂಟದೊಂದಿಗೆ ಸಾಧಿಸಬೇಕಾಗಿತ್ತು. ಆ ಸಂದರ್ಭದಲ್ಲಿ, ಆ ಮೊದಲ 8 ತಿಂಗಳು (ಫೆಬ್ರವರಿಯಿಂದ ಅಕ್ಟೋಬರ್‌ವರೆಗೆ, ಹೊಸ ಕ್ಯಾಲೆಂಡರ್ ಪ್ರಕಾರ ಮಾರ್ಚ್‌ನಿಂದ ನವೆಂಬರ್‌ವರೆಗೆ) ಬೋಲ್ಷೆವಿಕರು ಲೆನಿನ್ ನೇತೃತ್ವದಲ್ಲಿ, ಕಾರ್ಮಿಕ ವರ್ಗವನ್ನು ಸೈದ್ಧಾಂತಿಕವಾಗಿ ಗೆದ್ದುಕೊಳ್ಳಲು ಮತ್ತು ಸೋವಿಯತ್‌ಗಳಲ್ಲಿ ಬಹುಮತವನ್ನು ತಲುಪಲು ಹಾಗೂ ಕೋಟ್ಯಂತರ ರೈತಾಪಿ ಜನತೆಯ ಬೆಂಬಲವನ್ನು ಸಮಾಜವಾದಿ ಕ್ರಾಂತಿಯ ದಿಕ್ಕಿನಲ್ಲಿ ಗಳಿಸಿಕೊಳ್ಳಲು ಬಹುಕಷ್ಟದೊಂದಿಗೆ ಶ್ರಮಿಸಿದರು. ಪೆಟಿಬೂರ್ಜ್ವಾ ಪಕ್ಷಗಳಾದ ಸೋಷಲಿಸ್ಟ್ ಕ್ರಾಂತಿಕಾರಿಗಳು, ಮೆನ್ಷೆವಿಕ್ಸ್, ಅನಾರ್ಕಿಸ್ಟ್‌ಗಳ ಪ್ರಭಾವದಿಂದ ಶೋಷಿತ ಜನತೆಯನ್ನು ಮುಕ್ತರಾಗಿಸಲು ಅವರು ಸಂಘರ್ಷ ನಡೆಸಿದರು. ಆಗಲೇ ಲೆನಿನ್ ಗಡಿಪಾರಿನಿಂದ ಮುಕ್ತರಾಗಿ ರಷ್ಯಾಗೆ ಆಗಮಿಸಿದ್ದು, ಏಪ್ರಿಲ್ ಮಹಾಪ್ರಬಂಧವು ಉದಯಿಸಿದ್ದು, ಪಕ್ಷದ ಏಪ್ರಿಲ್ ಮಹಾಧಿವೇಶನ ನಡೆದದ್ದು ಮತ್ತು ಪಕ್ಷದ ಆರನೇ ಕಾಂಗ್ರೆಸ್ ಜರುಗಿದ್ದು. ಈ ಅದ್ಭುತ ಘಟನಾವಳಿಗಳು ಕ್ರಾಂತಿಯನ್ನು ಅತ್ಯಂತ ನಿರ್ಣಾಯಕವಾದ ಘಟ್ಟಕ್ಕೆ ತಲುಪಿಸಿದವು. ಪಕ್ಷದ ಆರನೇ ಮಹಾಧಿವೇಶನವು ಬಂಡವಾಳಶಾಹಿಗಳು ಮತ್ತು ಹಂಗಾಮಿ ಸರ್ಕಾರದ ವಿರುದ್ಧ ಸಶಸ್ತ್ರ ಬಂಡಾಯಕ್ಕೆ ಕರೆ ಕೊಟ್ಟಿತು. ಆಗಲೇ, "ಸರ್ವ ಶಕ್ತಿಯು ಸೋವಿಯತ್‌ಗಳಿಗೆ" ಎಂಬ ರಣಘೋಷವನ್ನು ಲೆನಿನ್ ಮೊಳಗಿಸಿದ್ದು. ನವೆಂಬರ್ 7ರಿಂದ 17ರವರೆಗೆ ನಡೆದ ರುದ್ರಭೀಕರ ಯುದ್ಧವು ಇಡೀ ಜಗತ್ತನ್ನು ತಲ್ಲಣಗೊಳಿಸಿ ಕ್ರಾಂತಿಯ ವಿಜಯದಲ್ಲಿ ಪರಿಸಮಾಪ್ತಿಯಾಯಿತು.

> **"ಒಂದು ನಿರ್ದಿಷ್ಟ ವರ್ಗದ ಆಳ್ವಿಕೆಯ ಅಂಗವಾಗಿರುವ ರಾಜ್ಯವನ್ನು ಅದರ ವಿರುದ್ಧವಾದ ವರ್ಗದ ಜೊತೆಯಲ್ಲಿ ಹೊಂದಾಣಿಕೆ ಮಾಡುವುದು ಸಾಧ್ಯವಿಲ್ಲದ್ದು. ಪೆಟಿಬೂರ್ಜ್ವಾ ಡೆಮಾಕ್ರಾಟ್‌ಗಳಿಗೆ ಇದು ಅರ್ಥವೇ ಆಗುವುದಿಲ್ಲ"**
>
> **– ಲೆನಿನ್**
>
> 'ದಿ ಸ್ಟೇಟ್ ಅಂಡ್ ರೆವೊಲ್ಯೂಷನ್'
> (ರಾಜ್ಯ ಮತ್ತು ಕ್ರಾಂತಿ)

ಕ್ರಾಂತಿಯನ್ನು ಯಶಸ್ವಿಯಾಗಿ ನೆರವೇರಿಸಿದ್ದೇನೋ ಆಗಿತ್ತು. ಆಗ ಅದಕ್ಕಿಂತಲೂ ಹೆಚ್ಚು ಪರಿಶ್ರಮದಾಯಕ ಸವಾಲು ಕಾದಿತ್ತು. ಅದೇ ಕ್ರಾಂತಿಯ ರಕ್ಷಣೆಯ ಜವಾಬ್ದಾರಿ. ಅಧಿಕಾರವನ್ನು ಕಳೆದುಕೊಂಡಿದ್ದ ಬಂಡವಾಳಶಾಹಿಗಳು ಝಾರ್ ಆಡಳಿತದಲ್ಲಿದ್ದ ಗುಂಪುಗಳೊಂದಿಗೆ ಕೈಜೋಡಿಸಿ ಪ್ರತಿಕ್ರಾಂತಿವಾದಿ ಪಡೆ 'ವೈಟ್ ಗಾರ್ಡ್ಸ್'ನ್ನು ರಚಿಸಿಕೊಂಡು, ಆಗತಾನೆ ಉದಯಿಸಿದ್ದ ಸೋವಿಯತ್ ರಾಜ್ಯವನ್ನು ನಾಶ ಮಾಡಲು ಹವಣಿಸಿದ್ದರು. ಮತ್ತು ಹೊರಗಿನಿಂದ 14 ಸಾಮ್ರಾಜ್ಯಶಾಹಿ ರಾಷ್ಟ್ರಗಳು ಸೋವಿಯತ್ ಒಕ್ಕೂಟದ ಮೇಲೆ ದಾಳಿ ಮಾಡಿದವು. ಹೊಸದಾಗಿ ಹುಟ್ಟಿದ್ದ ಕಾರ್ಮಿಕ ವರ್ಗ ರಾಜ್ಯದ ಕಟ್ಟುನಿಟ್ಟಾದ ನಿಯಂತ್ರಣದ ಕೆಳಗೆ ವ್ಯಕ್ತಿಗಳು ವ್ಯಾಪಾರ ವಹಿವಾಟು ನಡೆಸಲು ಅವಕಾಶ ಒದಗಿಸಿದ್ದ ಹೊಸ ಆರ್ಥಿಕ ನೀತಿ(ಎನ್‌ಇಪಿ) ಯಂತಹ ಲೆನಿನ್‌ರು ರಚಿಸಿದ್ದ ನೀತಿಗಳು ಹಾಗೂ ಸೂತ್ರಗಳ ವಿರುದ್ಧ ಸುಧಾರಣಾವಾದಿ–ಪರಿಷ್ಕರಣವಾದಿ ಮಾರ್ಗವನ್ನು ಹಿಡಿದಿದ್ದ ಟ್ರಾಟ್ಸ್ಕಿ, ಬುಖಾರೀನ್‌ರಂತಹ ಪಕ್ಷದ ನಾಯಕರು ಕೂಡ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದ್ದರು. ಇಷ್ಟೆಲ್ಲಾ ಆದರೂ, ಲೆನಿನ್‌ರ ಸಮರ್ಥ ನಾಯಕತ್ವ ಮತ್ತು ಸ್ಟಾಲಿನ್‌ರ ಸದೃಢ ಬದ್ಧತೆಗಳು ಎಲ್ಲ ರೀತಿಯ ದಾಳಿಗಳಿಂದ, ವಿಕೃತಿಗಳಿಂದ ಮತ್ತು ದಿಕ್ಚ್ಯುತಿಗಳಿಂದ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಕಾಪಾಡಿದವು.

### ರಾಷ್ಟ್ರೀಯತೆಯ ಪ್ರಶ್ನೆ

ಶೋಷಿತ ಜನಗಳ ಒಗ್ಗೂಡುವಿಕೆಯ ಹಾದಿಯಲ್ಲಿ ಎದುರಾಗುವ ಸಮಸ್ಯೆಯು ಬಹು ರಾಷ್ಟ್ರೀಯತೆಯ ಸಮಸ್ಯೆ. ರಷ್ಯನ್ ರಾಷ್ಟ್ರೀಯತೆಯಂತೆಯೇ ಇತರೆಲ್ಲ ರಾಷ್ಟ್ರೀಯತೆಗಳು ಝಾರ್ ಆಡಳಿತದ ಕಾಲಾವಧಿಯಲ್ಲಿ ಅಲ್ಲಿ ಹುಟ್ಟಿದ್ದವು. ಇಂತಹ ಘನವಾದ ಸಮಸ್ಯೆಯನ್ನು ಕುರಿತು ಲೆನಿನ್ ರಚಿಸಿದ ಖ್ಯಾತ ಪ್ರಬಂಧವೇ, 1914ರಲ್ಲಿ ಪ್ರಕಟವಾದ "ದಿ ರೈಟ್ಸ್ ಆಫ್ ನೇಷನ್ಸ್ ಟು ಸೆಲ್ಫ್ ಡಿಟರ್ಮಿನೇಷನ್'.(ರಾಷ್ಟ್ರೀಯತೆಗಳ ಸ್ವಯಂ ಅಧಿಕಾರದ ಹಕ್ಕು) ಮಾರ್ಕ್ಸ್‌ವಾದ–ಲೆನಿನ್‌ವಾದದ ನಿಖರ ಚಿಂತನೆಯಿಂದ ಮತ್ತು ಸೋವಿಯತ್ ಕ್ರಾಂತಿಯ ಐತಿಹಾಸಿಕ ವಿಜಯದಿಂದ ಸ್ಫೂರ್ತಿ ಪಡೆದು, ನಂತರದಲ್ಲಿ ಅಲ್ಲಿನ 15 ಗಣರಾಜ್ಯಗಳಲ್ಲಿ ಬದುಕುತ್ತಿರುವ ವಿವಿಧ ರಾಷ್ಟ್ರೀಯತೆಗಳು ಸೋವಿಯತ್ ಒಕ್ಕೂಟವನ್ನು ಸ್ವಯಂಪ್ರೇರಣೆಯಿಂದ ಬಂದು ಕೂಡಿಕೊಂಡವು.

### ರಾಜ್ಯ ಮತ್ತು ಕ್ರಾಂತಿಯ ಕುರಿತು...

ಸುಧಾರಣಾವಾದಿಗಳು ಮತ್ತು ಅಪಮಾರ್ಗಿಗಳ ಗುಂಪುಗಳ ಕುಕೃತ್ಯಗಳಿಂದ ರಾಜ್ಯದ ಉಗಮ ಮತ್ತು ಗುಣಲಕ್ಷಣಗಳ ಬಗ್ಗೆ ಗಂಭೀರವಾದ ಗೊಂದಲವು ಹುಟ್ಟಿತು. ಕ್ರಾಂತಿಯ ನಂತರ ಕಾರ್ಮಿಕವರ್ಗದ ರಾಜ್ಯವು ಹುಟ್ಟಿದ ಕೂಡಲೇ ಬೂರ್ಜ್ವಾ ಜನತಂತ್ರವು ನಿಷೇಧವಾಗಬೇಕು ಮತ್ತು ಕಾರ್ಮಿಕವರ್ಗದ ಸರ್ವಾಧಿಕಾರವು ಆಚರಣೆಗೆ ಬರಬೇಕು ಎಂದು ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ವಿಶ್ಲೇಷಣೆಯಂತೆ,



ರಾಜ್ಯವು ಅಳಿಯಬೇಕು ಮತ್ತು ಅದಕ್ಕಾಗಿ ಇತಿಹಾಸದ ಒಂದು ನಿರ್ದಿಷ್ಟ ಘಟ್ಟದಲ್ಲಿ ವರ್ಗಗಳ ವಿನಾಶವಾಗಬೇಕು ಎಂಬ ವಿಷಯಗಳ ಕುರಿತು ಅಸ್ಪಷ್ಟತೆಯು ಪಕ್ಷದ ಒಳಗೆ ಇತ್ತು. ಆಗ ಮಾರ್ಕ್ಸ್‌ವಾದಿ ಪರಿಕಲ್ಪನೆಯಲ್ಲಿ ರಾಜ್ಯ ಎಂದರೆ ಏನು ಎಂಬ ಕುರಿತು 1917ರ ಆಗಸ್ಟ್‌ನಲ್ಲಿ ಲೆನಿನ್ ಬರೆದ ಅಮೋಘ ಕೃತಿಯೇ, 'ದಿ ಸ್ಟೇಟ್ ಅಂಡ್ ರೆವೊಲ್ಯೂಷನ್' (ರಾಜ್ಯ ಮತ್ತು ಕ್ರಾಂತಿ). "ಒಂದು ನಿರ್ದಿಷ್ಟ ವರ್ಗದ ಆಳ್ವಿಕೆಯ ಅಂಗವಾಗಿರುವ ರಾಜ್ಯವನ್ನು ಅದರ ವಿರುದ್ಧವಾದ ವರ್ಗದ ಜೊತೆಯಲ್ಲಿ ಹೊಂದಾಣಿಕೆ ಮಾಡುವುದು ಸಾಧ್ಯವಿಲ್ಲದ್ದು. ಪೆಟಿಬೂರ್ಜ್ವಾ ಡೆಮಾಕ್ರಾಟ್‌ಗಳಿಗೆ ಇದು ಅರ್ಥವೇ ಆಗುವುದಿಲ್ಲ" ಎಂದು ಲೆನಿನ್ ಸ್ಪಷ್ಟವಾಗಿ ವಿವರಿಸಿದರು. ಬಂಡವಾಳಶಾಹಿಯನ್ನು ರಾಜ್ಯಾಧಿಕಾರದಿಂದ ಕಿತ್ತೊಗೆದ ಮಾತ್ರಕ್ಕೆ ಬಂಡವಾಳಶಾಹಿಯು ಒಂದು ವರ್ಗವಾಗಿ ಉಳಿಯುವುದಿಲ್ಲ ಎನ್ನುವುದು ಸರಿಯಲ್ಲ. ತಾನು ಕಳೆದುಕೊಂಡ ಅಧಿಕಾರವನ್ನು ಮತ್ತೆ ಪಡೆಯಲು ಅದು ತನ್ನ ಶಕ್ತಿಯನ್ನು 10 ಪಟ್ಟು ಹೆಚ್ಚಿಸಿಕೊಂಡು ಪ್ರಯತ್ನ ಪಡುತ್ತದೆ. ಈಗ ಅದರ ಆಕ್ರಮಣವು ಚಿಂತನಾಲೋಕದ ಮೇಲೆ, ಆಲೋಚನೆಯ ಪ್ರಕ್ರಿಯೆಯ ಮೇಲೆ ಮತ್ತು ಹವ್ಯಾಸಗಳ ಮೇಲೆ ಬಂದೆರಗುತ್ತದೆ ಎಂದು ಲೆನಿನ್ ಪದೇಪದೇ ಕಾರ್ಮಿಕವರ್ಗವನ್ನು ಎಚ್ಚರಿಸಿದರು.

### ಅತಿಎಡವಾದಿ ದಿಕ್ಚ್ಯುತಿಯ ವಿರುದ್ಧ....

ಮಾರ್ಕ್ಸ್‌ವಾದ–ಲೆನಿನ್‌ವಾದದ ತಿರುಳನ್ನು ಗ್ರಹಿಸುವಲ್ಲಿನ ಅಸಮರ್ಥತೆಯು ಕೆಲವು ಕಾಲ ಸುಧಾರಣಾವಾದಿ ಮನೋಭಾವವನ್ನು ಹೊಂದಿರುವ ನಾಯಕರಲ್ಲಿ ಎರಡು ಬಗೆಯ ದಿಕ್ಚ್ಯುತಿಗಳಿಗೆ ಎಡೆಮಾಡಿಕೊಡುತ್ತದೆ. ಬಲಪಂಥೀಯ ಪ್ರತಿಕ್ರಾಂತಿವಾದಿಗಳು ಮಾರ್ಕ್ಸ್‌ವಾದವನ್ನು ಸಂಪ್ರದಾಯಬದ್ಧ ದೃಷ್ಟಿಕೋನದಿಂದ ನೋಡಿದರೆ, ಅವಶ್ಯಕವಾದ ತಯಾರಿಗಳ್ಯಾವುದೂ ಇಲ್ಲದೆ ಕ್ರಾಂತಿಗಾಗಿ ಚಡಪಡಿಸುವ ಇನ್ನೊಂದು ಗುಂಪು ಎಡಪಂಥೀಯ ದುಸ್ಸಾಹಸವಾದಕ್ಕೆ ಬಲಿಯಾಗಿತ್ತು. ಈ ಎರಡು ರೀತಿಯ ಅಪಮಾರ್ಗಗಳನ್ನು ಸೋಲಿಸಲು 1920ರಲ್ಲಿ ಲೆನಿನ್ ರಚಿಸಿದ ಇನ್ನೊಂದು ಖ್ಯಾತ ಕೃತಿಯೇ, 'ಲೆಫ್ಟ್–ವಿಂಗ್ ಕಮ್ಯುನಿಸಂ – ಆನ್ ಇನ್‌ಫ್ಯಾನ್‌ಟೈಲ್ ಡಿಸಾರ್ಡರ್' (ಎಡವಾದಿ ಕಮ್ಯುನಿಸಂ–ಒಂದು ಬಾಲಗ್ರಹ) ಎಂಬುದು. ಈ ನಿಟ್ಟಿನಲ್ಲಿ, ಲೆನಿನ್ ಹೇಳಿದ ಇನ್ನೊಂದು ಬಹುಮುಖ್ಯ ಮಾತನ್ನು ನೆನಪಿಸಿಕೊಳ್ಳುವುದು ಇಲ್ಲಿ ಸೂಕ್ತವಾಗುತ್ತದೆ – "ಇತಿಹಾಸದ ದ್ವಂದ್ವಾತ್ಮಕತೆಯು ಎಂತಹುದೆಂದರೆ, ಮಾರ್ಕ್ಸ್‌ವಾದದ ಸೈದ್ಧಾಂತಿಕ ವಿಜಯವು, ಮಾರ್ಕ್ಸ್‌ವಾದಿಗಳಂತೆ ವೇಷ ಧರಿಸಲು ತನ್ನ ಶತ್ರುಗಳನ್ನೂ ಒತ್ತಾಯಿಸುತ್ತದೆ." (ದಿ ಹಿಸ್ಟಾರಿಕಲ್ ಡೆಸ್ಟಿನಿ ಆಫ್ ದಿ ಡಾಕ್ಟ್ರಿನ್ ಆಫ್ ಕಾರ್ಲ್ ಮಾರ್ಕ್ಸ್, ಸಂಗ್ರಹ ಕೃತಿಗಳು ಸಂಪುಟ 18)

### 20ನೇ ಶತಮಾನದ ಮಹೋನ್ನತ ಮೇಧಾವಿ ಲೆನಿನ್

ಸೈದ್ಧಾಂತಿಕ ಕ್ಷೇತ್ರದಲ್ಲಿ, ಸಂಘಟನಾತ್ಮಕ ಕ್ಷೇತ್ರದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ಮಾರ್ಕ್ಸ್‌ವಾದದ ಉದಾತ್ತತೆಯನ್ನು ಎತ್ತಿ ಹಿಡಿಯುವಲ್ಲಿ ಮತ್ತು ಕಾರ್ಮಿಕ ವರ್ಗದ ಮೊದಲ ಕ್ರಾಂತಿಯನ್ನು ಯಶಸ್ವಿಯಾಗಿ ಸಂಘಟಿಸಿ ಆ ಮೂಲಕ ಮಾರ್ಕ್ಸ್‌ವಾದಿ ಸಿದ್ಧಾಂತದ ನಿಖರತೆಯನ್ನು ಸಾಬೀತುಪಡಿಸುವಲ್ಲಿ ಲೆನಿನ್‌ರು ನಡೆಸಿದ ಸಂಘರ್ಷವು ಮಹೋನ್ನತವಾದದ್ದು. ತಾವು ದೇಶಭ್ರಷ್ಟರಾಗಿದ್ದಾಗ ಆಗಲಿ, ಹೋರಾಟಗಳ ಮಧ್ಯದಲ್ಲಿದ್ದಾಗ ಆಗಲಿ ಅಥವಾ ಕ್ರಾಂತಿಯ ಯುದ್ಧಭೂಮಿಯಲ್ಲೇ ಆಗಲಿ, ಯಾವಾಗಲೇ ಆಗಲಿ, ಅವರು ಮಾರ್ಕ್ಸ್‌ವಾದವನ್ನು ಸಂಪತ್ಭರಿತಗೊಳಿಸಲು ಅಗತ್ಯವಾದಾಗಲೆಲ್ಲ ಹಲವಾರು ಅಮೋಘ ಕೃತಿಗಳನ್ನು ರಚಿಸಿದರು. ಅದಕ್ಕಾಗಿಯೇ ಅವರು 20ನೇ ಶತಮಾನದ ಅತ್ಯಂತ ಮೇಧಾವಿ.

ಆದರೆ, ಅವರಿಗೆ ಹಲವಾರು ಶತ್ರುಗಳೂ ಹುಟ್ಟಿಕೊಂಡರು. ಎಲ್ಲ ಕ್ಷೇತ್ರಗಳಲ್ಲಿಯೂ ಅವರನ್ನು ಎದುರಿಸಲು ಸೋತ ಅಂತಹ ವ್ಯಕ್ತಿಗಳು ಕೊನೆಗೆ ಅವರ ಹತ್ಯೆಗೆ ಪಿತೂರಿಯನ್ನು ಹೂಡಿದರು. 1918ರ ಆಗಸ್ಟ್ 30ರಂದು ಮೈಕಲ್‌ಸನ್ ಕಂಪನಿಯ 15000 ಕಾರ್ಮಿಕರನ್ನು ಉದ್ದೇಶಿಸಿ ಅವರು ಮಾತನಾಡಿ ಮುಗಿಸಿದ ಸಂದರ್ಭದಲ್ಲೇ, ಫಾನಿ ಕಪ್ಲಾನ್ ಎಂಬ ಮಹಿಳೆಯೊಬ್ಬಳು ಅತ್ಯಂತ ಹತ್ತಿರದಿಂದ ಅವರಿಗೆ ಗುಂಡಿಕ್ಕಿದಳು. ಮೂರು ಗುಂಡುಗಳು ಹೊಕ್ಕು ಲೆನಿನ್ ತೀವ್ರವಾಗಿ ಗಾಯಗೊಂಡು, ರಸ್ತೆಯಲ್ಲಿ ಕುಸಿದರು ಮತ್ತು ವಿಪರೀತ ರಕ್ತಸ್ರಾವದಿಂದ ಬಳಲಿದರು. ಇಷ್ಟಾದರೂ ಸ್ವಲ್ಪ ಸಮಯದಲ್ಲೇ ಚೇತರಿಸಿಕೊಂಡು ಎದ್ದು ಕೆಲವು ಮೆಟ್ಟಲುಗಳನ್ನು ತಾವೇ ಹತ್ತಿದರೂ ಕೂಡ. ಹಲವು ವಾರಗಳ ಕಾಲ ಅವರು ಸಾವಿನೊಂದಿಗೆ ಹೋರಾಡಿದರು. ತಮ್ಮ ಸೋಲರಿಯದ ಧೀ:ಶಕ್ತಿ ಹಾಗೂ ವೈದ್ಯರ ಎಲ್ಲಾ ಶ್ರಮಗಳ ಪರಿಣಾಮ ಅವರು ಸ್ವಲ್ಪ ಸುಧಾರಿಸಿಕೊಂಡರು. ಆದರೂ ಅವರ ಆರೋಗ್ಯ ಕ್ಷೀಣಿಸಿತ್ತು. 1924ರ ಜನವರಿ 21ರಂದು ಅಂತಿಮವಾಗಿ ತಮ್ಮ 53ನೇ ವಯಸ್ಸಿನಲ್ಲಿ ಅವರು ಕೊನೆಯುಸಿರೆಳೆದರು. ಲೆನಿನ್, ಕ್ರಾಂತಿಕಾರಿಗಳಲ್ಲೇ ಅತ್ಯಂತ ಅಪರೂಪದ ಸಾಮರ್ಥ್ಯಗಳನ್ನು ಹೊಂದಿದ್ದವರು. ಅವರು ಅತ್ಯಂತ ಸರಳ, ಎಲ್ಲರಿಗೂ ಸುಲಭದಲ್ಲಿ ಲಭ್ಯವಾಗುವ ಮತ್ತು ಸದಾ ಹಸನ್ಮುಖರಾಗಿದ್ದ ವ್ಯಕ್ತಿ. ಯಾವಾಗಲೇ ಆಗಲಿ ಅವರನ್ನು ವ್ಯಾಕುಲತೆಯಲ್ಲೋ ಅಥವಾ ಮಂಕಾಗಿಯೋ ಕಂಡವರೇ ಇಲ್ಲ.

### ಅಂತಿಮವಾಗಿ......

ಇಂದು ಬಂಡವಾಳವಾದ–ಸಾಮ್ರಾಜ್ಯವಾದ ಹೆಚ್ಚುಹೆಚ್ಚು ಬಿಕ್ಕಟ್ಟಿನಲ್ಲಿ ಸಿಲುಕಿದ್ದು ಅತ್ಯಂತ ಶೋಷಕವಾಗುತ್ತಾ ಸಾಗಿದೆ. ಫ್ಯಾಸಿವಾದ ಹಲ್ಲು ಮತ್ತು ಉಗುರುಗಳನ್ನು ಪ್ರದರ್ಶಿಸುತ್ತಾ, ತನ್ನ ಮರಣಾವಸ್ಥೆಯ ಅಸ್ತಿತ್ವವನ್ನು ಇನ್ನಷ್ಟು ವಿಸ್ತರಿಸಲು ಶತಾಯಗತಾಯ ಯತ್ನಿಸುತ್ತಿದೆ. ಇನ್ನೊಂದು ಕಡೆಯಲ್ಲಿ ಸಾಮಾನ್ಯ ಜನತೆಯ ಬದುಕು ಎಲ್ಲ ಕ್ಷೇತ್ರಗಳಲ್ಲೂ ಧ್ವಂಸವಾಗುತ್ತಿದೆ. ಜನರಿಗೆ ಇಂದು ಪರಿಹಾರ ಬೇಕಾಗಿದೆ.

ಜನತೆಯ ವಿಮುಕ್ತಿಗಾಗಿ ಬದುಕಿನ ಸತ್ಯವನ್ನು ಗುರುತಿಸಬೇಕು, ಸರಿಯಾದ ತತ್ವಜ್ಞಾನವೇ ಎಲ್ಲ ಸಮಸ್ಯೆಗಳ ಮೂಲವನ್ನು ತೋರಬಲ್ಲದು ಎಂಬುದನ್ನು ಅರಿಯಬೇಕು. ಅಂತಹ ಬೆಳಕನ್ನು ವೈಜ್ಞಾನಿಕ ತತ್ವಜ್ಞಾನವಾದ ಮಾರ್ಕ್ಸ್‌ವಾದ–ಲೆನಿನ್‌ವಾದ–ಕಾಮ್ರೆಡ್ ಶಿವದಾಸ್ ಘೋಷ್ ಚಿಂತನೆಗಳು ಮಾತ್ರ ತೋರಬಲ್ಲದು. ಮಹಾನ್ ಲೆನಿನ್‌ರವರ ಅಮೋಘ ಸಂಘರ್ಷಮಯ ಬದುಕಿನಿಂದ ಅಗತ್ಯ ಪಾಠಗಳನ್ನು ಕಲಿಯಲು ಮತ್ತು ಬದುಕಿನಲ್ಲಿ ಅಳವಡಿಸಿಕೊಳ್ಳಲು ಐತಿಹಾಸಿಕ ಅವಶ್ಯಕತೆಯೊಂದು ಇಲ್ಲಿದೆ.

## ಸಾರ್ವತ್ರಿಕ ಚುನಾವಣೆ 2024

# ‘ಎನ್‌ಡಿಎ’ ಅಥವಾ ‘ಇಂಡಿಯಾ’ – ಇವೆರಡೂ ಜನಪರ ಪರ್ಯಾಯಗಳಲ್ಲ!

2024ರ ಸಾರ್ವತ್ರಿಕ ಲೋಕಸಭಾ ಚುನಾವಣೆಯು ಹಿಂದಿನದಕ್ಕಿಂತ ರಾಜಕೀಯವಾಗಿ ಹೆಚ್ಚು ಗಂಭೀರ ಸ್ವರೂಪವನ್ನು ಪಡೆದುಕೊಂಡಿದೆ. 2014ರಲ್ಲಿ ಯುಪಿಎ ಆಡಳಿತಾವಧಿಯಲ್ಲಿ ನಡೆದಿದ್ದ 2ಜಿ, ಕಲ್ಲಿದ್ದಲು, ಕಾಮನ್‌ವೆಲ್ತ್ ಕ್ರೀಡಾಕೂಟ ಇತ್ಯಾದಿ ಹಗರಣಗಳನ್ನು ಮುಂದಿಟ್ಟುಕೊಂಡು ಅವುಗಳ ಬೆನ್ನಲ್ಲೆ ಬೆಳೆದಿದ್ದ ಲೋಕಪಾಲ್ ಕೂಗಿನ ಲಾಭವನ್ನು ಸಾರಾಸಗಟಾಗಿ ಕಬಳಿಸಿಕೊಂಡು, 10 ವರ್ಷ ಅಧಿಕಾರದಲ್ಲಿ ಕೂತಿದ್ದ ಯುಪಿಎ ಸರ್ಕಾರದ ಎಲ್ಲಾ ವೈಫಲ್ಯಗಳನ್ನೂ, ಅವುಗಳ ಜೊತೆಯಲ್ಲೇ ಒದಗಿ ಬಂದಿದ್ದ ಪ್ರಚಾರವನ್ನೂ ‘ಸರಿಯಾಗಿ’ ಬಳಸಿಕೊಂಡು ಮತ್ತು ಅಂದು ಅಲ್ಪಸ್ವಲ್ಪವಾದರೂ ಸರಿಯೇ ಅಸ್ತಿತ್ವದಲ್ಲಿದ್ದ ಜನತಾಂತ್ರಿಕ ಪರಿಸರದಲ್ಲಿ ಜನರನ್ನು ಹೈರಾಣಾಗಿಸಿದ್ದ ಅಧಿಕಾರಸ್ಥರ ಕಡು ಭ್ರಷ್ಟಾಚಾರದ ವಿರುದ್ಧ ಮೊನಚು ಮಾತುಗಳಿಂದ ಎಗ್ಗುಸಿಗ್ಗಿಲ್ಲದೆ ಅಬ್ಬರಿಸಿದ್ದ ಮೋದಿ, ಅಮಿತ್ ಶಾ ಜೋಡಿ ನೇತೃತ್ವದ ಬಿಜೆಪಿಯು ಹಿಂದಿನ 15ನೇ ಲೋಕಸಭೆಯಲ್ಲಿ ತಾನು ಗಳಿಸಿದ್ದಕ್ಕಿಂತಲೂ 166 ಹೆಚ್ಚು ಸೀಟುಗಳನ್ನು ಗಳಿಸಿ 282 ಸ್ಥಾನಗಳೊಂದಿಗೆ ಎನ್‌ಡಿಎ ಕೂಟದ ಸರ್ಕಾರವನ್ನು ರಚಿಸಿತ್ತು. 10 ವರ್ಷಗಳ ನಂತರ ಪರಿಸ್ಥಿತಿಯನ್ನು ಅವಲೋಕಿಸಿದರೆ ಒಂದು ವೃತ್ತವನ್ನು ಪೂರ್ಣವಾಗಿ ಕ್ರಮಿಸಿರುವಂತೆ ಕಾಣುತ್ತಿದೆ. ಈಗ ಮತ್ತೊಮ್ಮೆ ಭ್ರಷ್ಟಾಚಾರದ ಅಜೆಂಡಾವು ಕೇಂದ್ರಸ್ಥಾನದಲ್ಲಿದೆ, ಒಂದು ದಶಕದ ಅವಧಿಯ ಕಡು ಜನವಿರೋಧಿ, ಅದರಲ್ಲೂ ನಿರ್ದಿಷ್ಟವಾಗಿ ಕಡು ರೈತ–ಕಾರ್ಮಿಕ ವಿರೋಧಿ ನೀತಿಗಳು ಕಣ್ಣಿಗೆ ರಾಚುತ್ತಿವೆ, ದೇಶದ ದುಡಿಯುವ ಜನತೆ ಮತ್ತಷ್ಟು ಹೈರಾಣಾಗಿದ್ದಾರೆ, ಮೋದಿ ಸರ್ಕಾರದ ಕೊನೆಯೇ ಇಲ್ಲದ ‘ವೈಫಲ್ಯಗಳ’ ಪಟ್ಟಿ ಜನರ ಮುಂದಿದೆ. ಒಂದು ಭಿನ್ನತೆ ಇದೆ! 2004–2014ರ ದಶಕಕ್ಕೆ ಹೋಲಿಸಿದರೆ, 2014–2024ರ ದಶಕದಲ್ಲಿ ಬಹುಪಾಲು ಮುಖ್ಯವಾಹಿನಿಯ ಎಲ್ಲ ಮಾಧ್ಯಮಗಳು ಸರ್ಕಾರದ ಮುಂದೆ ಸಾಷ್ಟಾಂಗ ಮಲಗಿವೆ. ಮೋದಿ ಸರ್ಕಾರದ ‘ಸಾಕು ಮಾಧ್ಯಮ’ಗಳಾಗಿವೆ. ಎರಡು ದಶಕಗಳ ಅವಧಿಯ ನಡುವೆ ಇರುವ ಏಕೈಕ ವ್ಯತ್ಯಾಸ ಇದೇ ಏನೋ!

### ರಾಜಕಾರಣದ ಕೊಳೆತಕ್ಕೂ ಒಂದು ಮಿತಿ ಬೇಡವೇ?

‘ಸುಳ್ಳು ಹೇಳು, ಮತ್ತೆಮತ್ತೆ ಸುಳ್ಳು ಹೇಳು, ಸುಳ್ಳನ್ನು ಹೇಳುತ್ತಲೇ ಇರು’, ‘ಕಪಟತನಕ್ಕೂ ಒಂದು ಮಿತಿ ಇರುತ್ತದೆ’, ‘ವಾಹ್ ಮೋದಿಜಿ ವಾಹ್’ – ಪ್ರಧಾನಿ ಮೋದಿಯವರಿಂದ ಹೊರಬಿದ್ದ ಈ ಮೂರು ಅಣಿಮುತ್ತುಗಳು ರಾಜಕೀಯ ವಿಡಂಬನೆಗಾರರಿಗೆ ಅಚ್ಚುಮೆಚ್ಚು. ಇತರರನ್ನು ಅಪಹಾಸ್ಯ ಮಾಡಿ ತಮ್ಮನ್ನು ಉತ್ಪ್ರೇಕ್ಷಿಸಿಕೊಳ್ಳಲು ಮೋದಿಯವರು ಬಳಸಿದ ಈ ಮಾತುಗಳು ಅವರಿಗೆ ಸ್ವಯಂ ಹೆಚ್ಚು ಅನ್ವಯವಾಗುತ್ತವೆ. ಒಬ್ಬ ವ್ಯಕ್ತಿಯ ಸುತ್ತ ಪ್ರಭಾವಳಿಯನ್ನು ಸೃಷ್ಟಿಸಿ, ಆತನನ್ನು ವಾಸ್ತವಕ್ಕಿಂತ ವಿಪರೀತ ಉಬ್ಬಿಸಿ ದೈತ್ಯೀಕರಿಸಿ, ಆತನ ಆರಾಧನೆಯನ್ನೇ ರಾಜಕೀಯ ಬಂಡವಾಳವನ್ನಾಗಿಸಿಕೊಂಡು ಆತನ ಸುತ್ತಲೂ ಭಕ್ತಗಣವೊಂದನ್ನು ಕಟ್ಟಿಕೊಂಡು ಮೆರೆಯುವ ಮೂಲಕ ಆತನ ಪ್ರತಿಯೊಂದು ಜನವಿರೋಧಿ ನೀತಿಗೆ ಜನಾನುರಾಗದ ಲೇಪನ ಮಾಡಿ ಹಸಿಹಸಿ ಸುಳ್ಳು ಹೇಳುತ್ತಾ ಸಾಗುವ ಇಂದಿನ ರಾಜಕೀಯ ದುರಂತದ ನಡುವೆ ಸಾರ್ವತ್ರಿಕ ಚುನಾವಣೆ ಬಂದಿದೆ. ‘ಮೋದಿ ಸರ್ಕಾರದ ಒಂದೇಒಂದು ವೈಫಲ್ಯವೂ ಇಲ್ಲ, ಕಳೆದ 10 ವರ್ಷಗಳಲ್ಲಿ ದೇಶವು ಅಪಾರ ಪ್ರಗತಿ ಹೊಂದಿದೆ, ಎಲ್ಲ ಸಮಸ್ಯೆಗಳು ಪರಿಹಾರ ಹಂತವನ್ನು ತಲುಪಿವೆ, ದೇಶ ‘ವಿಕಸಿತ ಭಾರತ’ವಾಗುತ್ತಿದೆ, ವಿಶ್ವಮಟ್ಟದಲ್ಲಿ ಭಾರತದ ಘನತೆ ಮುಗಿಲುಮಟ್ಟದಲ್ಲಿದೆ, ಎಲ್ಲೆಲ್ಲೂ ಸುಖ, ಸಂತೋಷ ವ್ಯಾಪಿಸಿದೆ’ – ಇದೇ ಪ್ರಚಾರವೇ ಇಡೀ ಮಾಧ್ಯಮದ ತುಂಬ ತುಂಬಿ ತುಳುಕುತ್ತಿದೆ. ಇಂತಹ ಪ್ರಚಾರದ ಹೊಗೆಪರದೆಯ ಹಿಂದೆ ಸತ್ಯವು ಕಾಣದಂತಾಗಿದೆ. ಚುನಾವಣಾ ಸಂದರ್ಭದಲ್ಲೂ ಇವು ಜನರ ಕಣ್ಣಿಗೆ ಕಾಣದೇ ಹೋದರೆ ಅದಕ್ಕಿಂತ ದೊಡ್ಡ ದುರಂತ ಇನ್ನೇನಿರಲು ಸಾಧ್ಯ? ಇಲ್ಲಿಯವರೆಗೂ, ಸ್ವತಂತ್ರ ಭಾರತದಲ್ಲಿ ಬಂದು ಆಳಿಹೋದ ಎಲ್ಲ ಬಂಡವಾಳಶಾಹಿ ಸರ್ಕಾರಗಳ ಪೈಕಿ ಪ್ರಸಕ್ತ ಮೋದಿ ಸರ್ಕಾರವೇ ಅತ್ಯಂತ ಕಡು ಜನವಿರೋಧಿ, ಬಂಡವಾಳಶಾಹಿಪರ ನೀತಿಗಳನ್ನು ಜಾರಿಗೊಳಿಸಿ, ಯಶಸ್ವಿಯಾಗಿ ಜನರನ್ನು ವಂಚಿಸಿದ ಸರ್ಕಾರವಾಗಿದೆ. ಬದುಕನ್ನು ಮೂರಾಬಟ್ಟೆಯನ್ನಾಗಿಸಿ, ನಿಮ್ಮನ್ನು ಉದ್ಧಾರ ಮಾಡಲೆಂದೆ ಇಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಬಸವಳಿದಿರುವ ಜನರನ್ನೇ ನಂಬಿಸುವಲ್ಲಿ ಯಶಸ್ಸನ್ನು ಗಳಿಸಿದ ಸರ್ಕಾರವೇ ಮೋದಿ ಸರ್ಕಾರ. ಮೋದಿ ಸರ್ಕಾರದ ಜನವಿರೋಧಿ ಆಡಳಿತಕ್ಕೆ ಕನ್ನಡಿ ಹಿಡಿಯಬಲ್ಲ ಕೆಲ ವಿದ್ಯಮಾನಗಳನ್ನು ಇಲ್ಲಿ ಪಟ್ಟಿ ಮಾಡಲೇಬೇಕು.

### ಜನರಿಟ್ಟಿದ್ದ ಭರವಸೆಗೆ ದ್ರೋಹವೆಸಗಿ ಮೂಗಿಗೆ ತುಪ್ಪ ಸವರಿದ ಸರ್ಕಾರ

ಇಲ್ಲಿಯವರೆಗೂ, ದೇಶವು ಕಂಡಿರುವ ಎಲ್ಲ ಹಗರಣಗಳನ್ನು ಮೀರಿರುವ ಬ್ರಹ್ಮಾಂಡ ಹಗರಣವೇ ಚುನಾವಣಾ ಬಾಂಡ್ ಹಗರಣ. ಇಲ್ಲಿಯವರೆಗಿನ ಲಭ್ಯ ಮಾಹಿತಿಯನ್ವಯ ಇದು ರೂ.12,700ಕೋಟಿ ಹಗರಣ. ಇದರಲ್ಲಿ ಶೇ.49ರಷ್ಟು ಹಣ ಬಿಜೆಪಿಯ ಪಾಲು. ಇದರ ಲಾಭ ಪಡೆದು ನಂತರ ಸ್ಥಾನದಲ್ಲಿ ಕ್ರಮವಾಗಿ ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಬಿಆರ್‌ಎಸ್, ವೈಎಸ್‌ಆರ್‌ಸಿಪಿ ಪಕ್ಷಗಳು ಇವೆ. ಇದು ಗಾತ್ರದಲ್ಲಿ ಮೇಲ್ನೋಟಕ್ಕೆ ಚಿಕ್ಕದಾಗಿ ಕಾಣಿಸುತ್ತದೆಯಲ್ಲವೇ! ಆದರೆ, ಇದರಲ್ಲಿ ಎಲ್ಲ ಹಗರಣಗಳನ್ನೂ ಮೀರಿಸುವ ‘ಸಾಮರ್ಥ್ಯ’ ಅಡಗಿದೆ. ಏಕೆಂದರೆ, ಇಲ್ಲಿ ಸರ್ಕಾರ ಮತ್ತು ಬಂಡವಾಳಗಾರರ ನಡುವಿನ ‘ಅಪವಿತ್ರ’ ಸಂಬಂಧದ ಮೂಲ ಮಂತ್ರವೇನೆಂದರೆ ‘ನೀನನಗಿದ್ದರೆ, ನಾನಿನಗೆ’ ಎಂಬುದು.

2014ರಿಂದ ಇಲ್ಲಿಯವರೆಗೆ ಜಾರಿ ನಿರ್ದೇಶನಾಲಯ(ಇಡಿ), ಆದಾಯ ತೆರಿಗೆ ಇಲಾಖೆ(ಐಟಿ) ಮತ್ತು ಕೇಂದ್ರ ತನಿಖಾ ಸಂಸ್ಥೆ (ಸಿಬಿಐ) ದಾಳಿಗೆ ವಿಪಕ್ಷಗಳ 25 ಮಂದಿ ಪ್ರಮುಖ ನಾಯಕರು ಒಳಗಾಗಿದ್ದರು. ಅವರು ಬಿಜೆಪಿಗೆ ಪಕ್ಷಾಂತರ ಮಾಡಿದ ಕೂಡಲೆ 23 ಮಂದಿಯ ಮೇಲಿನ ತನಿಖೆಗಳು ಸ್ಥಗಿತಗೊಂಡಿವೆ ಮತ್ತು ಅವುಗಳಲ್ಲಿ ಇಬ್ಬರಂತೂ ಪೂರ್ಣವಾಗಿ ಖುಲಾಸೆಯಾಗಿದ್ದಾರೆ. ಹಿಂದೆಯೂ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಸರ್ಕಾರವು ಇಡಿ ಮತ್ತು ಸಿಬಿಐಗಳನ್ನು ದುರ್ಬಳಕೆ ಮಾಡಿಕೊಂಡಿಲ್ಲ ಎಂದೇನೂ ಇಲ್ಲ. ಆದರೆ ಮೋದಿ ಸರ್ಕಾರವು ಈ ಸಂಸ್ಥೆಗಳನ್ನು ಬಳಸಿಕೊಂಡು ವಿಪಕ್ಷಗಳನ್ನು ಹಣಿದಿರುವ ಪ್ರಮಾಣವು ಹಿಂದೆಂದೂ ಕಂಡು ಕೇಳರಿಯದಷ್ಟು.

ಇತ್ತೀಚೆಗೆ, ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಒ) ಮತ್ತು ಇನ್‌ಸ್ಟಿಟ್ಯೂಟ್ ಫಾರ್ ಹ್ಯೂಮನ್ ಡೆವಲಪ್ಮೆಂಟ್ (ಐಹೆಚ್‌ಡಿ) ಗಳು ಜಂಟಿಯಾಗಿ ಹೊರತಂದ ಇಂಡಿಯಾ ಎಂಪ್ಲಾಯ್ಮೆಂಟ್ ರಿಪೋರ್ಟ್ 2024 ವರದಿಯ ಪ್ರಕಾರ ನಮ್ಮ ದೇಶದಲ್ಲಿ ಇರುವ ಒಟ್ಟು ನಿರುದ್ಯೋಗಿಗಳ ಪೈಕಿ ಶೇ.82.9ರಷ್ಟು ಮಂದಿ ಯುವವಯಸ್ಸಿನವರಾಗಿದ್ದಾರೆ. ಕಳೆದೆರಡು ದಶಕಗಳಲ್ಲಿ ಪ್ರೌಢ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಪಡೆದಿದ್ದೂ ನಿರುದ್ಯೋಗಿಗಳಾಗಿ ಪರದಾಡುತ್ತಿರುವವರ ಸಂಖ್ಯೆ ಹೆಚ್ಚುಕಡಿಮೆ ದುಪ್ಪಟ್ಟಾಗಿದೆ. 2000ದಲ್ಲಿ ಪ್ರೌಢ ಶಿಕ್ಷಣಕ್ಕಿಂತ ಹೆಚ್ಚು ಓದಿದ್ದೂ ಸಹ ನಿರುದ್ಯೋಗಿಯಾಗಿದ್ದವರ ಪ್ರಮಾಣವು ಶೇ.32ರಷ್ಟು ಇದ್ದದ್ದು, 2022ರ ಹೊತ್ತಿಗೆ ಶೇ.62ಕ್ಕೆ ಏರಿದೆ ಎಂದರೆ, ಶಿಕ್ಷಣವಿದ್ದಾಗ್ಯೂ ನಿರುದ್ಯೋಗವು ಹೆಚ್ಚುಕಡಿಮೆ ಎರಡು ಪಟ್ಟು ಹೆಚ್ಚು ಜನರನ್ನು ಕಾಡಿದೆ ಎಂದಾಗುತ್ತದೆ.

ಸರ್ಕಾರದ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ಸಹ ಅವುಗಳನ್ನು ತುಂಬಲು ಸರ್ಕಾರಗಳಿಗೆ ಆಸಕ್ತಿ ಇಲ್ಲದಿರುವುದು ನಿರುದ್ಯೋಗದ ಬೆಳವಣಿಗೆಗೆ ಇನ್ನೊಂದು ಕಾರಣ. ಕೆಲವೇ ಕೆಲವು ಸರ್ಕಾರಿ ಹುದ್ದೆಗಳಿಗೆ ಅಪಾರ ಸಂಖ್ಯೆಯಲ್ಲಿ ಅರ್ಜಿಗಳು ಬರುತ್ತಿವೆ. 10ಲಕ್ಷಕ್ಕೂ ಹೆಚ್ಚು ಹುದ್ದೆಗಳು ಕೇಂದ್ರದಲ್ಲಿ, 2.5ಲಕ್ಷಕ್ಕೂ ಹೆಚ್ಚು ಹುದ್ದೆಗಳು ರಾಜ್ಯದಲ್ಲಿ ಖಾಲಿ ಬಿದ್ದಿವೆ. ಇಂತಹ ವಿದ್ಯಮಾನಗಳಲ್ಲಿ ಯಾವುದೇ ರಾಜ್ಯವೂ ಸಹ ಹಿಂದೆ ಬಿದ್ದಿಲ್ಲ. ಉತ್ತರ ಪ್ರದೇಶದ ಉದಾಹರಣೆಯನ್ನು ತೆಗೆದುಕೊಳ್ಳಿ. ಅಲ್ಲಿ ಪೊಲೀಸ್ ಇಲಾಖೆಯಲ್ಲಿ 62 ‘ಜವಾನ’ ಹುದ್ದೆಗೆ(ಅರ್ಹತೆ:5ನೇ ತರಗತಿ) 93,000 ಅಭ್ಯರ್ಥಿಗಳು ಅರ್ಜಿ ಗುಜರಾಯಿಸಿದ್ದರು. ಅವರಲ್ಲಿ 3700 ಜನ ಪಿಎಚ್‌ಡಿ ಪದವಿ ಪಡೆದವರು 5000 ಮಂದಿ ಸ್ನಾತಕೋತ್ತರ ಪದವಿ ಪಡೆದವರು, ಮತ್ತು 28,000 ಜನ ಪದವೀಧರರಾಗಿದ್ದರು. ಉ.ಪ್ರದೇಶದಲ್ಲೇ ಸ್ಟಾಫ್ ಸೆಲೆಕ್ಷನ್ ಕಮಿಷನ್, 2023ರಲ್ಲಿ ಗ್ರೂಪ್ ‘ಡಿ’(ಜವಾನ, ಕಾವಲುಗಾರ, ಮಾಲಿ ಹುದ್ದೆಗಳು) ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದಾಗ 55 ಲಕ್ಷ ಅರ್ಜಿಗಳು ಬಂದವು. ಅರ್ಜಿದಾರರಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಬಿಟೆಕ್, ಎಂಬಿಎ. ಎಂಎ ಅಥವಾ ಎಂಎಸ್‌ಸಿ ಪದವಿಗಳನ್ನು ಪಡೆದವರಿದ್ದರು. ಮಧ್ಯಪ್ರದೇಶ ರಾಜ್ಯದಲ್ಲಿ 15 ಜವಾನರು, ಚಾಲಕರು ಮತ್ತು ಕಾವಲುಗಾರರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದಾಗ 11,000 ಅರ್ಜಿಗಳು ಬಂದವು. ಜೂನ್ 2022 ರಲ್ಲಿ ಗುಜರಾತ್ ರಾಜ್ಯದಲ್ಲಿ 3400 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದಾಗ 17 ಲಕ್ಷ ಮಂದಿ ಅರ್ಜಿದಾರರಿದ್ದರು.

ಫೆಬ್ರವರಿ 2024ರಲ್ಲಿ, ಈಗಾಗಲೇ 3 ಕೋಟಿ ಮನೆಗಳನ್ನು ಪ್ರಧಾನಮಂತ್ರಿ ಅವಾಸ್ ಯೋಜನೆಯಡಿಯಲ್ಲಿ ಕಟ್ಟಲಾಗಿದೆ ಎಂದು, ಮುಂದಿನ ಐದು ವರ್ಷಗಳಲ್ಲಿ ಇನ್ನೂ ಎರಡು ಕೋಟಿ ಮನೆಗಳನ್ನು ಕಟ್ಟಲಾಗುವುದು ಎಂದು ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಭರ್ಜರಿ ಘೋಷಣೆ ಮಾಡಿದ್ದರು. ಆದರೆ ನಿಜವಾಗಿಯೂ ಸತ್ಯಾಂಶವನ್ನು ಹುಡುಕಿದಾಗ ಕಂಡಿದ್ದು – ‘80 ಲಕ್ಷ ಮನೆಗಳನ್ನು ಕಟ್ಟಲಾಗಿದೆ ಮತ್ತು ಇನ್ನೂ 3.18 ಕೋಟಿ ಮನೆಗಳು ಬೇಕಾಗಿವೆ’ ಎಂದು.

ಪ್ರಧಾನ ಮಂತ್ರಿ ಉಜ್ವಲ ಯೋಜನೆ ಅಡಿಯಲ್ಲಿ 2024ರ ಏಪ್ರಿಲ್ 3ರವರೆಗೆ 10,32,40,654 ಅಡುಗೆ ಅನಿಲ ಸಂಪರ್ಕಗಳನ್ನು ಮಂಜೂರು ಮಾಡಲಾಗಿದೆಯಂತೆ. 2022–23 ಆರ್ಥಿಕ ವರ್ಷದಲ್ಲಿ ಶೇ.25ರಷ್ಟು ಫಲಾನುಭವಿಗಳು ಶೂನ್ಯ ಸಿಲಿಂಡರ್ ಅಥವಾ ಒಂದೇ ಒಂದು ರೀಫಿಲ್ ಖರೀದಿಸಿದ್ದಾರೆ. ಅದೂ, ರೂ.300 ಸಬ್ಸಿಡಿ ಒಳಗೊಂಡಿದ್ದರೂ ಸಹ. ಉಜ್ವಲ ಯೋಜನೆಗೆ ಒಳಪಡದವರು ವಾರ್ಷಿಕ ಸರಾಸರಿ 6.67 ರೀಫಿಲ್‌ಗಳನ್ನು ಬಳಸುತ್ತಾರೆಂದರೆ, ‘ಬಡವರಿಗೆ ಉಚಿತ ಯೋಜನೆ’ ಎನ್ನುವ ಉಜ್ವಲ ಯೋಜನೆಯ ಹಿಂದಿನ ಕಪಟತನ ಕಣ್ಣಿಗೆ ರಾಚುತ್ತದೆಯಲ್ಲವೇ!

ದೇಶದಾದ್ಯಂತ ಧರ್ಮ, ಜಾತಿ, ಲಿಂಗ ಇತ್ಯಾದಿಗಳ ಆಧಾರದ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಅಪರಾಧಗಳು ಎಲ್ಲೆ ಮೀರಿವೆ. ಒಂದು ದೇಶ, ಒಂದು ಕಾನೂನು, ಒಂದು ಭಾಷೆ, ಒಂದು ಚುನಾವಣೆ ಇತ್ಯಾದಿ ‘ಒಂದುಗಳ’ ಗದ್ದಲವನ್ನು ಬಿಜೆಪಿ ಎಬ್ಬಿಸಿ, ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ್ದ ಭಾರತದಲ್ಲಿ ವೈರುಧ್ಯಗಳ ಕಿಚ್ಚು ಹಚ್ಚಿಸಿ, ಅವಕ್ಕೆ ಉತ್ತೇಜನ ಕೊಟ್ಟು ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಲೇ ಇದೆ. ಮಣಿಪುರದಲ್ಲಿ ಹತ್ತಿದ್ದ ಉರಿ ನಂದಿಯೇ ಇಲ್ಲ. ಜನರ ಮಧ್ಯೆ ಯಾವುದೇ ರೀತಿಯಲ್ಲಿ ಒಡಕನ್ನು ಉಂಟು ಮಾಡಿದಾಗಲೆಲ್ಲಾ ಆಳ್ವಿಕರಿಗೆ ಲಾಭವಾಗುತ್ತದೆ. ಇದಕ್ಕೆ ಇತಿಹಾಸದಲ್ಲಿ ಅಪಾರವಾಗಿ ಉದಾಹರಣೆ ಲಭ್ಯವಿವೆ.

2014ಕ್ಕೂ ಮೊದಲು ದೇಶದಲ್ಲಿ 100 ಮಂದಿ ಶತಕೋಟಿ ಡಾಲರ್(Dollar Billionaire)ಗಳ ಕುಬೇರರು ಇದ್ದರು ಎಂದು ಫೋರ್ಬ್ಸ್‌ನ ಪಟ್ಟಿ ತೋರಿಸಿತ್ತು. ಕಳೆದ 10 ವರ್ಷಗಳ ಅವಧಿಯಲ್ಲಿ ಅವರ ಸಂಖ್ಯೆ ಇನ್ನೂ 100 ಏರಿದೆ. ಅಂದರೆ, 2024ರಲ್ಲಿ ದೇಶದಲ್ಲೀಗ 200 ಮಂದಿ ಡಾಲರ್ ಬಿಲಿಯನೇರ್‌ಗಳು ಇದ್ದಾರೆ ಎಂದು ಫೋರ್ಬ್ಸ್ ಘೋಷಿಸಿದೆ. ಅದೇ ಸಮಯದಲ್ಲಿ 3.5 ಕೋಟಿ ಮಂದಿ ಬಡತನ ರೇಖೆಯ ಕೆಳಗೆ ದೂಡಲ್ಪಟ್ಟಿದ್ದಾರೆ. ಆದರೆ, ಪ್ರಧಾನಿ ಮೋದಿ 25ಕೋಟಿ ಜನರನ್ನು ನಾವು ಬಡತನ ರೇಖೆಯಿಂದ ಮೇಲೆ ಎತ್ತಿದ್ದೇವೆ ಎಂದು ಬೊಗಳೆ ಬಿಡುತ್ತಿದ್ದಾರೆ. 2024ರ ಜನವರಿ 1ರಿಂದ 5 ವರ್ಷಗಳ ಕಾಲ 81.35ಕೋಟಿ ಜನರಿಗೆ ಉಚಿತ ಆಹಾರ ಧಾನ್ಯ ನೀಡಿಕೆ ಯೋಜನೆ(5ಕೆಜಿ ಅಕ್ಕಿ ಅಥವಾ ಗೋಧಿ ಮತ್ತು 1ಕೆಜಿ ಬೇಳೆಕಾಳು) ಯನ್ನು ಜಾರಿಗೆ ತಂದು, ಇದು ವಿಶ್ವದ ಅತಿ ದೊಡ್ಡ ಕಲ್ಯಾಣ ಯೋಜನೆಯೆಂದು ಪ್ರಧಾನಿ ಮೋದಿ ತಮ್ಮನ್ನು ತಾವೇ ಶ್ಲಾಘಿಸಿಕೊಳ್ಳುತ್ತಿದ್ದಾರೆ. 2020ರ ಮಾರ್ಚ್‌ನಲ್ಲಿ ಕೋವಿಡ್ ದಾಳಿಯ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದ್ದದ್ದು ಅದು 2029ರವರೆಗೆ ಮುಂದುವರೆಯುತ್ತದೆ ಎಂದರೆ ಅದಕ್ಕೆ ಶಹಬಾಷ್ ಎನ್ನಬೇಕೆ? ಇದನ್ನು ತಮ್ಮ ದೊಡ್ಡ ಸಾಧನೆ ಎಂದು ಬಣ್ಣಿಸಿಕೊಳ್ಳುವವರನ್ನು ಏನೆಂದು ಕರೆಯಬೇಕು? ಮತಿಹೀನರೇ, ಆಷಾಢಭೂತಿಗಳೇ ಅಥವಾ ಕಪಟಿಗಳೇ? ಏಕೆಂದರೆ, ಶೇ.60ರಷ್ಟು ದೇಶದ ಜನತೆಯನ್ನು ಬಡತನ ರೇಖೆಗಿಂತ ಕೆಳಗೆ ಇಟ್ಟು, ಕೋವಿಡ್ ಮಹಾಮಾರಿಯು ಹೋಗಿ ಮೂರು ವರ್ಷಗಳ ನಂತರವೂ ಸಹ ಕನಿಷ್ಠ ಆಹಾರಕ್ಕೂ ಪರದಾಡುವ ಸ್ಥಿತಿಗೆ ಅವರನ್ನು ದೂಡಿರುವ ಮೋದಿ ಸರ್ಕಾರದ ಆರ್ಥಿಕ ನೀತಿಗಳು ಜನದ್ರೋಹವಲ್ಲದೆ ಇನ್ನೇನು?

ಮೋದಿ, ಅಮಿತ್ ಶಾ ನಾಯಕತ್ವದ ಬಿಜೆಪಿಯನ್ನು ‘ಅಜೇಯವೆಂದು, ಸೋಲಿಸಲಸಾಧ್ಯ’ದ ಪಕ್ಷವೆಂದೂ, ‘ಮತ್ತೊಮ್ಮೆ ಮೋದಿ, 400 ನಮ್ಮ ಗುರಿ’ ಎಂಬ ಅಬ್ಬರದೊಂದಿಗೆ ಪ್ರಚಾರ ನಡೆಯುತ್ತಿರುವುದು ಕಂಡರೂ ಸಹ, ಬಿಜೆಪಿ ಅಭದ್ರತೆಯಿಂದ ನರಳುತ್ತಿರುವಂತಿದೆ. ಒಂದು ದಶಕದ ಕಡುಬಂಡವಾಳಶಾಹಿ ಸೇವೆಯ ಆಡಳಿತದಿಂದ ತೀವ್ರವಾಗಿ ಜನರನ್ನು ಹಲವು ಸಂಕಷ್ಟಗಳಿಗೆ ದೂಡಿರುವುದರಿಂದ ಬಿಜೆಪಿಗೆ ಗೆದ್ದೇಗೆಲ್ಲುತ್ತೇವೆ ಎನ್ನುವ ಅಖಂಡ ಧೈರ್ಯವಿದ್ದಂತೆ ಕಾಣುವುದಿಲ್ಲ. ಇಲ್ಲದಿದ್ದರೆ, ಚುನಾವಣೆ ಗೆಲ್ಲಲು ಚುನಾವಣಾ ಬಾಂಡ್ ಹಣ, ಇಡಿ, ಸಿಬಿಐ, ಐಟಿ, ಚುನಾವಣಾ ಆಯೋಗ ಮತ್ತು ಮಾಧ್ಯಮಗಳ ಬೆಂಬಲ ಮತ್ತು ತಮ್ಮ ಆಡಳಿತಾವಧಿಯಲ್ಲಿ ತಾವು ಮಾಡಿರುವ ‘ಬೃಹತ್ ಸಾಧನೆ’ಗಳೇ ಸಾಕಾಗುತ್ತಿರಲಿಲ್ಲವೇ? ತರಾತುರಿಯ ಅಯೋಧ್ಯೆಯ ಬಾಲರಾಮಮಂದಿರ ಉದ್ಘಾಟನೆ ಬೇಕಿತ್ತೇ, ಮಥುರಾ ಮತ್ತೆ ಮರುಕಳಿಸಬೇಕಿತ್ತೇ, ವಿರೋಧ ಪಕ್ಷಗಳ ಮುಖಂಡರನ್ನು(ತಪ್ಪಿತಸ್ಥರೇ ಇರಬಹುದು!) ಚುನಾವಣಾ ಹೊಸ್ತಿಲಲ್ಲಿ ಜೈಲಿಗೆ ಅಟ್ಟಬೇಕಿತ್ತೇ, ವಿರೋಧ ಪಕ್ಷಗಳ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಬೇಕಿತ್ತೇ, ಕಾಂಗ್ರೆಸ್‌ನ ಗ್ಯಾರಂಟಿಗಳನ್ನು ಖಂಡಿಸುತ್ತಿದ್ದ ಮೋದಿ ಮತ್ತೆ ಗ್ಯಾಂಟಿಗಳಿಗೆ ಮೊರೆ ಹೋಗಬೇಕಿತ್ತೇ? ಇದೇ ಸಂದರ್ಭದಲ್ಲಿ, ಇವಿಎಂಗಳ ‘ಸಹಕಾರ’ವಿಲ್ಲದೆ ಬಿಜೆಪಿ ಗೆಲ್ಲುವ ಸಾಧ್ಯತೆ ಕಡಿಮೆ ಎಂದು ಹಲವು ದಿಕ್ಕಿನಿಂದ ಆತಂಕದ ಕೂಗು ಸಹ ಕೇಳಿಬರುತ್ತಿರುವುದನ್ನು ನಾವು ಗಮನಿಸದೇ ಇರಲು ಸಾಧ್ಯವಿಲ್ಲ.

### ನಿಜವಾದ ಜನಾಭಿಪ್ರಾಯವು ವ್ಯಕ್ತವಾಗಬಹುದೇ!

ಒಟ್ಟಿನಲ್ಲಿ, ಈ ಬಾರಿಯ ಚುನಾವಣೆಯು ಜನರನ್ನು ಇನ್ನಷ್ಟು ಗಂಭೀರವಾಗಿ ಆಲೋಚಿಸಲು ಪ್ರೇರೇಪಿಸುತ್ತಿದೆ. ಕಳೆದ ಒಂದು ದಶಕದ ಮೋದಿ ಸರ್ಕಾರದ ಜನವಿರೋಧಿ ಆಡಳಿತದಲ್ಲಿ ಕೇವಲ ಮತ, ಧರ್ಮ, ಜಾತಿ, ಪೊಳ್ಳು ಅಭಿಮಾನದ ಖಾಲಿ ಹೆಮ್ಮೆಯ ಭಾವನೆಗಳನ್ನು ಕೆರಳಿಸುವುದರಿಂದ ಬದುಕು ಸಾಗಲು ಸಾಧ್ಯವಿಲ್ಲ ಎನ್ನುವುದನ್ನು ಜನರು ಸ್ಪಷ್ಟವಾಗಿ ಕಂಡುಕೊಂಡಿದ್ದಾರೆ. ನಿಜವಾದ ರಾಷ್ಟ್ರಾಭಿಮಾನ, ದೇಶಪ್ರೇಮವೆಂದರೆ ದೇಶದ ಸಮಸ್ತ ದುಡಿಯುವ ಜನರ, ಮಧ್ಯಮ ವರ್ಗದ, ಕೆಳಮಧ್ಯಮವರ್ಗದ ಜನರ ಬದುಕನ್ನು ಹಸನಾಗಿಸಲು ಬೇಕಾಗಿರುವ ಬದಲಾವಣೆಯ ಪರ್ವಕ್ಕೆ ಸಮಾಜವನ್ನು ಸಿದ್ಧವಾಗಿಸುವ ದಿಕ್ಕಿನಲ್ಲಿ ಮುನ್ನಡೆಯುವುದಾಗಿದೆ. ಕಡು ಜನವಿರೋಧಿಯಾಗಿರುವ ಎನ್‌ಡಿಎ ಕೂಟವಾಗಲಿ ಅಥವಾ ತಾನು ಅದಕ್ಕೆ ವಿರುದ್ಧ ಎನ್ನುತ್ತಾ ರಾಜಕೀಯ ಅನುಕೂಲಸಿಂಧೂತನವನ್ನೇ ಕೇಂದ್ರಸ್ಥಾನದಲ್ಲಿ ಇರಿಸಿಕೊಂಡಿರುವ ‘ಇಂಡಿಯಾ’ ಕೂಟವಾಗಲಿ, ಇವು ನಿಜವಾದ ಜನಪರ ರಾಜಕೀಯ ಪರ್ಯಾಯವಲ್ಲ ಎನ್ನುವುದನ್ನು ಮನಗಾಣಬೇಕು. ಬಲಿಷ್ಠ ಜನಚಳುವಳಿಗಳನ್ನು ಕಟ್ಟುವುದೊಂದೇ ಜನರ ಮುಂದೆ ಇರುವ ಏಕೈಕ 7ನೇ ಪುಟಕ್ಕೆ

# ಆಮಿಷ, ಅಧಿಕಾರದ ದುರ್ಬಳಕೆ, ಕಿರುಕುಳಗಳ ಮೂಲಕ ಪಕ್ಷಾಂತರ ಆಯೋಜಿಸುವ 'ವಿಭಿನ್ನ ಮಾದರಿಯ ಪಕ್ಷ' – ಬಿಜೆಪಿ

1980ರಲ್ಲಿ ಮುಂಬೈನಲ್ಲಿ ಅಂದು ಜನತಾ ಪಕ್ಷದಿಂದ ಹೊರಬಂದ ಬಹುತೇಕ ಜನಸಂಘದ ಅನುಯಾಯಿಗಳಿಂದ ಪ್ರಾರಂಭವಾದ ಬಿಜೆಪಿ ಪಕ್ಷವನ್ನು, ಅದರ ನಾಯಕರು 'ವಿಭಿನ್ನ ಮಾದರಿಯ ಪಕ್ಷ'ವೆಂದು ಕರೆದರು. ಅಂದು ಭ್ರಷ್ಟಾಚಾರ, ಜನವಿರೋಧಿ ನೀತಿಗಳ ಅನುಷ್ಠಾನದಿಂದ ಕುಖ್ಯಾತವಾಗಿದ್ದ ಪಕ್ಷಗಳಿಂದ ಇವರು ಭಿನ್ನವೆಂಬ ಭಾವನೆಯನ್ನು ಮೂಡಿಸುವ ಯತ್ನಗಳಿದ್ದವು. ಈಗ 45 ವರ್ಷಗಳು ಕಳೆದಿವೆ, ಕೊಚ್ಚಿಕೊಳ್ಳಲಾಗಿದ್ದ 'ಭಿನ್ನತೆ'ಯು ಹೇಗಿದೆ? ಇವರು ಇತರ ಅಧಿಕಾರದಾಹಿ ಬಂಡವಾಳಶಾಹಿ ರಾಷ್ಟ್ರೀಯ ಅಥವಾ ಪ್ರಾಂತೀಯ ಪಕ್ಷಗಳಿಂದ ನಿಜವಾಗಿಯೂ ಭಿನ್ನರಾಗಿದ್ದಾರೆಯೇ ಅಥವಾ ಅದೇ ದೋಣಿಯಲ್ಲಿ ಪಯಣಿಸುತ್ತಿರುವರೇ? ಇದನ್ನು ಹಲವಾರು ಮಾನದಂಡಗಳಿಂದ ಅಳೆಯಬಹುದು. ಆದರೆ ನಾವು ಈ ಸಂಕ್ಷಿಪ್ತ ಲೇಖನದಲ್ಲಿ ಇದನ್ನು ಕೇವಲ ಪಕ್ಷಾಂತರ ರಾಜಕೀಯಕ್ಕೆ ಮೀಸಲಿಡುತ್ತೇವೆ.

### ತಿರುಗಾ ಮುರುಗಾ ಲಾಗ

ಬಿಹಾರಿನ ಇತ್ತೀಚಿನ ಘಟನೆಯನ್ನು ನೋಡಿ. ಹಲವಾರು ಬಾರಿ ಲಾಗ ಹೊಡೆದ ಖ್ಯಾತಿ ಇರುವ ಜೆಡಿ(ಯು) ನಾಯಕ, ಮುಖ್ಯಮಂತ್ರಿ ಆಗಿದ್ದ ನಿತೀಶ್ ಕುಮಾರ್ ಇದೀಗ ಎನ್‌ಡಿಎ ಸೇರಿದ್ದಾರೆ. ಇವರು ಹಿಂದೆ ಸೋಷಿಯಲಿಸ್ಟ್ ಪಕ್ಷದಲ್ಲಿದ್ದು ಆರ್‌ಜೆಡಿ ಸೇರಿ ನಂತರ ಅದನ್ನು ತೊರೆದು ಜನತಾದಳ ಸೇರಿದ್ದರು. ಜನತಾದಳವು ಜೆಡಿ(ಯು) ಹಾಗೂ ಜೆಡಿ(ಎಸ್) ಆಗಿ ವಿಭಜನೆ ಆಯಿತು. ಜೆಡಿ(ಯು)ನಲ್ಲಿ ಜೊತೆಗಾರರಾಗಿದ್ದ ಶರದ್ ಯಾದವರನ್ನು ತೊರೆದು ಎನ್‌ಡಿಎ ಸೇರಿದರು. ಹೀಗೆ ಅತ್ತಿಂದಿತ್ತ ಹಾರುತ್ತ ಈಗ ಪ್ರಾಯಶಃ ಮೂರನೇ ಬಾರಿಗೆ ಎನ್‌ಡಿಎ ಸೇರಿದ್ದಾರೆ. ಎರಡು ವರ್ಷಗಳ ಹಿಂದೆ ಎನ್‌ಡಿಎ ತೊರೆದು ಆರ್‌ಜೆಡಿ ಸೇರಿ, ಮುಖ್ಯಮಂತ್ರಿ ಆಗಿ ಉಳಿದರು. ಆಗ ಬಿಜೆಪಿಯ ಅಮಿತ್ ಶಾ, 'ನಿತೀಶ್ ಕುಮಾರ್ ಅಂತಹ ವ್ಯಕ್ತಿಗಳಿಗೆ ಇನ್ನು ಮುಂದೆ ಎನ್‌ಡಿಎ ಬಾಗಿಲುಗಳು ಮುಚ್ಚಲ್ಪಟ್ಟಿವೆ' ಎಂದು ಘೋಷಿಸಿದರು. ಪ್ರತಿಯಾಗಿ 30 ಜನವರಿ 2023ರಂದು ನಿತೀಶ್ "ಬೇಕಾದರೆ ಸಾವನ್ನು ಬಯಸುತ್ತೇನೆಯೇ ಹೊರತು ಎನ್‌ಡಿಎಗೆ ಹೋಗುವುದಿಲ್ಲ" ಎಂದು ಹೇಳಿದರು.

ಇದೇ ಜನವರಿಯಲ್ಲಿ ನಿತೀಶ್ ಆರ್‌ಜೆಡಿ–ಜೆಡಿ(ಯು)– ಕಾಂಗ್ರೆಸ್‌ನ 'ಮಹಾಘಟಬಂಧನ್' ತೊರೆದು, ಹೊಸ ಒಕ್ಕೂಟ 'ಇಂಡಿಯಾ' ತೊರೆದು ಬಂದಾಗ ಬಿಜೆಪಿ ತನ್ನ ಮಾತನ್ನು ತಾನೇ ನುಂಗಿಕೊಳ್ಳುತ್ತಾ, ನಿತೀಶ್‌ಗೆ ಬಾಗಿಲು ತೆರೆದು ಮುಖ್ಯಮಂತ್ರಿ ಮಾಡಿತು. ಇಬ್ಬರು ಡಿಪ್ಯೂಟಿ ಸಿಎಂಗಳನ್ನು ಕಾವಲು ನಾಯಿಗಳಂತೆ ನಿಯೋಜಿಸಿದ್ದಾರೆ. ಪ್ರಧಾನ ಮಂತ್ರಿ ಹಾಗೂ ಅಮಿತ್ ಶಾ ಅವರನ್ನು ಒಳಗೊಂಡ ಎಲ್ಲಾ ಬಿಜೆಪಿ ನಾಯಕರು ನಿತೀಶ್‌ರನ್ನು ಸ್ವಾಗತಿಸಿದ್ದಾರೆ. ಇಂತಹ ವೇಷ ಬದಲಿಸುವ ರಾಜಕೀಯದಲ್ಲಿ ಮಿಂದೆದ್ದು ಅದು ಹೇಗೆ ಬಿಜೆಪಿ ವಿಭಿನ್ನ ಗುಣ ಹೊಂದಲು ಸಾಧ್ಯ? ಹೀಗೆ ಎಲ್ಲಾ ಪಕ್ಷಾಂತರಿಗಳು ಬಿಜೆಪಿ ಸೇರುತ್ತಿದ್ದರೆ ಅದರ ಮೂಲಗುಣ ಹೇಗೆ ಉಳಿದುಕೊಳ್ಳುತ್ತದೆ?

### ವೈರಿಗಳೊಡನೆ ಬಿಜೆಪಿಯ ಸಮಯ ಸಾಧಕ ಒಗ್ಗಟ್ಟು

ದಲಿತರನ್ನು ಪ್ರತಿನಿಧಿಸುತ್ತೇವೆಂದು ಘೋಷಿಸಿಕೊಳ್ಳುವ ಮಾಯಾವತಿಯ ಬಿಎಸ್‌ಪಿ, ಬಿಜೆಪಿ ಪಕ್ಷವನ್ನು ಮನುವಾದಿ ಪಕ್ಷವೆಂದು ಖಂಡಿಸುತ್ತಿತ್ತು. ಬಿಜೆಪಿಯೂ ಸಹ ದಲಿತ ವಿರೋಧಿ ಮನೋಭಾವವನ್ನು ಪೋಷಿಸಿಕೊಂಡು ಬಂದಿದೆ. ಆದರೆ 2002 ರಲ್ಲಿ ಅಧಿಕಾರಕ್ಕೆ ಬರುವ ಸಾಧ್ಯತೆ ಕಂಡು ಬಂದಾಗ ಬಿಜೆಪಿ ಹಾಗೂ ಬಿಎಸ್‌ಪಿ ತಮ್ಮ ಇತಿಹಾಸವನ್ನು ಹೂತಿಟ್ಟು ಉತ್ತರ ಪ್ರದೇಶದಲ್ಲಿ ಎರಡು ಪಕ್ಷಗಳೂ ಸಹ ತಲಾ ಎರಡೂವರೆ ವರ್ಷಗಳು ಅಧಿಕಾರವನ್ನು ಹಂಚಿಕೊಳ್ಳಲು ಮುಂದಾದವು. ಇದು ಸಮಯಸಾಧಕ ಬಾಂಧವ್ಯವಲ್ಲದೆ ಮತ್ತೇನು? ಮುಸ್ಲಿಮರ ವಿರುದ್ಧ ದ್ವೇಷ ಕಾರುವ, ಹಿಂದುತ್ವವಾದಿ ಎಂದು ಕೊಚ್ಚಿಕೊಳ್ಳುವ ಬಿಜೆಪಿ, 2018ರಲ್ಲಿ ಅಧಿಕಾರದ ರುಚಿ ನೋಡಲು ಮೆಹಬೂಬ ಮುಫ್ತಿ ಅವರ ಪಿಡಿಪಿ ಪಕ್ಷದೊಂದಿಗೆ ಸೇರಿಕೊಂಡಿತು.

ತನ್ನ ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್‌ನಿಂದ ಬರುವವರನ್ನು ತನ್ನ ಪಕ್ಷದೊಳಗೆ ಸೇರಿಸಿಕೊಳ್ಳಲು ಬಿಜೆಪಿಗೆ ಯಾವುದೇ ಸಂಕೋಚವಿಲ್ಲ. ಉದಾಹರಣೆಗೆ ಮಧ್ಯಪ್ರದೇಶದಲ್ಲಿ ಮಾಧವರಾವ್ ಸಿಂಧ್ಯಾರವರ ಮಗ ಜ್ಯೋತಿರಾದಿತ್ಯ ಸಿಂಧ್ಯಾರನ್ನು ಸೆಳೆದುಕೊಂಡರು. ಉತ್ತರ ಪ್ರದೇಶದಲ್ಲಿ ಜಿತಿನ್ ಪ್ರಸಾದ್ ಎಂಬ ಯುವ ಕಾಂಗ್ರೆಸ್ ನಾಯಕ ಬಿಜೆಪಿ ಸೇರಿ ಸಚಿವರಾದರು. ಮೂರು ಕಾಂಗ್ರೆಸ್ ಶಾಸಕರು 2019ರಲ್ಲಿ ಗೋವಾದಲ್ಲಿ ಬಿಜೆಪಿ ಸೇರಿ ತಕ್ಷಣವೇ ರಾಜ್ಯ ಕ್ಯಾಬಿನೆಟ್ ಸೇರಿದರು. ಹಾಗೆಯೇ ಕೆಲವು ಪ್ರಾದೇಶಿಕ ಪಕ್ಷಗಳೂ ಸಹ, ಉದಾಹರಣೆಗೆ ಉತ್ತರಪ್ರದೇಶದ ಜಯಂತ್ ಚೌದರಿಯ ಆಲ್‌ಎಲ್‌ಡಿ ಪಕ್ಷವು ಕಾಂಗ್ರೆಸ್ –ಎಸ್‌ಪಿ ಒಕ್ಕೂಟ ತೊರೆದು ಬಿಜೆಪಿಯ ಕೈ ಸೇರಿ ಮುಂದಿನ ಚುನಾವಣೆ ಗೆದ್ದು ಚೂರುಪಾರು ಅಧಿಕಾರ ದೊರೆಯಬಹುದು ಎಂಬ ಆಸೆ ಹೊಂದಿದೆ. ಪಶ್ಚಿಮ ಬಂಗಾಳದಲ್ಲಿ ಸಿಪಿಎಂನ ಸುಮಾರು 15 ಸಚಿವರು, ಸಂಸದರು, ಶಾಸಕರು ಹಾಗೂ ನಾಯಕರು ಬಿಜೆಪಿ ಸೇರಿ ತಕ್ಕ ಬಹುಮಾನಗಳನ್ನೂ ಪಡೆದಿದ್ದಾರೆ.

### ಪಕ್ಷಾಂತರ ಯೋಜಿಸಲು ದ್ವಿಮುಖ ತಂತ್ರ

ಹಣ ಹಾಗೂ ಅಧಿಕಾರದ ಆಮಿಷಗಳನ್ನು ಒಡ್ಡುವುದರ ಜೊತೆಗೆ ಕೈ ತಿರುಚುವ ತಂತ್ರಕ್ಕೂ ಬಿಜೆಪಿ ಕೈ ಹಾಕಿದೆ. ಇಂದಿನ ಮರಣಾಸನ್ನ ಬಂಡವಾಳಶಾಹಿ ವ್ಯವಸ್ಥೆಯ, ಅದರಲ್ಲೂ ದೊಡ್ಡ ಏಕಸ್ವಾಮ್ಯ ಮನೆತನಗಳ ಸೇವೆಗೈಯ್ಯುತ್ತಿರುವ ಎಲ್ಲಾ ಸಂಸದೀಯ ಪಕ್ಷಗಳು ಒಂದಲ್ಲಾ ಒಂದು ರೀತಿಯಲ್ಲಿ ಭ್ರಷ್ಟವಾಗಿರುತ್ತವೆ. ಧೂರ್ತ ಬಿಜೆಪಿ ನಾಯಕರಿಗೆ ಇದು ತಿಳಿದಿದೆ. ಸಿಬಿಐ, ಇಡಿ, ಐಟಿ, ಎನ್‌ಐಎ ಮುಂತಾದ ಕೇಂದ್ರ ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಹಿಡಿತದಲ್ಲಿರುವುದರಿಂದ, ವಿರೋಧ ಪಕ್ಷಗಳನ್ನು ಮತ್ತು ಅದರ ನಾಯಕರನ್ನು ತಮಗೆ ಬಗ್ಗುವಂತೆ ಮಾಡಲು ಇಂತಹ ಸಂಸ್ಥೆಗಳನ್ನು ಸುಲಭವಾಗಿ ಬಳಸಿಕೊಳ್ಳುತ್ತಾರೆ. ಕಾಂಗ್ರೆಸ್ ಅವಧಿಯಲ್ಲೂ ಇದರ ಕುರಿತು ಆರೋಪಗಳಿದ್ದವು. ಒಮ್ಮೆ ಸರ್ವೋಚ್ಚ ನ್ಯಾಯಾಲಯವೇ ಸಿಬಿಐ ಸಂಸ್ಥೆಯು ಕೇಂದ್ರ ಸರ್ಕಾರದ ಪಂಜರದೊಳಗಿನ ಗಿಣಿ ಎಂದು ಹೇಳಬೇಕಾಯಿತು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಇದು ಸರ್ವೇಸಾಮಾನ್ಯವಾಗಿದೆ. ಅವರಿಗೆ ತಲೆಬಾಗುವವರನ್ನು ಉಳಿಸಲಾಗುವುದು, ಸನ್ಮಾನಿಸಲಾಗುವುದು, ಇಲ್ಲದಿರುವವರು ಬಲಿಪಶುಗಳಾಗುವರು. ದೊಡ್ಡ ಹಗರಣಗಳಲ್ಲಿ ತೊಡಗಿರುವವರೂ ಸಹ ಬಿಜೆಪಿ ಎಂಬ ವಾಷಿಂಗ್ ಮಷೀನ್ ಪ್ರವೇಶಿಸಿ ಸ್ವಚ್ಛವಾಗುತ್ತಿದ್ದಾರೆ!

ಉದಾಹರಣೆಗೆ, ಶಾರದಾ ಚಿಟ್ ಫಂಡ್ ಹಗರಣದಲ್ಲಿ ತೊಡಗಿದ್ದ ಹೇಮಂತ್ ಬಿಶ್ವಾ ಶರ್ಮ ಅಸ್ಸಾಂನ ಮುಖ್ಯಮಂತ್ರಿಯಾದರು. ಅಸ್ಸಾಂ ಗಣ ಪರಿಷತ್‌ನ ಸರ್ಬಾನಂದ್ ಸೋನೋವಾಲ್ ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿದ್ದು, ಅವಸರದಿಂದ ಬಿಜೆಪಿ ಸೇರಿ ಈಗ ಕೇಂದ್ರ ಸಚಿವರಾಗಿದ್ದಾರೆ. ಅಂತೆಯೇ ಶಾರದಾ ಹಗರಣದ ಆರೋಪಿ, ಟಿಎಂಸಿಯ ಮುಖಂಡ ಮುಕುಲ್ ರಾಯ್, ನಾರದಾ ಲಂಚ ಹಗರಣದ ಆರೋಪಿ ಟಿಎಂಸಿಯ ಸುವೇಂದು ಅಧಿಕಾರಿ ಇಂದು ಬಿಜೆಪಿ ಸೇರಿ ಪಶ್ಚಿಮ ಬಂಗಾಳದ ಶಾಸಕರಾಗಿದ್ದಾರೆ. ಸುವೇಂದು ಅಧಿಕಾರಿ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಎನ್‌ಸಿಪಿ ನಾಯಕರಾಗಿದ್ದ ಶರದ್ ಪವಾರ್‌ನ ಅಳಿಯ ಅಜಿತ್ ಪವಾರ್, ಭ್ರಷ್ಟಾಚಾರದ ಆರೋಪದಡಿ ಸಿಬಿಐ ಕಣ್ಗಾವಲಿನಲ್ಲಿದ್ದರು. ವಿಧಾನಸಭಾ ಚುನಾವಣೆಯ ನಂತರ ಸರ್ಕಾರದ ರಚನೆಯಲ್ಲಿ ಅತಂತ್ರವಿದ್ದ ಕಾರಣ ಮಧ್ಯರಾತ್ರಿಯಲ್ಲಿ ಅಜಿತ್ ಪವಾರ್ ತನ್ನ ಕೆಲವು ಹಿಂಬಾಲಕರೊಡನೆ ಬಿಜೆಪಿ ನೇತೃತ್ವದ ಎನ್‌ಡಿಎ ಸೇರಿ ಸರ್ಕಾರ ರಚಿಸಿದರು, ಉಪಮುಖ್ಯಮಂತ್ರಿಯಾದರು. ಇದ್ದಕ್ಕಿದ್ದಂತೆ ಅವರ ಮೇಲಿದ್ದ ಸಿಬಿಐ ಆರೋಪಗಳು ಮಾಯವಾದವು. ಕಾಂಗ್ರೆಸ್‌ನ ಅಶೋಕ್ ಚೌಹಾಣ್, ಮಿಲಿಂದ ಡಿಯೋರ ಅವರದ್ದು ಇಂಥದ್ದೇ ಕಥೆ. ಇಂತಹ ಪಕ್ಷಗಳು, ವ್ಯಕ್ತಿಗಳು ಜನರಿಗೆ ಏನಾದರೂ ಒಳ್ಳೆಯದು ಮಾಡಲು ಸಾಧ್ಯವೇ? ಉತ್ತರ –ಖಂಡಿತಾ ಇಲ್ಲ!

### ಬಿಜೆಪಿ ಎಂದಿಗೂ ದೋಷ ಮುಕ್ತ!

ಬಿಜೆಪಿಯ ನಾಯಕರ, ಕಾರ್ಯಕರ್ತರ ಮೇಲೆ ಯಾವುದೇ ಇಡಿ, ಸಿಬಿಐ, ಎನ್‌ಐಎ ಆದಾಯ ತೆರಿಗೆ ದಾಳಿ ಇಲ್ಲ. ಅವರ ಮೇಲೆ ಹಲವಾರು ಭ್ರಷ್ಟಾಚಾರದ, ಅಪರಾಧಗಳ ಆರೋಪವಿದೆ. ಉನ್ನಾವ್, ಹತ್ರಾಸ್‌ನಲ್ಲಿ ಎಳೆಯ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರದ ಆರೋಪಗಳಿವೆ. ಲಖೀಂಕೇರಿಯಲ್ಲಿ ಪ್ರತಿಭಟನಾ ನಿರತ ರೈತರ ಭೀಕರ ಕೊಲೆ, ಬ್ರಿಜ್ ಭೂಷಣ್ ಶರಣ್ ಸಿಂಗ್ ಮೇಲೆ ಕುಸ್ತಿಪಟುಗಳ ಮೇಲಿನ ಲೈಂಗಿಕ ಅಕ್ರಮಣಗಳ ಆರೋಪಗಳು ಇದ್ದಾಗಿಯೂ ಶಿಕ್ಷೆ ಇಲ್ಲ. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಮೇಲೆ ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಆರೋಪವಿದ್ದರೂ ಅವರು ಮತ್ತೆ ಪಕ್ಷದೊಳಗಿನ ಪ್ರಮುಖ ನಾಯಕರು! ಮಧ್ಯಪ್ರದೇಶದ 'ವ್ಯಾಪಂ' ಹಗರಣದಲ್ಲಿ ಆರೋಪಿಗಳ ವಿರುದ್ಧ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿಲ್ಲ. ಖಂಡಿತವಾಗಿಯೂ ಇದು 'ವಿಭಿನ್ನ ಮಾದರಿ'ಯ ಪಕ್ಷವೇ!

### ಕೊನೆಯ ಮಾತು

ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು 'ಇಂಡಿಯಾ' ಒಕ್ಕೂಟ ರಚನೆಯಾಗಿದ್ದು, ಅದರ ಕೆಲವು ಸದಸ್ಯರು ತಮ್ಮ ಸ್ವಾರ್ಥಕ್ಕನುಗುಣವಾಗಿ ಒಕ್ಕೂಟದಿಂದ ಹೊರ ನಡೆದಿದ್ದಾರೆ. ಅವರನ್ನು ಸ್ವಾಗತಿಸಲು ಬಿಜೆಪಿಯು ರತ್ನಗಂಬಳಿ ಹಾಸಿ ಕಾಯುತ್ತಿದೆ. ಇದರ ವಿರುದ್ಧ ಮಹಾರಾಷ್ಟ್ರದಲ್ಲಿ ಅಸಮಾಧಾನ ಹೊಂದಿರುವ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮುಂಬೈನಲ್ಲಿ ಅಮಿತ್ ಶಾ ಹೇಳಿದ್ದಾರೆ, "ಅಧಿಕಾರದಲ್ಲಿ ಉಳಿಯುವುದು ಮುಖ್ಯ ಮತ್ತು ಅಧಿಕಾರವನ್ನು ಉಳಿಸಿಕೊಳ್ಳಲು ಈ ಒಳಬರುವಿಕೆಯು ಅವಶ್ಯಕ" ಎಂದು.

ಬಿಜೆಪಿಯ ಇಂತಹ ಹಾನಿಕಾರಕ ಬೆಳವಣಿಗೆಯನ್ನು ಎಡಶಕ್ತಿಗಳ ಹೋರಾಟದ ಮೂಲಕ ತಡೆಗಟ್ಟಬಹುದಿತ್ತು. ಆದರೆ ನಮ್ಮ ಅನೇಕ ಮನವಿಗಳಿಗೆ ಸಿಪಿಐ(ಎಂ) ಹಾಗೂ ಇನ್ನಿತರ ಮಿತ್ರ ಪಕ್ಷಗಳು ಓಗೊಟ್ಟಿಲ್ಲ. ಅವರು ಕಾಂಗ್ರೆಸ್ ಹಾಗೂ ಇತರರ ಜೊತೆಗೂಡಿ ಹೇಗಾದರೂ ಕೆಲವು ಸ್ಥಾನಗಳನ್ನು ಗಿಟ್ಟಿಸಿಕೊಂಡು ಅಧಿಕಾರದಲ್ಲಿರಲು ಬಯಸುತ್ತಾರೆ. ಹೋರಾಟ ನಿರತ ಎಡಶಕ್ತಿಗಳ ಪರ್ಯಾಯವಿಲ್ಲದೆ ಬಿಜೆಪಿ ಬೆಳೆಯುತ್ತಿದೆ. ಸರಿಯಾದ ಕ್ರಾಂತಿಕಾರಿ ವಿಚಾರಧಾರೆ, ನಾಯಕತ್ವದಡಿ ಜನರು ಒಗ್ಗೂಡಿ, ಜನ ಸಮಿತಿಗಳನ್ನು ರಚಿಸಿಕೊಂಡು ಶೋಷಕ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟಗಳನ್ನು ಕಟ್ಟುವವರೆಗೂ, ಆಳುವ ವರ್ಗದ ಸೇವಕ ಪಕ್ಷಗಳಾದ ಬಿಜೆಪಿ ಹಾಗೂ ಇನ್ನಿತರ ಪಕ್ಷಗಳು ತಮ್ಮ ಆಳ್ವಿಕೆಯನ್ನು ಮುಂದುವರೆಸಿಕೊಂಡು ಹೋಗುತ್ತವೆ.

# ಪ್ರಜಾತಂತ್ರದ ಕಗ್ಗೊಲೆ, ಚುನಾವಣೆಯ ಪಾವಿತ್ರ್ಯದ ಅಣಕು – ಸರ್ವೋಚ್ಚ ನ್ಯಾಯಾಲಯ

ಚಂಡೀಘಢದ ಚುನಾವಣೆ ಸಂದರ್ಭದಲ್ಲಿ ಚುನಾವಣಾ ಅಧಿಕಾರಿ ಅನಿಲ್ ಮಸಿಹ್ ಸಿಸಿಟಿವಿ ಕ್ಯಾಮೆರಾದತ್ತ ಕಳ್ಳ ನೋಟ ಬೀರುತ್ತಲೇ ಮತಪತ್ರಗಳನ್ನು ವಿರೂಪಗೊಳಿಸಿದ್ದು ಜನವರಿ 30 ರಂದು ತೆರೆದ ನ್ಯಾಯಾಲಯದಲ್ಲಿ ಪ್ರದರ್ಶನಗೊಂಡ ನಂತರ ಗೆಲುವಿನಲ್ಲಿ ಬೀಗುತ್ತಿದ್ದ ಬಿಜೆಪಿಗೆ ಸರ್ವೋಚ್ಚ ನ್ಯಾಯಾಲಯವು ದೊಡ್ಡ ಪೆಟ್ಟು ನೀಡಿದ್ದಲ್ಲದೆ ಮರು ಚುನಾವಣೆಯ ಬೆದರಿಕೆ ನೀಡಿತ್ತು.

"ಅವನೇನು ಮಾಡುತ್ತಿದ್ದಾನೆ ಅಲ್ಲಿ? ಮತಪತ್ರವನ್ನು ವಿರೂಪಗೊಳಿಸುತ್ತಿದ್ದಾನೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಈ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಜರುಗಿಸಲೇಬೇಕು ... ಕಳ್ಳನಂತೆ ಕ್ಯಾಮೆರಾವನ್ನು ನೋಡುತ್ತಾ ಸದ್ದಿಲ್ಲದೆ ಮತಪತ್ರವನ್ನು ವಿರೂಪಗೊಳಿಸುತ್ತಿದ್ದಾನೆ ಏಕೆ? ಇದು ಪ್ರಜಾತಂತ್ರದ ಅಣಕು ... ಈತ ಪ್ರಜಾತಂತ್ರದ ಕೊಲೆಗೆಯ್ಯುತ್ತಿದ್ದಾನೆ. ಇದು ಚುನಾವಣೆ ನಡೆಸುವ ವಿಧಾನವೇ?" ತ್ರಿಸದಸ್ಯ ಪೀಠದ ನೇತೃತ್ವ ವಹಿಸಿದ್ದ ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ರವರು, ಕೇಂದ್ರಾಡಳಿತ ಪ್ರದೇಶವಾದ



ಚಂಡೀಗಢದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಅಭ್ಯರ್ಥಿಗಳ ಪರ ಹಿರಿಯ ವಕೀಲ ಮಣಿಂದರ್ ಸಿಂಗ್ ಅವರನ್ನು ಉದ್ದೇಶಿಸಿ ಪ್ರಶ್ನಿಸಿದರು. ಚಂಡೀಗಢದ ಮೇಯರ್ ಚುನಾವಣೆಯಲ್ಲಿ ನಡೆದ ಕೃತ್ಯಕ್ಕೆ ಛೀಮಾರಿ ಹಾಕಿದ ಸುಪ್ರೀಂ ಕೋರ್ಟ್, ಚುನಾವಣಾಧಿಕಾರಿಯನ್ನು 'ವಿಚಾರಣೆ' ಗೆ ಒಳಪಡಿಸಬೇಕು ಮತ್ತು ನ್ಯಾಯಾಲಯವು 'ಅವರ ಮೇಲೆ ನಿಗಾ ವಹಿಸುತ್ತಿದೆ' ಎಂಬ ಎಚ್ಚರಿಕೆಯನ್ನು ನೀಡಿತು.

ಚಂಡೀಗಢ ಮೇಯರ್ ಚುನಾವಣೆಗೆ ಸಂಬಂಧಿಸಿದ ಎಲ್ಲಾ ಬ್ಯಾಲೆಟ್ ಪೇಪರ್‌ಗಳು ಮತ್ತು ವೀಡಿಯೋಗಳನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ರಿಜಿಸ್ಟ್ರಾರ್‌ಗೆ ಹಸ್ತಾಂತರಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಫೆಬ್ರವರಿ 7 ರಂದು ನಿಗದಿಯಾಗಿದ್ದ ಚಂಡೀಗಢ ಮುನ್ಸಿಪಲ್ ಕಾರ್ಪೊರೇಷನ್ ಸಭೆಯನ್ನು ಮುಂದೂಡಲು ಸುಪ್ರೀಂ ಕೋರ್ಟ್ ಆದೇಶಿಸಿದೆ. ಎಂಟು ಪ್ರತಿಪಕ್ಷಗಳ ಮತಗಳನ್ನು ರದ್ದುಪಡಿಸಿದ ಚುನಾವಣಾಧಿಕಾರಿಯ ಕೃತ್ಯದ ನಂತರ ಮೇಯರ್ ಚುನಾವಣೆಯಲ್ಲಿ ಬಿಜೆಪಿ ಗೆದ್ದು ಬೀಗುತ್ತಿದ್ದ ಕೆಲವೇ ದಿನಗಳ ಸಮಯದಲ್ಲಿ ಸುಪ್ರೀಂ ಕೋರ್ಟ್‌ನ ಕಟುವಾದ ಈ ಹೇಳಿಕೆ ಬಂದಿದೆ. ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿಯ ಮನೋಜ್ ಸೋಂಕರ್ ಅವರು ಎಎಪಿಯ ಕುಲದೀಪ್ ಕುಮಾರ್ ಅವರನ್ನು ಅಕ್ರಮವಾಗಿ ಸೋಲಿಸಿದ್ದರು, ಅವರ ಪ್ರತಿಸ್ಪರ್ಧಿಯ 12 ಮತಗಳ ವಿರುದ್ಧ 16 ಮತಗಳನ್ನು ಪಡೆದಿದ್ದರು. ಎಂಟು ಮತಗಳನ್ನು ಅಸಿಂಧು ಎಂದು ಘೋಷಿಸಲಾಗಿತ್ತು. ಸುಪ್ರೀಂಕೋರ್ಟ್‌ನ ತಪರಾಕಿಯ ನಂತರ ಮೇಯರ್ ರಾಜಿನಾಮೆ ನೀಡಬೇಕಾಗಿ ಬಂದಿತು. ಚುನಾವಣೆಯನ್ನು ಬಹಿರಂಗವಾಗಿ ತಿರುಚುವುದು ಭ್ರಷ್ಟ ಅಭ್ಯಾಸವೇ, ಅಲ್ಲವೇ? ಈ ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿ ದುರ್ಮಾರ್ಗ ಹಿಡಿದಿತ್ತೆ? – ಈ ಪ್ರಶ್ನೆಗಳಿಗೆ ಬಿಜೆಪಿಯ ಉನ್ನತ ನಾಯಕರೇ ರಾಷ್ಟ್ರಕ್ಕೆ ಉತ್ತರ ನೀಡಬೇಕು! (ದಿ ಹಿಂದೂ 30–01–24, 06–02–24, ಹಿಂದೂಸ್ತಾನ್ ಟೈಮ್ಸ್ 05–02–24)

# ಒಂದೆಡೆ ತೀವ್ರ ಬಲಪಂಥೀಯ ಬಿರುಗಾಳಿ – ಇನ್ನೊಂದೆಡೆ ಬೃಹತ್ ಪ್ರತಿಭಟನೆಯ ಅಲೆಗೆ ಸಾಕ್ಷಿಯಾಗುತ್ತಿದೆ ಯುರೋಪ್

175 ವರ್ಷಗಳ ಹಿಂದೆ ಕಾರ್ಲ್ ಮಾರ್ಕ್ಸ್ **"ಒಂದು ಭೂತವು ಯುರೋಪನ್ನು ಕಾಡುತ್ತಿದೆ – ಅದು ಕಮ್ಯುನಿಸಂನ ಭೂತ"** ಎಂದು ಬರೆದಿದ್ದರು. ಇಂದು ಈ 21ನೇ ಶತಮಾನದಲ್ಲಿ ತೀವ್ರ ಬಲಪಂಥೀಯರ ಬೆಳವಣಿಗೆಯ ಮಧ್ಯದಲ್ಲೇ ಕಾರ್ಮಿಕ–ರೈತ ಹೋರಾಟಗಳ ಅಲೆಗಳು ಯುರೋಪಿನಾದ್ಯಂತ ಅಪ್ಪಳಿಸುತ್ತಿವೆ.

ನೆದರ್‌ಲ್ಯಾಂಡ್‌ನಲ್ಲಿ ಹರ್ಟ್‌ವಿಲ್ಡರ್ಸ್‌ರವರ ತೀವ್ರ ಬಲಪಂಥೀಯ ಪಕ್ಷ 'ಪಾರ್ಟಿ ಫಾರ್ ಫ್ರೀಡಂ' ಅಧಿಕಾರದಲ್ಲಿದೆ. ಮುಸೋಲಿನಿಯ ಉತ್ತರಾಧಿಕಾರಿಗಳು ಇಟಲಿಯ ಹೃದಯ ಭಾಗದಲ್ಲಿ ತಮ್ಮ ರೆಕ್ಕೆಗಳನ್ನು ಬಿಚ್ಚುತ್ತಿದ್ದಾರೆ. ಈ ದೇಶದಲ್ಲಿ ಪ್ರಧಾನಮಂತ್ರಿ ಮೆಲೋನಿಯ ಬಲಪಂಥೀಯ ಪಕ್ಷ 'ಬ್ರದರ್ಸ್ ಆಫ್ ಇಟಲಿ', ಅದೇ ದೇಶದ ಉಪ ಪ್ರಧಾನಮಂತ್ರಿ ಸಾಲ್ವಿನಿಯ 'ಲೆಗಾ ನಾಡ್' ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡು ಅಧಿಕಾರದಲ್ಲಿದೆ. ಈ ಇಬ್ಬರೂ ಕೂಡ ತೀವ್ರ ಬಲಪಂಥೀಯರು ಮತ್ತು ವಲಸಿಗ ವಿರೋಧಿ ಶಕ್ತಿಗಳು.

ಈಗ ಜರ್ಮನಿಯಲ್ಲಿ 'ಜರ್ಮನಿಗೆ ಪರ್ಯಾಯ' (AFD) ಎಂಬ ಘೋಷಣೆ ಬಲವನ್ನು ಪಡೆದುಕೊಳ್ಳುತ್ತಿದೆ. ಈ ಬಲಪಂಥೀಯರು ಸಾಂಸ್ಥಿಕ ವಿರೋಧವನ್ನು ಅಸ್ತ್ರವಾಗಿ ಬಳಸಿಕೊಂಡು ಸರ್ಕಾರವನ್ನು ಉರುಳಿಸಲು ಪ್ರಯತ್ನಿಸುತ್ತಿದ್ದಾರೆ. ಈ ಬಲಪಂಥೀಯರ 'ಕ್ರಾಂತಿ'ಯ ಸುದ್ದಿಯು ಅಂತರರಾಷ್ಟ್ರೀಯ ಮಾಧ್ಯಮಗಳ ತಲೆಬರಹವಾಗಿ ಸುದ್ದಿ ಮಾಡುತ್ತಿದೆ. ಈಗ AFD ಯು, ಜರ್ಮನ್ನರಲ್ಲದ ವಿವಿಧ ಜನಾಂಗಗಳ ಜನರನ್ನು, ಅವರು ಜರ್ಮನಿಯ ಪ್ರಜೆಗಳಾಗಿದ್ದರೂ ಸಹ ದೇಶದಿಂದ ಹೊರಹಾಕುವ ಬಗ್ಗೆ ಬಹಿರಂಗವಾಗಿ ಮಾತನಾಡುತ್ತಿದೆ. ಹಿಂದೆ ನಾಜಿಗಳಿಂದ ಧ್ವನಿಸಲ್ಪಟ್ಟ "ಜರ್ಮನಿ ಮೊದಲು" ಎಂಬ ಘೋಷಣೆ ಶೀಘ್ರವಾಗಿ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಜರ್ಮನಿಯ ಪ್ರಬಲ ಎಡಪಂಥೀಯ ಪಕ್ಷ 'ಡೈ ಲಿಂಕ್' ನುಚ್ಚುನೂರಾಗಿದೆ. ಸೋಷಲಿಸ್ಟ್ ಈಸ್ಟ್ ಜರ್ಮನಿಯ ಸೋಷಲಿಸ್ಟ್ ಪಕ್ಷದ ಮೂಲಕ ತನ್ನ ರಾಜಕೀಯ ಜೀವನವನ್ನು ಪ್ರಾರಂಭಿಸಿದ ಹಾಗೂ ಜರ್ಮನಿಯ ಸಂಸತ್ (ಬುಂಡೆಸ್ಟಾಗ್) ನಲ್ಲಿ ಎಡಪಂಥೀಯರನ್ನು ಪ್ರತಿನಿಧಿಸಿದ ಜನಪ್ರಿಯ ನಾಯಕಿ ಸಾಹ್ರಾ ವಾಗೆನ್‌ಕ್ನೆಕ್ಟ್ ಈಗ ಹೊಸ ಪಕ್ಷವನ್ನು ಹುಟ್ಟು ಹಾಕಿದ್ದಾರೆ. ಸಾಹ್ರಾ ಕೇವಲ ಶೇ.14ರಷ್ಟು ಮತಗಳನ್ನು ಪಡೆಯಬಹುದು ಎಂದು ಇತ್ತೀಚಿನ ವರದಿಯೊಂದು ಹೇಳಿದೆ. ಅಲ್ಲದೆ ಅವರು ನಿಯೋ ನಾಜಿ AFD ಮತಗಳಲ್ಲಿ ಶೇ.4 ರಷ್ಟು ಗಳಿಸುವ ಸಾಧ್ಯತೆ ಇದೆ. ಆದರೂ ಪರಿಸ್ಥಿತಿಯು ಅತ್ಯಂತ ಕಳವಳಕಾರಿಯಾಗಿದೆ.

ಸ್ಪೇನ್‌ನಲ್ಲಿ ಎಡಪಂಥೀಯ ಒಲವನ್ನು ಹೊಂದಿರುವ ಸಮಾಜವಾದಿ ಕಾರ್ಮಿಕ ಪಕ್ಷ ಪ್ರಬಲವಾಗಿದೆ. ಆದರೆ ಇಲ್ಲಿಯೂ ಕೂಡ ಜರ್ಮನಿಯಲ್ಲಿರುವಷ್ಟು ಅಲ್ಲದಿದ್ದರೂ ಬಲಪಂಥೀಯ 'ವೊಕ್ಸ್' ಅಷ್ಟರಮಟ್ಟಿಗೆ ಬಲವನ್ನು ಪಡೆಯುತ್ತಿದೆ. ಹಂಗೇರಿಯಲ್ಲಿ ಪ್ರಧಾನಮಂತ್ರಿ ವಿಕ್ಟರ್ ಓರ್ಬನ್‌ನ ತೀವ್ರಗಾಮಿ ಪಕ್ಷ FIDESZ ಅಧಿಕಾರದಲ್ಲಿದೆ. ಪೋಲೆಂಡ್‌ನಲ್ಲಿ 'ಕಾನೂನು ಮತ್ತು ನ್ಯಾಯ' ಪಕ್ಷ ಹಾಗೂ ಆಸ್ಟ್ರಿಯಾದಲ್ಲಿ 'ಫ್ರೀಡಂ ಪಕ್ಷ' ಕ್ರಮವಾಗಿ ಅಧಿಕಾರದಲ್ಲಿವೆ. ಈ ಎರಡೂ ಪಕ್ಷಗಳು ಕೂಡ ತೀವ್ರ ಬಲಪಂಥೀಯ ಪಕ್ಷಗಳು. ಫ್ರಾನ್ಸ್‌ನಲ್ಲಿ ಮರೀನ್ ಲೇ ಪೆನ್‌ರವರ ತೀವ್ರವಾದಿ 'ನ್ಯಾಷನಲ್ ರ್‍ಯಾಲಿ' ಪಕ್ಷ ಗಣನೀಯ ಅನುಯಾಯಿಗಳನ್ನು ಹೊಂದಿದೆ.

ಆದಾಗ್ಯೂ ಫ್ರಾನ್ಸ್‌ನ ಪರಿಸ್ಥಿತಿ ನಿಜಕ್ಕೂ ಆಸಕ್ತಿದಾಯಕವಾಗಿದೆ. ಪಾಶ್ಚಿಮಾತ್ಯ ಮಾಧ್ಯಮಗಳಿಂದ ತೀವ್ರ ಎಡ ಎಂದು ಕರೆಯಲಾದ ಜೀನ್–ಲುಕ್ ಮೆಲೆಂಚೋನ್ ಅವರ ಎಡಪಂಥೀಯ ಜನಪ್ರಿಯ ಪಕ್ಷ 'ಲಾ ಫ್ರಾನ್ಸ್ ಇನ್ಸೌಮಿಸ್' ಕೂಡ ಅತ್ಯಂತ ಶಕ್ತಿಶಾಲಿಯಾಗಿದೆ. ಕಮ್ಯುನಿಸ್ಟ್ ರಾಜಕೀಯದೊಂದಿಗೆ ನೇರ ಸಂಬಂಧವನ್ನು ಹೊಂದಿದ್ದ ಜೀನ್–ಲುಕ್ ಮೆಲೆಂಚೋನ್ ಕಳೆದ ಚುನಾವಣೆಯಲ್ಲಿ ಮೊದಲ ಸುತ್ತಿನಲ್ಲಿ ಶೇ.22ರಷ್ಟು ಮತ ಪಡೆದರೂ ಎರಡನೇ ಸುತ್ತಿಗೆ ಹೋಗಲಾಗಲಿಲ್ಲ. ಏಕೆಂದರೆ ಅದು ಬಲಪಂಥೀಯ ಲೇ ಪೆನ್ ಅವರ ಮತಗಳಿಗಿಂತ ಶೇ.1ರಷ್ಟು ಕಡಿಮೆಯಾಗಿತ್ತು. ಚುನಾವಣೆಯಲ್ಲಿ ಫ್ರಾನ್ಸ್ ಕಮ್ಯುನಿಸ್ಟ್ ಪಕ್ಷವು ಪ್ರತ್ಯೇಕವಾಗಿ ಹೋರಾಡಿ ಶೇ.3 ರಷ್ಟು ಮತಗಳನ್ನು ಕಸಿದುಕೊಳ್ಳದಿದ್ದರೆ ಫ್ರಾನ್ಸ್‌ನ ರಾಜಕೀಯವು ವಿಭಿನ್ನವಾಗಿರುತ್ತಿತ್ತು. ವಿಕ್ಟರ್ ಕಾರ್ಬಿನ್‌ರವರನ್ನು ಹೊರತುಪಡಿಸಿ ಲುಕ್ ಮೆಲೆಂಚೋನ್ ಕೂಡ ಯುರೋಪಿನ ಮುಖ್ಯ ವಾಹಿನಿಯಲ್ಲಿ ಎಡಪಂಥೀಯ ನಾಯಕರಾಗಿ ಪ್ರಮುಖ ಪಾತ್ರವಹಿಸಿದರು. ಅವರೂ ಸಹ ಕಾರ್ಬಿನ್‌ರಂತೆ ಅಪಾಯಗಳನ್ನು ಎದುರಿಸಲು ಹೆದರುವುದಿಲ್ಲ. ಕಾರ್ಬಿನ್ ಮತ್ತು ಮೆಲೆಂಚೋನ್ ಇಬ್ಬರೂ ಕೂಡ ಪ್ಯಾಲೆಸ್ತೀನ್‌ನ ಬೆಂಬಲಕ್ಕೆ ನಿಂತಿದ್ದಾರೆ. ಅದಕ್ಕಾಗಿ ಪಾಶ್ಚಿಮಾತ್ಯ ಮಾಧ್ಯಮಗಳು ಅವರನ್ನು ಅವಮಾನಿಸುತ್ತಿವೆ.

ಫ್ರಾನ್ಸ್‌ನಲ್ಲಿ ಅಧಿಕಾರ ಈಗ ಎಡ ಅಥವಾ ಬಲ ಯಾರ ಕೈಗೆ ಬೇಕಾದರೂ ಹೋಗಬಹುದು. ಇದನ್ನು ಹೊರತುಪಡಿಸಿ ಹೆಚ್ಚಿನ ದೇಶಗಳು ತೀವ್ರ ಬಲಪಂಥೀಯತೆಗೆ ಸಾಕ್ಷಿಯಾಗುತ್ತಿವೆ. ಯುರೋಪಿಯನ್ ಸಂಸತ್ತಿನ ಚುನಾವಣೆಯು ಮುಂದಿನ ಜೂನ್‌ನಲ್ಲಿ ನಿಗದಿಯಾಗಿದೆ. ಇದರಲ್ಲಿ ಬಲಪಂಥೀಯ ಬಣವು ಗಮನಾರ್ಹ ಪ್ರದರ್ಶನವನ್ನು ದಾಖಲಿಸಿ ಆರನೇ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಏರುವ ಸಾಧ್ಯತೆ ಇದೆ. ಎರಡನೆಯ ಮಹಾಯುದ್ಧದ ನಂತರ ಮುಖ್ಯ ವಾಹಿನಿಯ ರಾಜಕೀಯದಿಂದ ಅಕ್ಷರಶಃ ಕಾಣೆಯಾಗಿದ್ದ ತೀವ್ರ ಬಲಪಂಥೀಯರು ಹೇಗೆ ಜನಪ್ರಿಯರಾದರು? ನಿರಾಶ್ರಿತರ ಬಿಕ್ಕಟ್ಟು ಅವರಿಗೆ ಉಸಿರು ನೀಡಿತೆ? ಅಥವಾ ಬೇರೆ ಕಾರಣಗಳಿವೆಯೇ? ಮಧ್ಯಮ ಎಡಪಂಥೀಯರು, ಸೋಷಿಯಲ್ ಡೆಮೊಕ್ರೆಟ್ಸ್ ಅಥವಾ ಮಧ್ಯಮ ಬಲಪಂಥೀಯರ ಅವನತಿಯು ತೀವ್ರ ಬಲಪಂಥೀಯರ ಉದಯಕ್ಕೆ ಕಾರಣವಾಗಿದೆಯೇ? ಇದು ಚರ್ಚೆಗೆ ಬಿಟ್ಟ ವಿಷಯ. ಆದರೆ ಇದು ಯುರೋಪಿಗೆ ಸಂತೋಷದ ಸಮಯವಂತೂ ಅಲ್ಲ ಎಂಬುದು ಸತ್ಯ.

ಬ್ರಿಟನ್‌ನಲ್ಲಿ ಜೆರೆಮಿ ಕಾರ್ಬಿನ್ ಲೇಬರ್ ಪಕ್ಷದ ನಾಯಕತ್ವದ ಚುಕ್ಕಾಣಿ ಹಿಡಿದಾಗ ರಾಜಕೀಯದಲ್ಲಿ ಎಡಪಂಥೀಯತೆಯ ಕಡೆಗೆ ಇದ್ದಂತಹ ಒಲವು ಈಗ ಕಾಣುತ್ತಿಲ್ಲ. ಲೇಬರ್ ಪಕ್ಷವು ಮುಂದಿನ ಚುನಾವಣೆಯಲ್ಲಿ ಗೆಲ್ಲುವ ಸಾಧ್ಯತೆ ಇದೆ. ಆದರೆ ಅದರ ಮಧ್ಯಮ ಎಡಪಂಥೀಯ ಒಲವು ಬಲಪಂಥೀಯತೆಯ ಕಡೆಗೆ ವಾಲುತ್ತಿದೆ. ಕಾರ್ಬಿನ್‌ರನ್ನು ಈಗಾಗಲೇ ಗಡಿಪಾರು ಮಾಡಲಾಗಿದೆ.

ಗ್ರೀಸ್‌ನ ಕಮ್ಯುನಿಸ್ಟ್ ಪಕ್ಷವು ಈಗ ಅತ್ಯಂತ ಶಕ್ತಿಶಾಲಿಯಾಗಿದೆ ಮತ್ತು ಅದರ ಮತಗಳನ್ನು ಹೆಚ್ಚಿಸಿಕೊಂಡಿದೆ. ಆದರೆ ಆ ದೇಶದ ಒಟ್ಟು ಮತಗಳಿಗೆ ಹೋಲಿಸಿದರೆ ಅದು ತುಂಬಾ ಕಡಿಮೆ. ಪೋರ್ಚುಗಲ್ ಮತ್ತು ಆಸ್ಟ್ರಿಯಾದ ಕೆಲವು ಭಾಗಗಳಲ್ಲಿ ಕಮ್ಯುನಿಸ್ಟರು ಪ್ರಬಲರಾಗಿದ್ದಾರೆ. ರಾಜಧಾನಿ ವಿಯೆನ್ನಾದ ನಂತರ ಆಸ್ಟ್ರಿಯಾದ ಎರಡನೇ ಅತಿದೊಡ್ಡ ನಗರವಾದ ಗ್ರಾಜ್‌ನ ಮೇಯರ್ ಕಮ್ಯುನಿಸಂ ಅನ್ನು ಪ್ರತಿಪಾದಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಪೋರ್ಚುಗಲ್ ಸಂಸತ್ತಿನಲ್ಲಿ ಕೆಲವು ಪೋರ್ಚುಗೀಸ್ ಕಮ್ಯುನಿಸ್ಟ್ ಸದಸ್ಯರಿದ್ದಾರೆ. ಯುರೋಪಿನ ಸಂಸತ್ತಿನಲ್ಲಿ ಮುಂದಿನ ಚುನಾವಣೆಯ ಹೊತ್ತಿಗೆ ತೀವ್ರ ಬಲಪಂಥೀಯರು ಹೆಚ್ಚಾಗುವುದು ನಿಜ. ಆದರೆ ಎಡಪಂಥೀಯರ ಪರಿಸ್ಥಿತಿಯು ಅಷ್ಟೇನೂ ಕೆಟ್ಟದಾಗಿರುವುದಿಲ್ಲ. ಸಮಸ್ಯೆ ಎಂದರೆ ಎಡಪಂಥೀಯರು ಹಲವಾರು ಗುಂಪುಗಳಾಗಿ ವಿಭಜಿತರಾಗಿದ್ದಾರೆ.

ಆದರೆ ಎಲ್ಲವನ್ನೂ ಚುನಾವಣೆಯ ಲೆಕ್ಕಾಚಾರದಿಂದ ನಿರ್ಧರಿಸಲಾಗುವುದಿಲ್ಲ. ಯುರೋಪಿನಾದ್ಯಂತ ಕಾರ್ಮಿಕರ ಚಳುವಳಿಯ ದೊಡ್ಡ ಅಲೆ ಎದ್ದಿದೆ. ಬಲಪಂಥೀಯರ ವಿಪರೀತ ಹೊರಹೊಮ್ಮಿಕೆಯ ಈ ಸಂದರ್ಭದಲ್ಲಿ ಇದು ಅತ್ಯಂತ ಪ್ರೋತ್ಸಾಹದಾಯಕವಾಗಿದೆ. ಬ್ರಿಟನ್‌ನಲ್ಲೂ ಕೂಡ ಒಂದರ ಮೇಲೊಂದರಂತೆ ಮುಷ್ಕರಗಳು ನಡೆಯುತ್ತಿವೆ. ಕಿರಿಯ ವೈದ್ಯರು ಸತತ ಮುಷ್ಕರದಲ್ಲಿದ್ದಾರೆ. ಲಂಡನ್ನಿನ ರೈಲ್ವೆ ಕಾರ್ಮಿಕರು ಹಾಗೂ ಟ್ಯೂಬ್ ರೈಲ್ವೇ ಕಾರ್ಮಿಕರು ಕೂಡ ಅದೇ ದಾರಿಯಲ್ಲಿದ್ದಾರೆ. ಕಳೆದ ಜನವರಿ 18 ರಂದು ಲಕ್ಷಗಟ್ಟಲೆ ಕಾರ್ಮಿಕರ ಮುಷ್ಕರದಿಂದ ಇಡೀ ಉತ್ತರ ಐರ್ಲೆಂಡ್ ಸ್ತಬ್ಧವಾಗಿತ್ತು. ಉತ್ತರ ಐರ್ಲೆಂಡಿನ ಇತಿಹಾಸದಲ್ಲೇ ಇದು ಅತ್ಯಂತ ಬೃಹತ್ ಮುಷ್ಕರ ಎಂದು ಕರೆಯಲ್ಪಟ್ಟಿದೆ. ಇತರ ಯುರೋಪಿಯನ್ ರಾಷ್ಟ್ರಗಳಲ್ಲೂ ಕೂಡ ಪರಿಸ್ಥಿತಿ ಹೀಗೆಯೇ ಇದೆ. ಸ್ವೀಡನ್‌ನ ಟೆಸ್ಲಾ ಸ್ಟೋರ್‌ಗಳ ಕಾರ್ಮಿಕರು ಚಳುವಳಿಯ ಹಾದಿಯಲ್ಲಿದ್ದಾರೆ. ಇತರ ದೇಶಗಳ ಕಾರ್ಮಿಕರು ಸಹ ಸ್ವೀಡಿಶ್ ಕಾರ್ಮಿಕರೊಂದಿಗೆ ಐಕಮತ್ಯ ಪ್ರದರ್ಶಿಸುತ್ತಾ ಬೀದಿಗಳಿಯುತ್ತಿದ್ದಾರೆ. ಈ ಟೆಸ್ಲಾ ಕಾರ್ಮಿಕರ ಚಳುವಳಿ ಇತಿಹಾಸವನ್ನು ಸೃಷ್ಟಿಸುತ್ತಿದೆ. ಜರ್ಮನಿ ಮತ್ತು ಫ್ರಾನ್ಸ್‌ನ ರೈತರು ತಮ್ಮ ಟ್ರ್ಯಾಕ್ಟರ್‌ಗಳೊಂದಿಗೆ ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಅವರು ಪ್ಯಾರಿಸ್‌ಗೆ ಹೋಗುವ ಹಲವಾರು ಪ್ರಮುಖ ರಸ್ತೆಗಳನ್ನು ಅಡ್ಡಗಟ್ಟಿದ್ದಾರೆ.

ಅರ್ಜೆಂಟೈನಾ, ಲ್ಯಾಟಿನ್ ಅಮೆರಿಕದ ಕಾರ್ಮಿಕ ವರ್ಗವು ಆರಂಭದಲ್ಲಿ ಹಿಂಜರಿದರೂ ಈಗ ಇತ್ತೀಚಿಗೆ ದೇಶದ ಅಧ್ಯಕ್ಷರಾಗಿ ಆಯ್ಕೆಯಾದ ಸ್ವಯಂಘೋಷಿತ ಅರಾಜಕ ಬಂಡವಾಳಶಾಹಿ ಜೇವಿಯರ್ ಗೆರಾರ್ಡೋ ಮಿಲೀ ವಿರುದ್ಧ ಮುಷ್ಕರಗಳನ್ನು ಆಯೋಜಿಸಿದೆ. ಅಂತೆಯೇ ಯುರೋಪಿನ ಕಾರ್ಮಿಕರ ಮತ್ತು ರೈತರ ಅವಿರತ ಹೋರಾಟವು ಬಲಪಂಥೀಯರು ಹರಡಿರುವ ಕತ್ತಲೆಯಲ್ಲಿ ಬೆಳಕಿನ ಕಿಡಿಗಳಂತೆ ಹೊಳೆಯುತ್ತಿವೆ.

## ಕಾಮ್ರೇಡ್ ವೇಣುಗೋಪಾಲ್ ಲಾಲ್ ಸಲಾಂ!



ನಮ್ಮ ಪಕ್ಷದ ಹಿರಿಯ ಪಾಲಿಟ್ ಬ್ಯುರೋ ಸದಸ್ಯರು ಹಾಗೂ ಕೇರಳ ರಾಜ್ಯದ ನಿಕಟಪೂರ್ವ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ವೇಣುಗೋಪಾಲ್‌ರವರು ತಮ್ಮ 67ನೇ ವಯಸ್ಸಿನಲ್ಲಿ, ಇದೇ ಮಾರ್ಚ್ 30 ರಂದು ಕೊನೆಯುಸಿರೆಳೆದರು. ಕಳೆದ ಕೆಲವು ಕಾಲದಿಂದ ಅನಾರೋಗ್ಯ ಪೀಡಿತರಾಗಿದ್ದ ಅವರು ಕೊನೆಗೆ ಹೃದಯಾಘಾತದಿಂದ ನಿಧನರಾದರು. ತಾವು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗಲೇ ಕಾಮ್ರೇಡ್ ಶಿವದಾಸ್ ಘೋಷ್ ಅವರ ಚಿಂತನೆಗಳಿಂದ ಆಕರ್ಷಿತರಾದ ಅವರು ಕೊನೆಯುಸಿರಿನವರೆಗೂ ಪಕ್ಷಕ್ಕೆ ಸೇವೆ ಸಲ್ಲಿಸಿದರು. ವಿದ್ಯಾರ್ಥಿ ನಾಯಕರಾಗಿ, ಜನತೆಯ ಪ್ರತಿರೋಧ ಸಮಿತಿಯ ಕಾರ್ಯದರ್ಶಿಯಾಗಿ ಕೇರಳದ ಜನ ಚಳುವಳಿಗಳನ್ನು ಸರಿಯಾದ ದಿಕ್ಕಿಗೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದರು. ರಾಜ್ಯ ಕಾರ್ಯದರ್ಶಿಯಾಗಿಯೂ, ಪಾಲಿಟ್ ಬ್ಯುರೋ ಸದಸ್ಯರಾಗಿಯೂ ಕೇರಳ ರಾಜ್ಯದಲ್ಲಿ ಪಕ್ಷವನ್ನು ಮುನ್ನಡೆಸುವಲ್ಲಿಯೂ ಸಮರ್ಥ ನಾಯಕತ್ವವನ್ನು ನೀಡಿದ್ದರು.

ಅವರ ಗೌರವಾರ್ಥ ದೇಶದಾದ್ಯಂತ ಪಕ್ಷದ ಎಲ್ಲಾ ಕಛೇರಿಗಳಲ್ಲಿ ಮೂರು ದಿನಗಳ ಕಾಲ ಪಕ್ಷದ ಬಾವುಟವನ್ನು ಅರ್ಧಮಟ್ಟಕ್ಕೆ ಹಾರಿಸಿ ಸಂತಾಪ ಸೂಚಿಸಲಾಯಿತು.

## 'ಎನ್‌ಡಿಎ' ಅಥವಾ 'ಇಂಡಿಯಾ' – ಇವೆರಡೂ ಜನಪರ ಪರ್ಯಾಯಗಳಲ್ಲ!

5ನೇ ಪುಟದಿಂದ ಪರ್ಯಾಯವಾಗಿದೆ. ಎಲ್ಲಾ ಎಡ ಹಾಗೂ ನೈಜ ಪ್ರಜಾತಾಂತ್ರಿಕ ಮೌಲ್ಯಗಳನ್ನು ಹೊಂದಿರುವ ಶಕ್ತಿಗಳನ್ನು ಸೇರಿಸಿಕೊಂಡು ಜನರ ಮುಂದೆ ಹೊಸದೊಂದು ಜನಪರ ಪರ್ಯಾಯವನ್ನು ಇಡಬಹುದು ಎಂಬ ನಮ್ಮ ಕರೆಗೆ ಸ್ಪಂದಿಸದೇ 'ಇಂಡಿಯಾ' ಕೂಟವನ್ನು ಸಿಪಿಐ(ಎಂ), ಸಿಪಿಐನಂತಹ ಎಡಪಕ್ಷಗಳು ಸೇರಿರುವ ಹಿನ್ನೆಲೆಯಲ್ಲಿ ನಮ್ಮ ಪಕ್ಷವು ಜನ ಹೋರಾಟಗಳನ್ನು ಸಶಕ್ತಗೊಳಿಸಲು ಯಾವುದೇ ರಾಜಿಗೆ ಒಳಗಾಗದೆ ಈ ಬಾರಿ ಏಕಾಂಗಿಯಾಗಿಯೇ ಸ್ಪರ್ಧಿಸಿದೆ. ನಿಜವಾಗಿಯೂ ಜನಪರ ದನಿಯನ್ನು ಸಂಸತ್ತಿನಲ್ಲಿ ಮೊಳಗಿಸುವ, ಜನ ಹೋರಾಟಗಳ ನಡುವೆಯಿಂದ ಹೊರಹೊಮ್ಮಿರುವ, ಸ್ವಾರ್ಥವನ್ನು ಮೀರಿದ ನೈಜ ಜನಪರ ಕಾಳಜಿ ಇರುವ ಅಭ್ಯರ್ಥಿಗಳನ್ನು ದೇಶದಾದ್ಯಂತ ಚುನಾಯಿಸಲು ಪ್ರಜ್ಞಾವಂತ ಜನರನ್ನು ಆಗ್ರಹಿಸುತ್ತಿದೆ.

ಈ ಚುನಾವಣೆಯು ನಮ್ಮ ಪಕ್ಷ ಎಸ್‌ಯುಸಿಐ(ಸಿ)ಗೆ ಶೋಷಕ ಹಾಗೂ ಶೋಷಿತರ ನಡುವಿನ ಸಮರದಲ್ಲಿ ಇನ್ನೊಂದು ಹೋರಾಟದ ಮೆಟ್ಟಿಲಾಗಿದೆ. ಸಾಮಾನ್ಯ ಜನರ ನಡುವಿನಿಂದ ಬೆಳೆಯುತ್ತಾ ಬಂದು ಕಳೆದ 75 ವರ್ಷಗಳಿಂದ ನಿರಂತರವಾಗಿ, ಪರಿಶ್ರಮದಾಯಕವಾದ ಆದರೆ, ಅತ್ಯಂತ ತೃಪ್ತಿದಾಯಕ, ಸಾರ್ಥಕ ಹೋರಾಟವನ್ನು ಕಟ್ಟುತ್ತಿರುವ ನಮ್ಮ ಪಕ್ಷವು ದೇಶದ 19 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 151 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ದೇಶದ ಮತದಾರರ ಮುಂದೆ ಒಂದು ಜನಪರ ಪರ್ಯಾಯವನ್ನು ಇಟ್ಟಿದೆ. ಕರ್ನಾಟಕ ರಾಜ್ಯದಲ್ಲಿ 19 ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಉಮೇದುವಾರರು ಚುನಾವಣಾ ಕಣದಲ್ಲಿದ್ದಾರೆ. ಪಕ್ಷವು ಆಯ್ಕೆ ಮಾಡಿರುವ ಎಲ್ಲ ಸ್ಪರ್ಧಿಗಳೂ ಸಹ ತಮ್ಮ ಬದುಕನ್ನು ಜನಪರ ಹೋರಾಟಗಳಿಗೆ ಮುಡಿಪಾಗಿಟ್ಟಿರುವವರು.

**ಕೊನೆಗೊಂದು ಮನವಿ. ಎಲ್ಲೆಲ್ಲಿ, ನಮ್ಮ ಪಕ್ಷ ಎಸ್‌ಯುಸಿಐ(ಸಿ) ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆಯೋ, ಅಲ್ಲಿ ನಮ್ಮ ಅಭ್ಯರ್ಥಿಗೆ ಮತ ಚಲಾಯಿಸಿ; ಅದು ಸಾಧ್ಯವಿಲ್ಲದಿದ್ದ ಕಡೆಯಲ್ಲಿ, ಜನ ಹೋರಾಟಗಳಲ್ಲಿ ಹದಗೊಂಡಿರುವ ಅಭ್ಯರ್ಥಿಯನ್ನು ಚುನಾಯಿಸಿ; ಇದೂ ಸಹ ಸಾಧ್ಯವಿರದಿರುವ ಕಡೆಗಳಲ್ಲಿ, ಜನಗಳೇ ಮುಂದೊಡಗಿನಿಂದ ಮುಂಬಂದು ತಮ್ಮ ಹೋರಾಟದ ಅಸ್ತ್ರವಾಗಿ ಜನ ಸಮಿತಿಗಳನ್ನು ರಚಿಸಿಕೊಂಡು ನಿಮ್ಮ ಅಭ್ಯರ್ಥಿಯನ್ನು ನೀವೇ ಕಣಕ್ಕಿಳಿಸಿ; ಇದೂ ಸಹ ಅಸಾಧ್ಯವಾದಲ್ಲಿ, ಜನಪರ ಕಾಳಜಿ ಇರುವ ಮತ್ತು ಜನಪರ ನಿಷ್ಠೆಯುಳ್ಳ ವ್ಯಕ್ತಿಯನ್ನು ಆರಿಸಬೇಕು ಎಂಬುದು ನಮ್ಮ ನಲ್ಮೆಯ ಮನವಿ. ಆಯ್ಕೆ ಮತದಾರರ ಮನಸ್ಸಾಕ್ಷಿಗೆ ಬಿಟ್ಟದ್ದು.**

# ರೈತ ಮತ್ತು ಕಾರ್ಮಿಕರ ಒಗ್ಗಟ್ಟಿನ ಹೋರಾಟವನ್ನು ಮತ್ತಷ್ಟು ಬಲಪಡಿಸಿದ ಅಖಿಲ ಭಾರತ ಗ್ರಾಮೀಣ ಬಂದ್

ಮೋದಿ ಸರ್ಕಾರದ ರೈತ ವಿರೋಧಿ, ಕಾರ್ಮಿಕ ವಿರೋಧಿ ಮತ್ತು ಕಾರ್ಪೊರೇಟ್ ಪರ ನೀತಿಗಳ ವಿರುದ್ಧ **ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಮತ್ತು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು)** ಕರೆ ನೀಡಿದ **ಅಖಿಲ ಭಾರತ ಗ್ರಾಮೀಣ ಬಂದ್ ಹಾಗೂ ಸೆಕ್ಟೋರಲ್ ಕೈಗಾರಿಕಾ ಮುಷ್ಕರಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ಸಿಕ್ಕಿತು ಮತ್ತು ಭಾರಿ ಯಶಸ್ಸು ದೊರಕಿತು.**

2020ರಲ್ಲಿ ದೆಹಲಿಯಲ್ಲಿ ರೈತರ ಐತಿಹಾಸಿಕ ಚಳುವಳಿಯು ಕೊನೆಗೊಳ್ಳಲು ಪ್ರಧಾನ ಮಂತ್ರಿ ಮೋದಿಯವರು ಹೋರಾಟನಿರತ ರೈತರೊಂದಿಗೆ ಮಾಡಿಕೊಂಡ ಒಪ್ಪಂದವೇ ಕಾರಣವಾಗಿದೆ. ಆದರೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅದನ್ನು ಗೌರವಿಸದಿರುವುದು ರೈತ ಸಮುದಾಯದಲ್ಲಿ ಆಕ್ರೋಶ ಕೆರಳಿಸಿತು.

ಹೀಗಾಗಿ ರಾಷ್ಟ್ರೀಯ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಎಸ್‌ಕೆಎಂ ಸಂಘಟನೆಯ ರಾಜ್ಯ ಮತ್ತು ಜಿಲ್ಲಾ ಮಟ್ಟದ ಘಟಕಗಳು ನಡೆಸಿದ ಚಟುವಟಿಕೆಗಳು ಕೂಡ ತುಳಿತಕ್ಕೊಳಗಾದ ರೈತರ ಮತ್ತು ಕಾರ್ಮಿಕರ ಒಗ್ಗಟ್ಟಿನ ಹೋರಾಟವನ್ನು ಗಟ್ಟಿಗೊಳಿಸಿವೆ. ಮೊದಲು, 2024, ಜನವರಿ 26 ರಂದು ಕಾರ್ಮಿಕರು ಮತ್ತು ರೈತರು ವಿವಿಧ ರಾಜ್ಯಗಳಲ್ಲಿ ರಾಜಭವನದ ಮುಂದೆ ಮಹಾಧರಣಿಗಳನ್ನು ಸಂಘಟಿಸಿದ್ದರು ಮತ್ತು ಜಿಲ್ಲೆಗಳಲ್ಲಿರುವ ಕೇಂದ್ರ ಸರ್ಕಾರದ ಕಚೇರಿಗಳ ಮುಂದೆ ರ್‍ಯಾಲಿಗಳನ್ನು ಸಂಘಟಿಸಿದ್ದರು. ಈ ಚಳುವಳಿಗಳ ಮುಂದುವರಿಕೆಯಾಗಿ ರೈತರ ಮತ್ತು ಕಾರ್ಮಿಕರ ಕಾನೂನುಬದ್ಧ ಹಕ್ಕೊತ್ತಾಯಗಳಿಗೆ ಒತ್ತಾಯಿಸಿ ಫೆಬ್ರವರಿ 16 ರಂದು ಎಸ್‌ಕೆಎಂ ಮತ್ತು ಜೆಸಿಟಿಯು ಜಂಟಿಯಾಗಿ ಗ್ರಾಮೀಣ ಬಂದ್ ಮತ್ತು ಸೆಕ್ಟೋರಲ್ ಕೈಗಾರಿಕಾ ಮುಷ್ಕರಕ್ಕೆ ಕರೆ ನೀಡಿದವು.

ಕೇರಳವನ್ನು ಹೊರತುಪಡಿಸಿ ಎಲ್ಲಾ ರಾಜ್ಯಗಳಲ್ಲಿ ಗ್ರಾಮೀಣ ಬಂದ್ ಮತ್ತು ಸೆಕ್ಟೋರಲ್ ಕೈಗಾರಿಕಾ ಮುಷ್ಕರದ ಪ್ರಚಾರ ಯಶಸ್ವಿಯಾಗಿ ಮುನ್ನಡೆಯಿತು. ಕೇರಳದಲ್ಲಿ ಜೆಸಿಟಿಯು ಮತ್ತು ರೈತರು ಹಾಗೂ ಕೃಷಿ ಕಾರ್ಮಿಕರ ಸಂಘಟನೆಗಳ ಜಂಟಿ ವೇದಿಕೆಯು ರಾಜಭವನದವರೆಗೆ ಮೆರವಣಿಗೆ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರ ಸರ್ಕಾರದ ಕಚೇರಿಗಳ ಮುಂದೆ ಧರಣಿ ಮಾತ್ರ ನಡೆಸಿತು ಹಾಗೂ ಹೋರಾಟವನ್ನು ಕೇಂದ್ರದ ವಿರುದ್ಧ ಸಾಂಕೇತಿಕ ಪ್ರತಿಭಟನೆಗೆ ಸೀಮಿತಗೊಳಿಸಿತು.

ಗ್ರಾಮೀಣ ಬಂದ್ ಯಶಸ್ವಿಗೊಳಿಸಲು ಪಶ್ಚಿಮ ಬಂಗಾಳ, ಒಡಿಸ್ಸಾ, ಅಸ್ಸಾಂ, ಪಂಜಾಬ್, ಹರಿಯಾಣ, ಮಧ್ಯಪ್ರದೇಶ, ಕರ್ನಾಟಕ, ಉತ್ತರ ಪ್ರದೇಶ, ಜಾರ್ಖಂಡ್, ದೆಹಲಿ ಮತ್ತು ತ್ರಿಪುರ ರಾಜ್ಯಗಳಲ್ಲಿ ಎಸ್‌ಕೆಎಂನ ಪ್ರಮುಖ ಸಂಘಟನೆಗಳಲ್ಲಿ ಒಂದಾದ ಎಐಕೆಕೆಎಂಎಸ್ ವ್ಯಾಪಕ ಸಿದ್ಧತೆ ನಡೆಸಿತು. ಇನ್ನಿತರ ಹಲವಾರು ಸಮಾನ-ಮನಸ್ಕ ಸಮೂಹ ಸಂಘಟನೆಗಳು ಬಂದ್‌ಗೆ ಬೆಂಬಲ ನೀಡಿದವು.

ಅಷ್ಟರಲ್ಲಿ, ಒಂದು ಕಾಲದಲ್ಲಿ ಎಸ್‌ಕೆಎಂ ಭಾಗವಾಗಿದ್ದ ನಂತರ ದುರದೃಷ್ಟವಶಾತ್ ಅದರಿಂದ ಹೊರಬಂದ ಕೆಲವು ರೈತ ಸಂಘಟನೆಗಳು ಕಿಸಾನ್ ಮೋರ್ಚಾ(ರಾಜಕೀಯೇತರ) ಎಂಬ ಹೆಸರಿನಲ್ಲಿ ಪಂಜಾಬಿನ ಒಂದು ಭಾಗದ ರೈತರನ್ನು ಸಂಘಟಿಸಿ, ಫೆಬ್ರವರಿ 13 ರಂದು ಶಂಬು ಮತ್ತು ಇನ್ನಿತರ ಪಂಜಾಬ್-ಹರಿಯಾಣ ಗಡಿಭಾಗಗಳಲ್ಲಿ ಬೀಡು ಬಿಟ್ಟವು. ಅವರು ಅದನ್ನು ರೈತರ 'ದೆಹಲಿ ಮಾರ್ಚ್' ಎಂದು ಕರೆದರು.

ಈ ಘಟನೆಗಳನ್ನು ಅನುಸರಿಸಿ, ಫೆಬ್ರವರಿ 13 ರಂದು ಎಸ್‌ಕೆಎಂ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿ, ಸರ್ಕಾರವು ಹರಿಬಿಟ್ಟ ದಮನಕಾರಿ ಕ್ರಮಗಳನ್ನು ಬಲವಾಗಿ ಪ್ರತಿಭಟಿಸಲು ಎಲ್ಲಾ ಭಾಗಿದಾರಿ ಸಂಘಟನೆಗಳಿಗೆ ಕರೆ ನೀಡಿತು; ಹಾಗೆಯೇ ಫೆಬ್ರವರಿ 16 ರಂದು ಗ್ರಾಮೀಣ ಬಂದ್ ನಡೆಸುತ್ತಾ, ಮುಂದೆ ವಿಷಯಾಧಾರಿತ ಜಂಟಿ ಹೋರಾಟಕ್ಕೆ ಸಿದ್ಧರಾಗಲು ಎಲ್ಲಾ ಸಮಾನ-ಮನಸ್ಕ ಸಂಘಟನೆಗಳಿಗೂ ಕರೆ ನೀಡಿತು. ಈ ಹೇಳಿಕೆಯಲ್ಲಿ ರೈತರ ಬೇಡಿಕೆಗಳನ್ನು ಈಡೇರಿಸಲು ತುರ್ತಾಗಿ ಮಾತುಕತೆಗೆ ಕರೆಯಲು ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿಕೊಂಡು ಪತ್ರ ಬರೆಯಬೇಕೆಂದು ಉಲ್ಲೇಖಿಸಿತ್ತು. ಈ ಬೇಡಿಕೆಗಳನ್ನು ಬಗೆಹರಿಸದಿದ್ದರೆ ರೈತ ಸಂಘಟನೆಗಳು ಪ್ರಜಾತಾಂತ್ರಿಕ ರೀತಿಯಲ್ಲಿ ತಮ್ಮ ಪ್ರತಿಭಟನೆಯನ್ನು ಮುಂದುವರೆಸುತ್ತವೆ ಮತ್ತು ತೀವ್ರಗೊಳಿಸುತ್ತವೆ ಎಂದು ಪತ್ರಿಕಾ ಹೇಳಿಕೆಯು ಎಚ್ಚರಿಸಿತ್ತು. ಪ್ರದರ್ಶನಗಳನ್ನು ನಡೆಸಬೇಕಾಗುತ್ತದೆ ಎಂಬ ಎಚ್ಚರಿಕೆಯ ಸದ್ದನ್ನು ಮೊಳಗಿಸಿತ್ತು.

ಫೆಬ್ರವರಿ 16 ರ ಗ್ರಾಮೀಣ ಬಂದ್ ಸಂಪೂರ್ಣ ಯಶಸ್ಸು ಕಂಡಿತು. ಎಲ್ಲೆಡೆ ಸಾಮಾನ್ಯ ಜೀವನವು ಅಸ್ತವ್ಯಸ್ತಗೊಂಡಿತ್ತು. ಹರಿಯಾಣ ಸರ್ಕಾರವು ಲಾಠಿ ಚಾರ್ಜ್, ಜಲ ಫಿರಂಗಿ, ಅಶ್ರುವಾಯು, ರಬ್ಬರ್ ಬುಲೆಟ್, ಕಾಂಕ್ರೀಟ್ ಚಪ್ಪಡಿಗಳ ರಸ್ತೆ ತಡೆ ಮತ್ತು ದೊಡ್ಡ ಸಂಖ್ಯೆಯಲ್ಲಿ ಮುಳ್ಳುಗಳನ್ನು ಬಳಸುವ ಮೂಲಕ ರೈತರ ಚಳುವಳಿಯನ್ನು ಎದುರಿಸಿತು. ಸರ್ಕಾರವು ದೇಶದ ಶತ್ರುಗಳೊಂದಿಗೆ ಯುದ್ಧ ಮಾಡುತ್ತಿರುವಂತಿತ್ತು. ಶಾಂತಿಯುತವಾಗಿ ಪ್ರತಿಭಟಿಸುವ ಹಕ್ಕನ್ನು ಕೂಡ ನಿರಾಕರಿಸಲಾಯಿತು. **ಹರಿಯಾಣದ ಎಐಕೆಕೆಎಂಎಸ್ ರಾಜ್ಯ ಅಧ್ಯಕ್ಷರನ್ನೂ ಒಳಗೊಂಡಂತೆ ರೈತ ನಾಯಕರನ್ನು ಬಂಧಿಸಲಾಯಿತು.** ಪಶ್ಚಿಮ ಬಂಗಾಳದಲ್ಲಿ ಹೈಯರ್ ಸೆಕೆಂಡರಿ ಪರೀಕ್ಷೆ ಫೆಬ್ರವರಿ 16 ರಿಂದ ಪ್ರಾರಂಭವಾಗುತ್ತಿತ್ತು ಆದ್ದರಿಂದ ಚಳುವಳಿಯನ್ನು ಫೆಬ್ರವರಿ 13 ಕ್ಕೇ ನಡೆಸಲು ತೀರ್ಮಾನಿಸಲಾಯಿತು. ಅಂದು ಸಾಮೂಹಿಕ ನಾಗರಿಕ ಕಾನೂನುಭಂಗ ಚಳುವಳಿಯನ್ನು ಸಂಘಟಿಸಲಾಯಿತು. ಅದನ್ನು ಹೊರತುಪಡಿಸಿ ಫೆಬ್ರವರಿ 16 ರಂದು ಹಳ್ಳಿಗಳಲ್ಲಿ ವ್ಯಾಪಕವಾಗಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಸಂಘಟಿಸಲಾಗಿತ್ತು.

## ವಿಶ್ವದ ತುಳಿತಕ್ಕೊಳಗಾದ ಮಹಿಳೆಯರು ಸಂಘಟಿತ ಹೋರಾಟಕ್ಕೆ ಸಂಕಲ್ಪ ತೊಡುವ ಸ್ಫೂರ್ತಿಯ ದಿನ- ಮಾರ್ಚ್ 8, ಅಂತರರಾಷ್ಟ್ರೀಯ ಮಹಿಳಾ ದಿನ

ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ವಿವಿಧ ಬಡಾವಣೆ-ಹಳ್ಳಿಗಳಲ್ಲಿ, ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ಹಾಗೂ ದುಡಿಯುವ ಮಹಿಳೆಯರ ನಡುವೆ ಆಚರಿಸಲಾಯಿತು.



ಕೊಪ್ಪಳದಲ್ಲಿ ಮಹಿಳಾ ದಿನದ ಅಂಗವಾಗಿ ಒಂದು ದಿನದ ಶಿಬಿರ. ಶಿಬಿರಾರ್ಥಿಗಳನ್ನು ಉದ್ದೇಶಿಸಿ ಎಸ್‌ಯುಸಿಐ(ಸಿ) ನಾಯಕರಾದ ಕಾ.ರಾಮಾಂಜನಪ್ಪ ಆಲ್ದಳ್ಳಿ ಮಾತನಾಡಿದರು.




ಎಚ್ ಡಿ ಕೋಟೆಯಲ್ಲಿ ಆದಿವಾಸಿ ಮಹಿಳೆಯರು ಮತ್ತು ಆಶಾ ಕಾರ್ಯಕರ್ತೆಯರ ನಡುವೆ



ಧಾರವಾಡ ಜಿಲ್ಲೆಯ ಜೋಡಳ್ಳಿ ಗ್ರಾಮ



ಉತ್ತರ ಕನ್ನಡದ ಆದಿವಾಸಿ ಸಿದ್ಧಿ ಸಮುದಾಯದ ವಾಡ ಗ್ರಾಮ



ಬೆಂಗಳೂರಿನ ಕೊಳಗೇರಿ ಕೂಲಿನಗರ



ಮೈಸೂರಿನ ಶ್ರೀಕಂಠ ಪದವಿ ಕಾಲೇಜು




ಬಳ್ಳಾರಿಯಲ್ಲಿ ಎಐಎಮ್‌ಎಸ್‌ಎಸ್ ಮತ್ತು ಎಐಯುಟಿಯುಸಿಯಿಂದ ಜಂಟಿಯಾಗಿ ಜಿಲ್ಲಾ ಮಟ್ಟದ ಕಾರ್ಯಕ್ರಮ




ತುಮಕೂರಿನಲ್ಲಿ ನರ್ಸಿಂಗ್ ಕಾಲೇಜು

ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು 22-02-2024ರಂದು ನೀಡಿದ ಪತ್ರಿಕಾ ಹೇಳಿಕೆ:

# ರಷ್ಯಾದ ಸೈನ್ಯದಲ್ಲಿ ಭಾರತೀಯ ಯುವಕರನ್ನು ಬಲಿಪಶುಗಳನ್ನಾಗಿ ಬಳಸಬಾರದು

ಮಾಧ್ಯಮಗಳಲ್ಲಿ ವರದಿಯಾಗಿರುವಂತೆ (ದಿ ಹಿಂದೂ 20–02–24 ಮತ್ತು 22–02–24) ಭಾರತದ 100 ಕ್ಕೂ ಹೆಚ್ಚು ಯುವಕರನ್ನು ರಷ್ಯಾದ ಏಜೆನ್ಸಿಯಾದ ಮಾಸ್ಕೋ ನೇಮಕಾತಿ ಕೇಂದ್ರವು, ರಷ್ಯಾದ ಸೈನ್ಯದಲ್ಲಿ ಸೇನೆಯ ಸಹಾಯಕರಾಗಿ ನೇಮಕ ಮಾಡಿಕೊಂಡಿದೆ. ಈ ಭಾರತೀಯ ಯುವಕರಿಗೆ ನೀಡುವ ವೇತನದ ವಿವರಗಳನ್ನೂ ಸಹ ವರದಿ ಮಾಡಲಾಗಿದೆ. ಭಾರತ ಸರ್ಕಾರಕ್ಕೆ ಅದರ ಸಂಪೂರ್ಣ ಜ್ಞಾನವಿದೆ ಮತ್ತು ನೇಮಕಾತಿ ಏಜೆನ್ಸಿಯು ಅದರ ಅನುಮತಿಯನ್ನು ಹೊಂದಿದೆ ಎಂಬುದು ವರದಿಯಿಂದ ಸ್ಪಷ್ಟವಾಗಿದೆ. ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಭಾರತೀಯ ಜನರ ಬಡತನದ ಲಾಭವನ್ನು ಪಡೆದುಕೊಂಡು, ಯುವ ಭಾರತೀಯರನ್ನು ಬಲಿಪಶುಗಳನ್ನಾಗಿ ಮಾಡಿ ಸೈನ್ಯದಲ್ಲಿ ನೇಮಿಸಿಕೊಳ್ಳಲಾಗುತ್ತಿದೆ. ಪತ್ರಿಕೆಗಳು ಈ ಮಾಹಿತಿಯನ್ನು ಬಹಿರಂಗಪಡಿಸದೆ ಇದ್ದಿದ್ದರೆ, ಇದು ರಹಸ್ಯವಾಗಿ ಉಳಿಯುತ್ತಿತ್ತು. ಇತ್ತೀಚಿಗೆ ಮಾಧ್ಯಮಗಳಲ್ಲಿ ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವರು ರಷ್ಯಾ ಸರ್ಕಾರದ ಮೇಲೆ ಪಾಶ್ಚಿಮಾತ್ಯ ರಾಷ್ಟ್ರಗಳ ನಿರ್ಬಂಧದ ಹಿನ್ನೆಲೆಯಲ್ಲಿ ನೈಸರ್ಗಿಕ ಅನಿಲ ಮತ್ತು ತೈಲವನ್ನು ಭಾರತಕ್ಕೆ ಸರಬರಾಜು ಮಾಡಿದ್ದಕ್ಕಾಗಿ ಪ್ರಶಂಸೆಯ ಸುರಿಮಳೆಗೈದಿದ್ದಾರೆ. ನಿರುದ್ಯೋಗಿ ಬಡ ಭಾರತೀಯ ಯುವಕರನ್ನು ರಷ್ಯಾದ ಸೇನೆಯ ಸೇವೆಗೆ ಕಳುಹಿಸುವ ನಿರ್ಧಾರವು ಸಹಾಯಕ್ಕೆ ಪ್ರತಿ ಸಹಾಯದ ನೀತಿಗೆ ಅನುಗುಣವಾಗಿದೆಯೇ ಎಂಬುದು ಪ್ರಶ್ನಾರ್ಹ. ರಷ್ಯಾದ ಸೇನೆಯಿಂದ ಭಾರತೀಯ ಯುವಕರನ್ನು ಕಳುಹಿಸುವ ಈ 'ರಹಸ್ಯ ಒಪ್ಪಂದ'ವನ್ನು ನಾವು ಖಂಡಿಸುತ್ತೇವೆ ಮತ್ತು ವಿರೋಧಿಸುತ್ತೇವೆ ಮತ್ತು ಅದನ್ನು ತಕ್ಷಣವೇ ನಿಲ್ಲಿಸಬೇಕೆಂದು ಒತ್ತಾಯಿಸುತ್ತೇವೆ.



# ನಾಜಿವಾದದ ವಿರುದ್ಧ ಸಿಡಿದೆದ್ದ ಜರ್ಮನಿ ಜನತೆ: ಕೆಲ ಸಕಾಲಿಕ ಅಂಶಗಳು

ಜರ್ಮನಿಯಲ್ಲಿ ಇತ್ತೀಚೆಗೆ ವಿಶ್ವದ ಗಮನವನ್ನು ಸೆಳೆದ ವಿದ್ಯಮಾನವೊಂದು ಜರುಗಿತು. ಬಲಪಂಥೀಯ ಪಕ್ಷವಾದ ಎಎಫ್‌ಡಿ ವಿರುದ್ಧ ಸುಮಾರು ಎರಡು ಲಕ್ಷಕ್ಕೂ ಅಧಿಕ ಪ್ರತಿಭಟನಾಕಾರರು ಜರ್ಮನಿಯ ಪ್ರಮುಖ ನಗರ, ಪಟ್ಟಣಗಳಾದ ಬರ್ಲಿನ್, ಮ್ಯೂನಿಕ್, ಕೊಲೋನ್, ಲೈಪ್‌ಜೆಗ್ ಮತ್ತು ಡ್ರೆಸ್ಡೆನ್‌ಗಳಲ್ಲಿ ಬೀದಿಗಿಳಿದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಮ್ಯೂನಿಕ್ ನಗರದಲ್ಲಿ 'ನಾಜಿಗಳಿಗೆ ಜಾಗವಿಲ್ಲ', 'ನಾಜಿಗಳೇ ತೊಲಗಿ' ಎಂಬ ಧೀರೋದಾತ್ತ ಘೋಷಣೆಗಳನ್ನು ಕೂಗುತ್ತಾ ಲಕ್ಷಾಂತರ ಜನರು ಸಾಗಿದರು. ಈ ಜಮಸಾಗರ ವಿಸ್ತರಿಸುತ್ತಲೇ ಹೋದ ಕಾರಣ, ಪ್ರತಿಭಟನೆಯನ್ನು ಬೇಗನೆ ಕೊನೆಗೊಳಿಸುವ ಅನಿವಾರ್ಯತೆ ಉಂಟಾಯಿತು.

ಬಲಪಂಥೀಯ ಆಲ್ಟರ್ನೇಟಿವ್ ಆಫ್ ಜರ್ಮನಿ (ಎಎಫ್‌ಡಿ) ಪಕ್ಷವು ಜನಗಳ ಮೇಲೆ ದ್ವೇಷ ಹರಡುತ್ತಿರುವುದನ್ನು ಗಮನಿಸಿದ ಜರ್ಮನಿಯ ಸಾಂವಿಧಾನಿಕ ನ್ಯಾಯಾಲಯವು, ಇತರೆ ಪಕ್ಷಗಳು ಸರ್ಕಾರದಿಂದ ನ್ಯಾಯಬದ್ಧವಾಗಿ ನೆರವು ಪಡೆಯುವಂತೆ ಎಎಫ್‌ಡಿ ಪಕ್ಷವು ಪಡೆಯುವುದಕ್ಕೆ ನಿರ್ಬಂಧ ವಿಧಿಸಿದೆ. ಅಲ್ಲದೇ, ಪಕ್ಷವೊಂದರ ಮಾನ್ಯತೆಯನ್ನು ಹಿಂತೆಗೆದುಕೊಳ್ಳದೇ ಹಣಕಾಸನ್ನು ನಿಲ್ಲಿಸುವ ತೀರ್ಮಾನವನ್ನು ನ್ಯಾಯಾಲಯವು ಪ್ರಕಟಿಸಿದೆ. ಸಾಮಾಜಿಕ ಸಂಘಟನೆಗಳು, ಪ್ರಮುಖ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡ ಪಕ್ಷಗಳು, ಕಾರ್ಮಿಕ ಸಂಘಟನೆಗಳು, ಚರ್ಚುಗಳು, 'ಬಲಪಂಥದ ವಿರುದ್ಧ ಒಂದಾದವರು', 'ಕೊಲೋನ್ ಎದ್ದು ನಿಂತಿದೆ', 'ಪ್ರಜಾತಂತ್ರ ಉಳಿಯಲಿ' ಮೊದಲಾದ ಗುಂಪುಗಳು ಈ ಪ್ರತಿಭಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವು.

ಈ ನವ ನಾಜಿಗಳು ಜರ್ಮನಿಯ ಸಾಲ್‌ಫೆಲ್ಡ್–ರುಡೊಲ್ಫ್‌ಸ್ಟಡ್ತ್ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಾಬಲ್ಯವನ್ನು ಹೊಂದಿವೆ. ಇಲ್ಲಿ ಯುವಕರು ಬಹಿರಂಗವಾಗಿ ಹಿಟ್ಲರ್ ಸೆಲ್ಯೂಟ್ ಕೊಡುತ್ತಾರೆ. 1990ರ ದಶಕದ ಮಧ್ಯಭಾಗದಲ್ಲಿ ನವನಾಜಿಗಳು ಅಡಾಲ್ಫ್ ಹಿಟ್ಲರ್‌ನನ್ನು ವೈಭವೀಕರಿಸಿದರು. ಅಲ್ಲದೇ, ತುರಿಂಗಿಯಾ ಹೋಮ್‌ಲ್ಯಾಂಡ್ ಡಿಫೆನ್ಸ್ ಎಂಬ ಪುಂಡರ ಪಡೆಯನ್ನು ಕಟ್ಟಿದರು. ಕಾಲಾನಂತರದಲ್ಲಿ ಇದರಲ್ಲಿನ ಮೂವರು ಸದಸ್ಯರು ನ್ಯಾಷನಲಿಸ್ಟ್ ಸೋಷಲಿಸ್ಟ್ ಅಂಡರ್‌ಗ್ರೌಂಡ್ (ಎನ್‌ಎಸ್‌ಯು) ಎಂಬ ಭೂಗತ ಸಂಘಟನೆಯನ್ನು ಕಟ್ಟಿದರು. ಅದರ ಮೂಲಕ ಕೊಲೆ, ಬಾಂಬ್ ದಾಳಿ ಮತ್ತು ದರೋಡೆಗಳನ್ನು 1999ರಿಂದ 2007ರ ಅವಧಿಯಲ್ಲಿ ನಡೆಸಲಾರಂಭಿಸಿದರು. ಇದರ ಹಾವಳಿಯಿಂದಾಗಿ 10 ಜನ ಮೃತಪಟ್ಟರು.

ಇಷ್ಟಾಗಿಯೂ 11 ವರ್ಷಗಳ ಈ ಸಂಘಟನೆಯು, ಆಳ್ವಿಕ ಸಮ್ಮಿಶ್ರ ಸರ್ಕಾರವು ಹಲವು ಸಮಸ್ಯೆಗಳನ್ನು ನಿಭಾಯಿಸುವಲ್ಲಿ ತೋರಿದ ವೈಫಲ್ಯ, ಉಕ್ರೇನ್ ಯುದ್ಧದ ಪ್ರಕರಣದಿಂದ ಸಾರ್ವಜನಿಕ ಸೇವೆಗಳಲ್ಲಿನ ವ್ಯತ್ಯಯ, ಹಣದುಬ್ಬರದವರೆಗಿನ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಿದ್ದರಿಂದ ಇದಕ್ಕೆ ಜನಬೆಂಬಲ ಮುಂದುವರೆಯಿತು. 2013ರಲ್ಲಿ ಯುರೋ ವಲಯದ ಸಾಲದ ಬಿಕ್ಕಟ್ಟಿ ಕಾಲದಲ್ಲಿ ಯುರೋ–ವಿರೋಧಿಯಾಗಿ ಅಸ್ತಿತ್ವಕ್ಕೆ ಬಂದ ಪಕ್ಷವು, 2015ರಲ್ಲಿ ಅಂದಿನ ಚಾನ್ಸೆಲರ್ ಅಂಜೆಲಾ ಮರ್ಕೆಲ್ ಅವರ ನಿರಾಶ್ರಿತರನ್ನು ದೇಶದೊಳಗೆ ಬಿಟ್ಟುಕೊಳ್ಳುವ ನೀತಿಯ ಪರಿಣಾಮವಾಗಿ ಸಾವಿರಾರು ಜನರು ದೇಶದೊಳಗೆ ಬಂದದ್ದನ್ನು ತೀವ್ರವಾಗಿ ಖಂಡಿಸಿದ ಏಕೈಕ ಪಕ್ಷವಾಗಿದೆ. ಕೋವಿಡ್–19ರ ಸಂದರ್ಭದಲ್ಲಿ ಹೇರಲಾದ ಲಾಕ್‌ಡೌನ್ ವಿರುದ್ಧ ಎಎಫ್‌ಡಿಯು ಭಾರಿ ಪ್ರಚಾರ ನಡೆಸಿದ್ದರಿಂದಲೂ ಜನರು ಇದಕ್ಕೆ ಬೆಂಬಲ ನೀಡುವುದನ್ನು ಮುಂದುವರೆಸಿದರು.

ನಂತರದಲ್ಲಿ ಜರ್ಮನಿಯ ಮುಖ್ಯವಾಹಿನಿಯ ಪಕ್ಷಗಳು ಹಣದುಬ್ಬರದಿಂದಾಗಿ ಜೀವನ ನಡೆಸುವುದು ದುಬಾರಿಯಾಗಿದ್ದರ ಬಗ್ಗೆ ಯಾವುದೇ ಮಾತನ್ನಾಡದೆ ಇದ್ದಾಗ ಈ ಪಕ್ಷ ಬೆಂಬಲ ಗಳಿಸಿತು. ಅಲ್ಲದೇ, ಹಸಿರು ಇಂಧನ ಬಳಕೆ ಶುರು ಮಾಡಿರುವುದರಿಂದ ಅತಿಯಾದ ವೆಚ್ಚ ಪ್ರಜೆಗಳ ಮೇಲೆ ಆಗುತ್ತಿದೆ ಎಂದು ವಾದ ಮಂಡಿಸಲು ಶುರು ಮಾಡಿದ್ದರಿಂದ ಎಎಫ್‌ಡಿ ಜನರ ಮಧ್ಯೆ ಹೆಚ್ಚಿನ ಒಲವು ಗಳಿಸಿಕೊಳ್ಳಲಾರಂಭಿಸಿತು.

ಮತ್ತೊಂದೆಡೆ, ಆಧುನಿಕ ಜರ್ಮನಿಯ ಇತಿಹಾಸದಲ್ಲೇ ಸ್ಕೋಲ್ಝ್ ನೇತೃತ್ವದ ಸರ್ಕಾರ ಜನಪ್ರಿಯತೆಯನ್ನು ಕಳೆದುಕೊಂಡ ಸರ್ಕಾರವಾಗಿ ಹೊರಹೊಮ್ಮಿತು. ಈ ಅವಕಾಶವನ್ನು ಬಳಸಿಕೊಳ್ಳಲು ಮುಂದಾಗಿರುವ ಎಎಫ್‌ಡಿಯು ಯೂರೋಪಿಯನ್ ಸಂಸದೀಯ ಚುನಾವಣೆ ಹಾಗೂ ಪೂರ್ವ ಜರ್ಮನಿಯ ಮೂರು ರಾಜ್ಯಗಳ ಚುನಾವಣೆಯತ್ತ ತನ್ನ ಗಮನ ಹರಿಸಲು ಮುಂದಾಗಿದೆ. ಬರುವ ಸೆಪ್ಟಂಬರ್‌ನಲ್ಲಿ ಇಲ್ಲಿ ಮೊದಲ ಹಂತದ ಚುನಾವಣೆಗಳು ನಡೆಯಲಿವೆ.

ಜರ್ಮನಿಯ ಹಾಲಿ ಚಾನ್ಸೆಲರ್ ಓಲಾಫ್ ಶುಲ್ಝ್ ನೇತೃತ್ವದ ಸೋಷಿಯಲ್ ಡೆಮಾಕ್ರೆಟಿಕ್ ಪಕ್ಷ ಸೇರಿದಂತೆ ಮುಖ್ಯವಾಹಿನಿಯ ಪಕ್ಷಗಳು ಹೆಚ್ಚುತ್ತಿರುವ ಹಣದುಬ್ಬರ ಹಾಗೂ ಹೆಚ್ಚುತ್ತಿರುವ ಇಂಧನದ ದರದ ಕಾರಣಕ್ಕೆ ಜನರಿಂದ ತೀವ್ರ ಪ್ರತಿಭಟನೆಯನ್ನು ಎದುರಿಸುತ್ತಿದ್ದು, ಚುನಾವಣೆಯಲ್ಲಿ ಹಿನ್ನಡೆಯ ಭೀತಿ ಆವರಿಸಿದೆ. 2022ರ ಅಕ್ಟೋಬರ್‌ನಲ್ಲಿ ಹತ್ತಾರು ಸಾವಿರ ಜನರು ಜರ್ಮನಿಯ ಆರು ಪ್ರಮುಖ ನಗರಗಳಲ್ಲಿ ಬೀದಿಗಿಳಿದು ಹೆಚ್ಚುತ್ತಿರುವ ಇಂಧನ ದರವನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು, ಅಗತ್ಯ ವಸ್ತುಗಳ ಬೆಲೆ ನಿಯಂತ್ರಿಸಬೇಕು, ಹಾನಿಕಾರಕ ಇಂಧನ ಬಳಕೆಯನ್ನು ತಗ್ಗಿಸಬೇಕು ಎಂಬ ಬೇಡಿಕೆ ಇಟ್ಟುಕೊಂಡು ಪ್ರತಿಭಟನೆ ನಡೆಸಿದರು. ಜನವರಿ 8 ರಿಂದ ಒಂದು ವಾರ ಕಾಲ ಆ ದೇಶದ ರೈತರು ಸಬ್ಸಿಡಿ ಕಡಿತವನ್ನು ವಿರೋಧಿಸಿ ಎಲ್ಲ ಪ್ರಮುಖ ರಸ್ತೆಗಳಲ್ಲಿ ಟ್ರ್ಯಾಕ್ಟರ್‌ಗಳನ್ನು ನಿಲ್ಲಿಸಿ ರಸ್ತೆ ತಡೆ ನಡೆಸಿದರು.

ಸಾಂವಿಧಾನಿಕ ನ್ಯಾಯಾಲಯವು ಕಳೆದ ನವೆಂಬರ್‌ನಲ್ಲಿ ಶುಲ್ಝ್ ಸರ್ಕಾರದ ವೆಚ್ಚದ ಯೋಜನೆಗಳನ್ನು ತಿರಸ್ಕರಿಸಿತು. ಇದರಿಂದ ಸಂಕಷ್ಟಕ್ಕೆ ಒಳಗಾದ ಸರ್ಕಾರ ಒಂದೆಡೆ ಆಡಳಿತ ವಿರೋಧಿ ಪ್ರತಿಭಟನೆಗಳನ್ನು ನಿಭಾಯಿಸುವುದರ ಜೊತೆಗೆ ವಿತ್ತೀಯ ಶಿಸ್ತನ್ನು ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಗೆ ಒಳಗಾಯಿತು. ಈ ವಾತಾವರಣವನ್ನು ಸಮರ್ಥವಾಗಿ ಬಳಸಿಕೊಳ್ಳಲು ಮುಂದಾದ ಎಎಫ್‌ಡಿ ಪಕ್ಷವು ಈ ವರ್ಷದಲ್ಲಿ ನಡೆಯಲಿರುವ ಚುನಾವಣೆಗಳನ್ನು ಗಮನದಲ್ಲಿರಿಸಿಕೊಂಡು ಜರ್ಮನಿ ಜನತೆಯ ಪ್ರತಿಭಟನೆಯನ್ನು ಬೆಂಬಲಿಸಿತು.

ಆದರೆ, ಮುಖ್ಯವಾಗಿ ಎಎಫ್‌ಡಿ ಪಕ್ಷವು ನಿರಾಶ್ರಿತರು ನುಸುಳಿ ಬರುತ್ತಿರುವುದರಿಂದ ಜರ್ಮನ್ನರ ಉದ್ಯೋಗ ಮತ್ತು ಇತರ ಸವಲತ್ತುಗಳನ್ನು ಕಿತ್ತುಕೊಳ್ಳುತ್ತಾರೆ ಎಂದು ನಂಜು ಕಾರುವ ಮೂಲಕ ತನ್ನ ನೆಲೆಯನ್ನು ವಿಸ್ತರಿಸಿಕೊಂಡಿತು ಎಂದು ವರದಿಗಳು ಹೇಳಿತ್ತವೆ. ಆದರೆ, ಅವರು ತಮ್ಮ ದೇಶವನ್ನು ಬಿಟ್ಟು ಇನ್ನೊಂದು ದೇಶಕ್ಕೆ ಆಶ್ರಯ ಬಯಸಿ ಬರಲು ಕಾರಣವಾದರೂ ಯಾವುದು? ಇದಕ್ಕೆ ನಿರಾಶ್ರಿತರೇ ಕಾರಣವೇ, ಅಲ್ಲ, ಖಂಡಿತ ಅಲ್ಲ.

ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ಶಕ್ತಿಗಳು ಹಾಗೂ ಅದರ ಸಹಚರ ದೇಶಗಳು ಮಧ್ಯಪ್ರಾಚ್ಯದ ಇರಾಕ್, ಸಿರಿಯಾ, ಪ್ಯಾಲೆಸ್ಟೈನ್, ಯೆಮೆನ್ ಮತ್ತು ಆಫ್ರಿಕನ್ ದೇಶಗಳಾದ ಸೂಡಾನ್, ಸೋಮಾಲಿಯಾ, ರುವಾಂಡಾ, ಇಥಿಯೋಪಿಯಾ ಮೇಲೆ ಪೂರ್ಣಪ್ರಮಾಣದ ಯುದ್ಧವನ್ನು ಸಾರಿದ್ದರಿಂದಲೇ ಅಲ್ಲಿನ ಜನರು ತಮ್ಮ ನೆಲೆ, ತಾಯ್ನಾಡನ್ನು ಕಳೆದುಕೊಂಡರು. ಆಸರೆಗಾಗಿ ಬೇರೆ ಕಡೆ ಹೋಗಬೇಕಾಯಿತು. ಸಾಮ್ರಾಜ್ಯಶಾಹಿ ರಷ್ಯಾ ಮತ್ತು ಪಶ್ಚಿಮದ ಶ್ರೀಮಂತ ದೇಶಗಳ ಬೆಂಬಲದೊಂದಿಗೆ ಉಕ್ರೇನ್ ಮಧ್ಯೆ ನಡೆಯುತ್ತಿರುವ ಯುದ್ಧದಿಂದಾಗಿ ನಿರಾಶ್ರಿತರ ಸಮಸ್ಯೆಗಳು ಬಿಗಡಾಯಿಸಿವೆ.

ನಿರಾಶ್ರಿತರನ್ನು ತಮ್ಮ ದೇಶದೊಳಕ್ಕೆ ಬಿಟ್ಟುಕೊಂಡೆವೆಂಬ ಉದಾರವಾದಿ ಮುಖವನ್ನು ತೋರಿಸುವ ಯುರೋಪಿಯನ್ ದೇಶಗಳು ಇಂತಹ ನಿರಾಶ್ರಿತರನ್ನು ಅತ್ಯಂತ ಅಗ್ಗದ ಕೂಲಿ ನೀಡಿ ದುಡಿಸಿಕೊಳ್ಳುತ್ತಾರೆ ಎಂಬುದು ಈಗಾಗಲೇ ಬಹಿರಂಗವಾಗಿದೆ. ಜನರನ್ನು ಪಶುಗಳಿಗಿಂತಲೂ ಕಡೆಯಾಗಿ ನೋಡಿಕೊಳ್ಳಲಾಗುತ್ತದೆ ಎಂಬುದಕ್ಕೆ ಸರ್ಬಿಯಾದ ಗಡಿ ಬಳಿ ಇರುವ ಹಂಗೇರಿಯನ್ ಶಿಬಿರದಲ್ಲಿ ಜನರಿಗೆ ಆಹಾರದ ಪೊಟ್ಟಣಗಳನ್ನು ಎಸೆಯುವ ದೃಶ್ಯಗಳನ್ನು ನೋಡಿದಾಗ ಗೊತ್ತಾಗುತ್ತದೆ.

ಚುನಾವಣಾ ಲಾಭಕ್ಕಾಗಿ ಎಎಫ್‌ಡಿ ಪಕ್ಷವು ನಿರಾಶ್ರಿತ ವಲಸಿಗರ ವಿರುದ್ಧ ರಾಷ್ಟ್ರೀಯತೆಯ ಉನ್ಮಾದವನ್ನು ಸೃಷ್ಟಿಸಲು ಮುಂದಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. 2024ರ ಜನವರಿ 10 ರಂದು 'ಕರ್ರೆಕ್ಟಿವ್' ನಿಯತಕಾಲಿಕದಲ್ಲಿ ಪ್ರಕಟವಾದ ಲೇಖನದಲ್ಲಿ ನವನಾಜಿಗಳು ಹಾಗೂ ಎಎಫ್‌ಡಿ ಪಕ್ಷದ ಮುಖಂಡರು ಸೇರಿಕೊಂಡು ಜರ್ಮನಿಗೆ ನುಸುಳಿ ಬಂದ ವಲಸಿಗರು ಹಾಗೂ ಈಗಾಗಲೇ ದೇಶದಲ್ಲಿ ನೆಲೆಸಿರುವ ವಲಸಿಗರ ಕುಟುಂಬಗಳನ್ನು ದೇಶದಿಂದ ಓಡಿಸುವ ಬಗ್ಗೆಯೂ ಚರ್ಚಿಸಿದ್ದಾರೆ. ನಾಜಿಗಳು ಯಹೂದಿಗಳನ್ನು ಮಡಗಾಸ್ಕರ್‌ಗೆ ಸಾಗಿಸಿದಂತೆ ಈಗ ನಿರಾಶ್ರಿತರನ್ನು ಉತ್ತರ ಆಫ್ರಿಕಾದ ಒಂದು 'ಮಾದರಿ ರಾಜ್ಯ'ಕ್ಕೆ ಸಾಗಿಸುವ ಚಿಂತನೆಯನ್ನೂ ಮಾಡಿದ್ದಾರೆ.

ಈ ವರದಿಗಳು ಹೊರಬೀಳುತ್ತಿದ್ದಂತೆಯೇ ದೇಶದಾದ್ಯಂತ ಪ್ರಬಲ ಹೋರಾಟಗಳು ಶುರುವಾಗಿವೆ. ಆಡಳಿತಾರೂಢ ಜರ್ಮನಿಯ ಶುಲ್ಝ್ ಸರ್ಕಾರದ ವಿರುದ್ಧ ಅಸಮಾಧಾನಗಳಿದ್ದರೂ ಸಾಮಾನ್ಯ ಜನರಿಗೆ ಅತಿಯಾದ ಪ್ರಾಂತೀಯ ಮನೋಭಾವನೆ ಇಷ್ಟವಾಗುವುದಿಲ್ಲ.

ಜೀವನದ ಎಲ್ಲಾ ಸಮಸ್ಯೆಗಳು ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ವ್ಯವಸ್ಥೆಯಿಂದಲೇ ಉದ್ಭವಿಸತ್ತಿವೆ ಎಂಬುದನ್ನು ಪ್ರತಿಗಾಮಿ ನವನಾಜಿ ಎಎಫ್‌ಡಿಯೊಂದಿಗೆ ಒಂದಾಗಿ ಹೋರಾಟಕ್ಕಿಳಿದಿರುವ ಜರ್ಮನಿಯ ಜನರೂ ಅರ್ಥ ಮಾಡಿಕೊಳ್ಳಬೇಕಿದೆ. ಬಂಡವಾಳಶಾಹಿಗಳ ಸೇವೆಯನ್ನು ಮಾಡುವ ಯಾವುದೇ ಪಕ್ಷ ಅಥವಾ ಗುಂಪು ಅಧಿಕಾರಕ್ಕೆ ಬಂದರೆ ಜನಜೀವನದ ಮೂಲಸಮಸ್ಯೆಗಳನ್ನು ಬಗೆಹರಿಸಲಾಗದು. ಅಷ್ಟೇ ಅಲ್ಲದೇ, ಮುಂಬರುವ ದಿನಗಗಳಲ್ಲಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ. ಇದು ಹೇಗೆಂದರೆ ಉಗ್ರ ಹುಲಿಯಿಂದ ತಪ್ಪಿಸಿಕೊಳ್ಳಲು ಮೊಸಳೆಯನ್ನು ಅಪ್ಪಿಕೊಂಡಂತೆ. ಒಂದು ಕಾಲದಲ್ಲಿ ಸಮಾಜವಾದದ ಉತ್ತುಂಗ ಶಿಖರವನ್ನು ಕಂಡಿದ್ದ ಪೂರ್ವ ಜರ್ಮನಿಯು ಕ್ರಮೇಣ ನಾಜಿ ಪರ ಪಡೆಗಳತ್ತ ವಾಲುತ್ತಿರುವುದು ನಿಜಕ್ಕೂ ಆತಂಕದ ಸಂಗತಿ.

ಜಗತ್ತಿನಾದ್ಯಂತ ಶೋಷಣೆಯಿಂದ ಬಳಲುತ್ತಿರುವ ಜನರು ತಮ್ಮ ವಿಮುಕ್ತಿಗಾಗಿ ಕಾಯುತ್ತಿದ್ದಾರೆ. ಆದರೆ, ಇದಕ್ಕೆ ಸೂಕ್ತವಾದ ಮಾರ್ಗವೂ ಅಗತ್ಯವಾಗುತ್ತದೆ. ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವ ನಿಟ್ಟಿನಲ್ಲಿ ಸರಿಯಾದ ನಾಯಕತ್ವದ ಅಡಿಯಲ್ಲಿ ಸೂಕ್ತ ರಾಜಕೀಯ ಪಥ ಹಾಗೂ ಉನ್ನತ ಮಟ್ಟದ ಸಂಸ್ಕೃತಿ ಮತ್ತು ನೈತಿಕತೆಯನ್ನು ಅಳವಡಿಸಿಕೊಂಡು ನಿರಂತರವಾದ ಸಮೂಹ ಹೋರಾಟಗಳನ್ನು ಸಂಘಟಿಸಬೇಕಾಗುತ್ತದೆ. ಪೂರ್ವ ಜರ್ಮನಿಯ ಜನತೆ ಸಮಾಜವಾದಿ ವ್ಯವಸ್ಥೆ ಪತನಗೊಂಡ ಬಳಿಕ ತಾವು ಏನನ್ನು ಕಳೆದುಕೊಂಡಿದ್ದೇವೆ ಎಂಬುದನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ.

ಜರ್ಮನಿಯಲ್ಲಿ ಅಸ್ತಿತ್ವದಲ್ಲಿರುವ ಹಲವು ಪಕ್ಷಗಳ ಮೂಲ ಗುರಿ ಬಂಡವಾಳಶಾಹಿ ವ್ಯವಸ್ಥೆಯನ್ನು ಪೋಷಿಸುವುದಾಗಿರುತ್ತದೆಯೇ ಹೊರತು ಬೇರೇನಲ್ಲ. ಹೀಗಾಗಿ, ವಿವಿಧ ಪಕ್ಷಗಳ ಹೆಸರಿನಲ್ಲಿ ಮತಗಳನ್ನು ಕೇಳಲು ಬರುವವರ ಮುಖವಾಡಗಳಷ್ಟೇ ಬೇರೆ ಬೇರೆಯಾಗಿರುತ್ತವೆ. ಆದರೆ, ಆಂತರ್ಯದಲ್ಲಿ ಅವರೆಲ್ಲ ಒಂದೇ ಆಗಿರುತ್ತಾರೆ.

ಬಲಪಂಥೀಯತೆಯನ್ನು ಮಟ್ಟಹಾಕಲು ಸರಿಯಾದ ಹೋರಾಟಗಳನ್ನು ಕೈಗೆತ್ತಿಕೊಳ್ಳುವ ಎಡಪಂಥವೇ ಸರಿಯಾದ ಮಾರ್ಗ. ಆದ್ದರಿಂದ ಶೋಷಿತ ಜನತೆ, ಅವರು ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಅಮೆರಿಕ ಅಥವಾ ಭಾರತದವರೇ ಆಗಿರಲಿ ತಮ್ಮ ವಿಮುಕ್ತಿಯ ಹಾದಿಯನ್ನು ತಾವೇ ರೂಪಿಸಿಕೊಂಡು ಕ್ರೂರ ಬಂಡವಾಳಶಾಹಿ ಶೋಷಣೆಯಿಂದ ಹೊರಗೆ ಬರಬೇಕಿದೆ.

15.03.2024 ರಂದು ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿ

## ಜನಪರ ಹೋರಾಟ ನಿರತ ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ:

– ಕಾಮ್ರೇಡ್ ಕೆ.ಉಮಾ, ರಾಜ್ಯ ಕಾರ್ಯದರ್ಶಿಗಳು

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ.ಉಮಾರವರು ದೇಶದ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿಸ್ತಾರವಾಗಿ ವಿವರಿಸಿದರು. ಇದೇ ಸಂಧರ್ಭದಲ್ಲಿ 2024ರ ಲೋಕಸಭಾ ಚುನಾವಣೆ ಸನ್ನಿಹಿತವಾಗಿದೆ. ಅಧಿಕಾರದಲ್ಲಿದ್ದಾಗ ಜನರ ಕೆಂಗಣ್ಣಿಗೆ ಗುರಿಯಾಗುವ ಬಂಡವಾಳಶಾಹಿ ಪಕ್ಷಗಳು ಹೊಸ ಮುಖಗಳೊಂದಿಗೆ, ಹೊಸ ಗ್ಯಾರಂಟಿಯೊಂದಿಗೆ ಮತ್ತೆ ಜನರ ಬಳಿಗೆ ಬರುತ್ತಿವೆ . ಇನ್ನೊಂದೆಡೆ ದುಡಿಯುವ ಜನರ, ರೈತ, ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ದಿನನಿತ್ಯ ಹೋರಾಟ ಕಟ್ಟುತ್ತಿರುವ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷವು ದೇಶದಾದ್ಯಂತ 151 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಕರ್ನಾಟಕದಲ್ಲಿ ಈ ಬಾರಿ 19 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ ಎಂದರು. ದುಡಿಯುವ ಜನರ ರೈತರ, ಕಾರ್ಮಿಕರ, ವಿದ್ಯಾರ್ಥಿಗಳ, ಯುವಜನರ, ಮಹಿಳೆಯರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಲು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿಗಳನ್ನು ಚುನಾಯಿಸಬೇಕು. ಎಸ್‌ಯುಸಿಐ(ಸಿ) ಸ್ಪರ್ಧಿಸದೇ ಇರುವ ಕ್ಷೇತ್ರಗಳಲ್ಲಿ ರಾಜ್ಯದ ಮೂರು ಜನವಿರೋಧಿ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳನ್ನು ಬಿಟ್ಟು ಬೇರೆ ಪ್ರಾಮಾಣಿಕ, ಹೋರಾಟಗಾರ ಅಭ್ಯರ್ಥಿಗಳಿಗೆ ಮತ ನೀಡಬೇಕೆಂದು ಕರೆ ನೀಡಿದರು.




## 5, 8, 9ನೇ ತರಗತಿ ಪಬ್ಲಿಕ್ ಪರೀಕ್ಷೆ ಪ್ರಸ್ತುತ ಶೈಕ್ಷಣಿಕ ವರ್ಷ ರದ್ದುಗೊಳಿಸಿ – ಎಐಡಿಎಸ್‌ಓ ಆಗ್ರಹ!

5, 8, 9ನೇ ತರಗತಿಯ ಪಬ್ಲಿಕ್ ಪರೀಕ್ಷೆಯನ್ನು ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ರದ್ದುಗೊಳಿಸಲು ಆಗ್ರಹಿಸಿ ಬೆಂಗಳೂರು, ಮೈಸೂರು, ಬಳ್ಳಾರಿ ಹಾಗೂ ಕಲ್ಬುರ್ಗಿಯಲ್ಲಿ ಎಐಡಿಎಸ್‌ಓ ವತಿಯಿಂದ ಸಾಂಕೇತಿಕ ಪ್ರತಿಭಟನೆ ನಡೆಸಲಾಯಿತು.

5, 8 ಹಾಗೂ 9ನೇ ತರಗತಿ ವಿದ್ಯಾರ್ಥಿಗಳ ಪಬ್ಲಿಕ್ ಪರೀಕ್ಷೆಗಳನ್ನು ರದ್ದುಗೊಳಿಸಬೇಕೆಂದು ಸುಪ್ರೀಂಕೋರ್ಟ್ ತೀರ್ಪು ಹೊರಡಿಸಿದೆ. ಆದರೆ, ರಾಜ್ಯ ಸರ್ಕಾರವು ಆದೇಶ ಹೊರಡಿಸಿ ಪರೀಕ್ಷೆಗಳನ್ನು ಮಧ್ಯಂತರದಲ್ಲಿ ತಡೆ ಹಿಡಿದಿದ್ದು, ಪರೀಕ್ಷೆಗಳನ್ನು ಮುಂದೂಡಿದೆ. ಒಂದೆಡೆ ಪರೀಕ್ಷೆ ರದ್ದುಗೊಳಿಸಿ ಹಲವು ಆದೇಶಗಳನ್ನು ನ್ಯಾಯಾಲಯಗಳು ನೀಡುತ್ತಿದ್ದರೂ, ಪರೀಕ್ಷೆ ನಡೆಸಲೇ ಬೇಕು ಎಂದು ಸರ್ಕಾರ ಹಠಕ್ಕೆ ಬಿದ್ದಿರುವುದು ಏಕೆ ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡುತ್ತಿದೆ. ಇದರಿಂದಾಗಿ ರಾಜ್ಯದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ತೀವ್ರ ಆತಂಕಕ್ಕೊಳಗಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಶೈಕ್ಷಣಿಕ ವರ್ಷದ ಪರೀಕ್ಷೆಗಳನ್ನು ರದ್ದುಪಡಿಸಿ, ಮುಂದಿನ ವರ್ಷ ಪ್ರಜಾತಾಂತ್ರಿಕ ಪ್ರಕ್ರಿಯೆ ಮೂಲಕ ಪಬ್ಲಿಕ್ ಪರೀಕ್ಷೆಗಳನ್ನು ನಡೆಸುವ ಕುರಿತು ನಿರ್ಧಾರ ಕೈಗೊಳ್ಳಬೇಕೆಂದು ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು ಆಗ್ರಹಿಸಿತು.













## ಮೌಲಾನಾ ಆಜಾದ್ ಶಿಕ್ಷಣ ಪ್ರತಿಷ್ಠಾನವನ್ನು ಮುಚ್ಚುವ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ನಿರ್ಧಾರ ಖಂಡನೀಯ: ಎಐಡಿಎಸ್‌ಓ

ಅಲ್ಪಸಂಖ್ಯಾತ ಸಮುದಾಯದ ಉನ್ನತಿಗಾಗಿ ಮತ್ತು ಅವರಲ್ಲಿ ಶಿಕ್ಷಣದ ವ್ಯಾಪ್ತಿಯನ್ನು ಸುಧಾರಿಸುವ ಮಹತ್ತರವಾದ ಆಶಯದೊಂದಿಗೆ ಮೌಲಾನಾ ಅಜಾದ್ ಶಿಕ್ಷಣ ಪ್ರತಿಷ್ಠಾನವನ್ನು ಪ್ರಾರಂಭಿಸಲಾಯಿತು. ಹಲವು ವರ್ಷಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದಿದ್ದಾರೆ. ಆದರೆ ಕ್ರಮೇಣ, ಘೋಷಿಸಲಾದ ಪ್ರತಿ ಬಜೆಟ್‌ನಲ್ಲಿ, ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡುವ ಯೋಜನೆಗೆ ಹಣ ಕಡಿತವಾಗುತ್ತಿದೆ. ಈ ಯೋಜನೆಗೆ 2022–23 ರಲ್ಲಿ ಕೇವಲ ಒಂದು ಲಕ್ಷವನ್ನು ನಿಗದಿಪಡಿಸಲಾಗಿದೆ. ಅಲ್ಪಸಂಖ್ಯಾತರನ್ನು ಅದರಲ್ಲೂ ಮುಸ್ಲಿಮರನ್ನು ಉನ್ನತ ಶಿಕ್ಷಣದಿಂದ ದೂರವಿಟ್ಟಿದ್ದಕ್ಕಾಗಿ ಹಿಂದಿನ ಆಡಳಿತವನ್ನು ದೂಷಿಸುವ ಇದೇ ಸರ್ಕಾರವು ಈಗ ಬಡ ಮತ್ತು ಅಂಚಿನಲ್ಲಿರುವ ವಿದ್ಯಾರ್ಥಿಗಳ ಆಕಾಂಕ್ಷೆಗಳಿಗೆ ದೊಡ್ಡ ಹೊಡೆತವನ್ನು ನೀಡಿದೆ! ಇದು ಒಂದೇ ಒಂದು ಘಟನೆಯಲ್ಲ, ಕಳೆದ ಕೆಲವು ವರ್ಷಗಳಿಂದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಹಲವಾರು ವಿದ್ಯಾರ್ಥಿವೇತನಗಳು ಮತ್ತು ಫೆಲೋಶಿಪ್‌ಗಳು ದಿಗ್ಭ್ರಮೆಗೊಳಿಸುವ ದರದಲ್ಲಿ ಹೇಗೆ ಕಡಿಮೆಯಾಗುತ್ತಿವೆ ಎಂಬುದನ್ನು ನಾವು ನೋಡಿದ್ದೇವೆ. ಈ ಸಮುದಾಯಗಳು ಉನ್ನತ ಕಲಿಕೆ ಮತ್ತು ಚಿಂತನೆಯ ವ್ಯಾಪ್ತಿಯಿಂದ ಹೊರಗಿವೆ. ಅವರ ಉನ್ನತಿಗಾಗಿ, ಇಂತಹ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೂಲಕ ಕಲಿಕೆಯನ್ನು ಪ್ರೋತ್ಸಾಹಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಆದರೆ ಆಡಳಿತ ಪಕ್ಷದ ಅಜೆಂಡಾದಿಂದಾಗಿ ಇಡೀ ಸಮುದಾಯವೇ ಕತ್ತಲಲ್ಲಿ ಮುಳುಗುತ್ತಿರುವುದು ನೋವಿನ ಸಂಗತಿ.

ಸರ್ಕಾರ ಈ ಆದೇಶವನ್ನು ಹಿಂಪಡೆಯಬೇಕು ಮತ್ತು ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಮರುಸ್ಥಾಪಿಸಬೇಕು ಎಂದು ಎಐಡಿಎಸ್‌ಓ ಆಗ್ರಹಿಸುತ್ತದೆ.

## ಬಿಜೆಪಿ ಸೇರಿರಿ! ನಿಮ್ಮೆಲ್ಲಾ ಕಳಂಕಗಳು ತೊಳೆದುಹೋಗುತ್ತವೆ!!

ಮುಂಬೈ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗ (ಇಒಡಬ್ಲ್ಯು)ವು, ಎನ್‌ಸಿಪಿ ನಾಯಕರಾದ ಅಜಿತ್ ಪವಾರ್ ಮೇಲೆ ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್ (ಎಂಎಸ್‌ಸಿಬಿ) ನಲ್ಲಿ ಮೋಸ ಹಾಗೂ ಪಾತಕಿ ವಿಶ್ವಾಸದ್ರೋಹದ ಆಪಾದನೆಯನ್ನು ಹೊರಿಸಿತ್ತು. 2019 ರಲ್ಲಿ ಈ ಕುರಿತಾದ ಒಂದು ಅರ್ಜಿಯನ್ನು ಕೈಗೆತ್ತಿಕೊಂಡ ಬಾಂಬೆ ಉಚ್ಚ ನ್ಯಾಯಾಲಯ, ಇದರ ವಿಚಾರಣೆಗೆ ಆದೇಶಿಸಿತ್ತು. ಇಒಡಬ್ಲ್ಯು ಈ ಪ್ರಕರಣದಲ್ಲಿ ಎಫ್‌ಐಆರ್ ದರ್ಜಿಸಿದ್ದು, ಇದರಲ್ಲಿ ಶಾಮೀಲಾದ ಎಲ್ಲರ ಮೇಲೂ 3 ಅಪರಾಧ ದಂಡ ಸಂಹಿತೆಗಳಡಿಯಲ್ಲಿ ಮೊಕದ್ದಮೆ ದಾಖಲಿಸಿತ್ತು. ಎಫ್‌ಐಆರ್ ಪ್ರಕಾರ, ಸಕ್ಕರೆ ಸಹಕಾರ ಸಂಘಗಳು, ನೂಲು ಗಿರಣಿಗಳು ಮತ್ತಿತರರು ಮಹಾರಾಷ್ಟ್ರದ ಜಿಲ್ಲಾ ಮತ್ತು ಸಹಕಾರಿ ಬ್ಯಾಂಕುಗಳಿಂದ ಸಾವಿರಾರು ಕೋಟಿ ರೂಪಾಯಿಗಳ ಸಾಲವನ್ನು ಪಡೆದಿದ್ದವು. ಆಗ, ಎಂಎಸ್‌ಸಿ ಬ್ಯಾಂಕಿನ ನಿರ್ದೇಶಕರಲ್ಲಿ ಒಬ್ಬರಾದ ಅಜಿತ್ ಪವಾರ್ ಇದರಲ್ಲಿ ನೇರವಾಗಿ ಶಾಮೀಲಾಗಿರುವ ಆರೋಪವಿತ್ತು. ಸಾಲವನ್ನು ಕಾನೂನುಬಾಹಿರವಾಗಿ ಪಡೆದಿದ್ದು, ಈ ಪ್ರಕ್ರಿಯೆಯಲ್ಲಿ ಹಲವು ಅಕ್ರಮಗಳು ನಡೆದಿವೆ. ಇದರಿಂದ 2007ರ ಜನವರಿ 1 ರಿಂದ ಡಿಸೆಂಬರ್ 31ರ ವರೆಗೆ ರಾಜ್ಯ ಸರ್ಕಾರದ ಖಜಾನೆಗೆ ರೂ. 25,000 ಕೋಟಿ ನಷ್ಟವಾಗಿದೆ ಎಂದು ಇಒಡಬ್ಲ್ಯು ಹೇಳಿತ್ತು. ಈ ಬಗ್ಗೆ ಬಿಜೆಪಿ ಅವರ ರಾಜೀನಾಮೆಗೆ ಒತ್ತಾಯಿಸಿತ್ತು. ಇದೀಗ ಈ ಎನ್‌ಸಿಪಿಯ ಭಿನ್ನಮತೀಯ ನಾಯಕ ಮಹಾರಾಷ್ಟ್ರದಲ್ಲಿ ತನ್ನ ಬಣದೊಂದಿಗೆ ಬಿಜೆಪಿಯೊಂದಿಗೆ ಕೈಜೋಡಿಸಿದ್ದಾರೆ. ಇದರರ್ಥ ಇಷ್ಟೇ: ಬಿಜೆಪಿ ಜೊತೆ ಸೇರಿದರೆ, ನಿಮ್ಮ ಹಿಂದಿನ ಪಾತಕಗಳೆಲ್ಲವೂ ಮಾಫಿ, ನಿಮ್ಮ ಭ್ರಷ್ಟಾಚಾರವೂ ಕ್ಷಮಾರ್ಹವಾಗುತ್ತದೆ. ಶುದ್ಧೀಕರಣ ಮಾಡಲು ಬಿಜೆಪಿಗಿಂತ ಉತ್ತಮರು ಯಾರಿದ್ದಾರೆ?

ಬಿಜೆಪಿ ಜೊತೆ ಸೇರಿದರೆ, ನಿಮ್ಮ ಹಿಂದಿನ ಪಾತಕಗಳೆಲ್ಲವೂ ಮಾಫಿ, ನಿಮ್ಮ ಭ್ರಷ್ಟಾಚಾರವೂ ಕ್ಷಮಾರ್ಹವಾಗುತ್ತದೆ. ಶುದ್ಧೀಕರಣ ಮಾಡಲು ಬಿಜೆಪಿಗಿಂತ ಉತ್ತಮರು ಯಾರಿದ್ದಾರೆ?

ಮೈಸೂರು: ಲೆನಿನ್ ಕುರಿತು ವಿಚಾರ ಸಂಕಿರಣ

# "ಕಾರ್ಮಿಕ ವರ್ಗದ ಆಡಳಿತ ಮತ್ತು ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಲೆನಿನ್ ಪ್ರಭಾವ"

ಲೆನಿನ್‌ರವರು ಮಹಾನ್ ತತ್ವಜ್ಞಾನಿ ನಿಜ, ಆದರೆ ನಮಗೆ ನಿಮಗೆ ಕೈಗೆಟುಕದ ತತ್ವಜ್ಞಾನಿ ಅವರಲ್ಲ. ಪ್ರಸಕ್ತ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ಬಯಸುವ ಎಲ್ಲರೂ ಲೆನಿನ್‌ರ ವಿಚಾರಗಳನ್ನು ಗ್ರಹಿಸಿ ರೂಢಿಸಿಕೊಳ್ಳಬೇಕು ಎಂದು ಎಐಡಿವೈಓ ರಾಜ್ಯ ಉಪಾಧ್ಯಕ್ಷರಾದ ಡಾ. ಜಿ.ಎಸ್. ಕುಮಾರ್ ನುಡಿದರು. ಸಿಪಿಐ, ಸಿಪಿಎಂ, ಸಿಪಿಐ–ಎಂಎಲ್ (ಲಿಬರೇಷನ್), ಎಸ್‌ಯುಸಿಐ (ಕಮ್ಯುನಿಸ್ಟ್) ಜಿಲ್ಲಾ ಸಮಿತಿಗಳು ಮೈಸೂರಿನಲ್ಲಿ ಜಂಟಿಯಾಗಿ ನಡೆಸಿದ ಬೃಹತ್ ಸಮಾವೇಶದಲ್ಲಿ ಕಾರ್ಮಿಕ ವರ್ಗದ ಮಹಾನ್ ನಾಯಕ ವಿ.ಐ. ಲೆನಿನ್ ಅವರ ಮರಣ ಶತಮಾನೋತ್ಸವ ನಿಮಿತ್ತ ಆಯೋಜಿಸಿದ್ದ "ಕಾರ್ಮಿಕ ವರ್ಗದ ಆಡಳಿತ ಮತ್ತು ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಲೆನಿನ್ ಪ್ರಭಾವ" ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

"ಯಾವುದೇ ತತ್ವಜ್ಞಾನದ ಮೂಲ ನಿಯಮಗಳು ಶಾಶ್ವತವಾಗಿರುತ್ತವೆ. ಆದರೆ ಕಾಲ ಸಂದರ್ಭಕ್ಕೆ ಅನುಗುಣವಾಗಿ ತತ್ವ ಸಿದ್ಧಾಂತಗಳು ಬೆಳೆಯಬೇಕಾಗುತ್ತದೆ. ತನ್ನ ಜ್ಞಾನ ಭಂಡಾರವನ್ನು ವೃದ್ಧಿಸಿಕೊಳ್ಳಬೇಕಾಗುತ್ತದೆ. ಲೆನಿನ್‌ರವರು ಮಾರ್ಕ್ಸ್‌ವಾದವನ್ನು ರಷ್ಯಾದ ನೆಲಕ್ಕೆ ಅನುಗುಣವಾಗಿ ಮಾರ್ಪಡಿಸಿ ಅನುಷ್ಠಾನಕ್ಕೆ ತಂದರು. ಕ್ರಾಂತಿಯನ್ನು ಸಫಲಗೊಳಿಸಿದರು. ಇಲ್ಲಿ ಲೆನಿನ್ನರ ಮಹಾನತೆ ಅಡಗಿದೆ. ಲೆನಿನ್ ಒಬ್ಬ ದೊಡ್ಡ ನಾಯಕ. ಕ್ರಾಂತಿಯ ಶಿಲ್ಪಿ, ಮಹಾನ್ ಮೇಧಾವಿ, ತತ್ವಜ್ಞಾನಿ ಇದೆಲ್ಲವೂ ಸರಿ, ಆದರೆ ಇವೆಲ್ಲವಕ್ಕಿಂತಲೂ ಮಿಗಿಲಾಗಿ ಅವರೊಬ್ಬ ಕ್ರಾಂತಿಕಾರಿ. ಸತ್ಯದ ಹುಡುಕಾಟದಲ್ಲಿದ್ದಂತವರು. ಅದಕ್ಕಾಗಿ ಅವರು ಮಾರ್ಕ್ಸ್‌ವಾದವನ್ನು ಅನುಸರಿಸಿದರು. ಮಾರ್ಕ್ಸ್‌ವಾದಿ ತತ್ವಜ್ಞಾನಿಗಳಲ್ಲಿ ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ನಂತರದ ಸ್ಥಾನ ಲೆನಿನ್‌ರದ್ದಾಗಿದೆ. ಲೆನಿನ್ನರು ಕ್ರಾಂತಿಯನ್ನು ಸಫಲಗೊಳಿಸಿದರು ಮಾತ್ರವಲ್ಲದೆ ಮಾರ್ಕ್ಸ್‌ವಾದಿ ತತ್ವಜ್ಞಾನದ ಭಂಡಾರಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು. ಕಾರ್ಲ್ ಮಾರ್ಕ್ಸ್ ನಂತರದ ಬದಲಾದ ಹೊಸ ಯುಗದಲ್ಲಿ ಮಾರ್ಕ್ಸ್‌ವಾದವನ್ನು ಸಂಪತ್ಭರಿತಗೊಳಿಸಿದ ಅವರ ಚಿಂತನೆಯನ್ನು ಲೆನಿನ್‌ವಾದ ಎಂದು ಕರೆಯಲಾಗುತ್ತದೆ.

ಲೆನಿನ್ ಅವರು ಬಂದಂತಹ ಕಾಲಮಾನ ಕಾರ್ಮಿಕ ವರ್ಗದ ಕ್ರಾಂತಿ ಮತ್ತು ಸಾಮ್ರಾಜ್ಯಶಾಹಿ ಯುದ್ಧಗಳ ಯುಗವಾಗಿತ್ತು. ಇದು ಮಾರ್ಕ್ಸ್ ಮತ್ತು ಎಂಗಲ್ಸ್‌ರ ಕಾಲಘಟ್ಟದಲ್ಲಿರಲಿಲ್ಲ. ಮಾರ್ಕ್ಸ್ ನಂತರ 12 ವರ್ಷ ಬಾಳಿದ ಎಂಗೆಲ್ಸ್ ಸಾಮ್ರಾಜ್ಯವಾದದ ಆರಂಭಿಕ ಘಟ್ಟವನ್ನು ಕಂಡಿದ್ದರು. ಆದರೆ ಲೆನಿನ್‌ರ ಕಾಲದಲ್ಲಿ ಸಾಮ್ರಾಜ್ಯವಾದ ಇಡೀ ವಿಶ್ವವನ್ನು ವ್ಯಾಪಿಸಿತ್ತು. ಅದು ವಿಶ್ವದ ಎಲ್ಲ ರಾಷ್ಟ್ರಗಳನ್ನು ಒಂದು ಬಿಗಿಯಾದ ಸರಪಳಿಯಂತೆ ವ್ಯಾಪಿಸಿತ್ತು. ಆ ಸರಪಳಿಯಲ್ಲಿನ ಅತ್ಯಂತ ದುರ್ಬಲ ಕೊಂಡಿಯನ್ನು ಬೇಧಿಸಿದಾಗ ಮಾತ್ರ ಸಾಮ್ರಾಜ್ಯವಾದವನ್ನು ಹಿಮ್ಮೆಟ್ಟಿಸಬಹುದು ಎಂಬುದನ್ನು ಲೆನಿನ್ ತೋರಿಸಿಕೊಟ್ಟರು ಮತ್ತು ಅಂತಹ ದುರ್ಬಲ ಕೊಂಡಿ ರಷ್ಯಾ ಆಗಿದೆ ಎಂದು ಗುರುತಿಸಿದರು. ಮಾರ್ಕ್ಸ್‌ರವರು ಒಂದು ಮುಂದುವರೆದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕ್ರಾಂತಿ ಸಂಭವಿಸಬಹುದು ಎಂದು ಐತಿಹಾಸಿಕ ವಸ್ತುವಾದದ ಆಧಾರದಲ್ಲಿ ನುಡಿದಿದ್ದರು. ಆದರೆ ಸಾಮ್ರಾಜ್ಯವಾದದ ಬದಲಾದ ಕಾಲಘಟ್ಟದಲ್ಲಿ ಒಂದು ದುರ್ಬಲವಾದ ಬಂಡವಾಳಶಾಹಿ ರಾಷ್ಟ್ರದಲ್ಲಿ ಕ್ರಾಂತಿ ಸಾಧ್ಯ ಎಂಬುದನ್ನು ಗುರುತಿಸಿ, ಅದನ್ನು ಸಾಕಾರಗೊಳಿಸಿದವರು ಲೆನಿನ್. ಕ್ರಾಂತಿಗೆ ಎರಡು ಪ್ರಮುಖವಾದಂತಹ ಪೂರ್ವಾವಶ್ಯಕತೆಗಳನ್ನು ಗುರುತಿಸಿ ಅವರು ಹೇಳಿದರು; ಒಂದು ಕ್ರಾಂತಿಗೆ ಬೇಕಾದಂತಹ ವಸ್ತು ಪರಿಸ್ಥಿತಿ, ಮತ್ತೊಂದು ಕ್ರಾಂತಿಯನ್ನು ನಡೆಸಲು ಬೇಕಾದಂತಹ ಕ್ರಾಂತಿಕಾರಿ ಪಕ್ಷ ಎಲ್ಲಾ ಅವಶ್ಯಕ ಬಲಗಳೊಂದಿಗೆ ಹೊರಹೊಮ್ಮಿರುವುದು. ಈ ಎರಡು ಇದ್ದಲ್ಲಿ ಕ್ರಾಂತಿ ಸಾಧ್ಯ ಎಂಬುದನ್ನು ತೋರಿಸಿಕೊಟ್ಟ ಅವರು, ರಷ್ಯಾದಲ್ಲಿ ಅಂತಹ ವಾಸ್ತವಿಕ ಪರಿಸ್ಥಿತಿಯನ್ನು ಗುರುತಿಸಿ ಕ್ರಾಂತಿಯನ್ನು ಸಂಘಟಿಸಲು ಪಕ್ಷವನ್ನು ಬಲಪಡಿಸಿ ಕ್ರಾಂತಿಯನ್ನು ನೆರವೇರಿಸಿದರು.

ಲೆನಿನ್ನರು ಕಮ್ಯುನಿಸ್ಟ್ ಹೋರಾಟಕ್ಕೆ ಬಂದಾಗ ಕಮ್ಯುನಿಸ್ಟ್ ಪಕ್ಷವೊಂದರ ಮಾದರಿ ಏನು ಎಂಬುದೇ ಇರಲಿಲ್ಲ. ಒಂದು ಪಕ್ಷವನ್ನು ಕಟ್ಟಲು ಏನು ಮಾಡಬೇಕು? ಎಲ್ಲಿಂದ ಪ್ರಾರಂಭಿಸಬೇಕು? ಎಂಬುದನ್ನು ಗುರುತಿಸಿ, ಒಂದು ನೈಜ ಕಮ್ಯುನಿಸ್ಟ್



ಪಕ್ಷದ ಮಾದರಿಯನ್ನು ತೋರಿಸಿಕೊಟ್ಟರು. ಇದಕ್ಕೂ ಮುಂಚೆ ರಷ್ಯಾದಲ್ಲಿ ಕಮ್ಯುನಿಸ್ಟ್ ಪಕ್ಷ ಎಂದು ಕರೆಸಿಕೊಳ್ಳುವ ಹಲವಾರು ಸಂಘಟನೆಗಳು ಇದ್ದವು. ಆದರೆ ಅವುಗಳಲ್ಲಿ ಒಂದು ನಿರ್ದಿಷ್ಟವಾದ ರಚನೆ ಇರಲಿಲ್ಲ. ಅವು ಅರಾಜಕವಾಗಿದ್ದವು. ಅವುಗಳ ನಾಯಕರಿಗೂ ಪಕ್ಷದಲ್ಲಿ ಒಂದು ಶಿಸ್ತು, ಒಂದು ನೀತಿ ಸಂಹಿತೆ ಎಂಬುದು ಬೇಕಿರಲಿಲ್ಲ. ಆದರೆ ಒಂದು ನೈಜ ಪಕ್ಷಕ್ಕೆ ಇದೆಲ್ಲವೂ ಅವಶ್ಯಕತೆ ಎಂದು ತೋರಿಸಿ ಒಂದು ಮಾದರಿ ಪಕ್ಷವನ್ನು ಕಟ್ಟಿದರು ಲೆನಿನ್. ಅದಕ್ಕೂ ಮುಂಚೆ ರಷ್ಯಾದಲ್ಲಿ ನರೋದ್ನಿಕ್ ಮೂವ್ಮೆಂಟ್ ಎಂಬುದು ಇತ್ತು ಆದರೆ ಅವರು ರೈತ ಬಂಡಾಯದಲ್ಲಿ ನಂಬಿಕೆ ಇಟ್ಟಿದ್ದರು. ಕಾರ್ಮಿಕ ವರ್ಗದ ಮಹತ್ವವನ್ನೇ ಗುರುತಿಸಿರಲಿಲ್ಲ. ಪ್ಲೆಖನೋವ್ ಎಂಬುವವರು ಮಾರ್ಕ್ಸ್‌ವಾದಿ ಚಿಂತನೆಯನ್ನು ರಷ್ಯಾಕ್ಕೆ ಪರಿಚಯಿಸಿದರು. ಸ್ವತಃ ಲೆನಿನ್‌ರವರು ಅವರನ್ನು ರಷ್ಯನ್ ಕಮ್ಯುನಿಸಮ್‌ನ ಪಿತಾಮಹ ಎಂದು ಗುರುತಿಸಿದ್ದಾರೆ. ಆದರೆ ಅವರು ಸಹ ಮುಂದಿನ ದಿನಗಳಲ್ಲಿ ದಿಕ್ಚ್ಯುತರಾಗುತ್ತಾರೆ. ಆದರೆ ಲೆನಿನ್ ಕಮ್ಯುನಿಸ್ಟ್ ಪಕ್ಷದ ರಚನೆ ಮತ್ತು ಓರ್ವ ಕಮ್ಯುನಿಸ್ಟ್ ಆಗುವ ಜೀವನ ಹೋರಾಟವನ್ನು ತೋರಿಸಿಕೊಟ್ಟರು.

ರಷ್ಯಾದಲ್ಲಿ 1905ರಲ್ಲಿ ಒಂದು ವಿಫಲ ಕ್ರಾಂತಿ ನಡೆಯಿತು. ಅದರಿಂದ ಪಾಠ ಕಲಿತು ಕಾರ್ಮಿಕ ವರ್ಗ ಸೋಷಲ್ ಡೆಮಾಕ್ರಟರೊಡನೆ ಸೇರಿ 1917ರ ಫೆಬ್ರವರಿಯಲ್ಲಿ ಮತ್ತೊಂದು ಕ್ರಾಂತಿಯನ್ನು ಸಂಘಟಿಸಿತು. ಅದು ಜಮೀನುದಾರಿ ಪದ್ಧತಿಯನ್ನು ತೊಲಗಿಸಿ ಬಂಡವಾಳಶಾಹಿ ಪ್ರಭುತ್ವವನ್ನು ಸ್ಥಾಪಿಸಿತು. ಇದಾದ ನಂತರ ಅನೇಕ ನಾಯಕರು ಮುಂದಿನ ಕ್ರಾಂತಿಗೆ ಸಿದ್ಧರಿರಲಿಲ್ಲ. ಬಂಡವಾಳಶಾಹಿ ವ್ಯವಸ್ಥೆ ಬಲಿಷ್ಠಗೊಂಡ ತರುವಾಯ ಕಾರ್ಮಿಕವರ್ಗದ ಕ್ರಾಂತಿ ನಡೆಯಬೇಕೆಂದು ವಾದಿಸುತ್ತಿದ್ದರು. ಈ ತಪ್ಪು ಕಲ್ಪನೆಯನ್ನು ಆದ್ಯಂತವಾಗಿ ಹೋಗಲಾಡಿಸಿ, ತಮ್ಮ ಏಪ್ರಿಲ್ ಥೀಸಿಸ್ ಎಂಬ ಲೇಖನದಲ್ಲಿ ಕಾರ್ಮಿಕವರ್ಗದ ಕ್ರಾಂತಿಯ ಜರೂರತ್ತನ್ನು ಸ್ಪಷ್ಟಪಡಿಸಿದರು. ಇಡೀ ವಿಶ್ವದಲ್ಲಿ ಬಂಡವಾಳಶಾಹಿ ವ್ಯವಸ್ಥೆ ರೂಪಗೊಂಡು ಬೆಳೆದು ಬಲಿಷ್ಠವಾಗಿ ತನ್ನೆಲ್ಲಾ ಪ್ರಗತಿಪರ ಆಯಾಮವನ್ನು ಕಳೆದುಕೊಂಡು ಜನವಿರೋಧಿಯಾಗಿರುವಾಗ ರಷ್ಯಾದಲ್ಲಿ ಬಂಡವಾಳಶಾಹಿ ಕ್ರಾಂತಿ ಯಶಸ್ವಿಯಾಗಿದೆ. ಹಾಗೆಂದ ಮಾತ್ರಕ್ಕೆ ಅಲ್ಲಿಗೆ ಸುಮ್ಮನಿದ್ದು, ಬಂಡವಾಳಶಾಹಿ ಶೋಷಣೆ ಮಿತಿಮೀರಿ ಆನಂತರ ಕಾರ್ಮಿಕವರ್ಗ ಸಮಾಜವಾದಿ ಕ್ರಾಂತಿಯನ್ನು ಮುನ್ನಡೆಸಬೇಕು ಎಂಬುದು ತಪ್ಪು ಕಲ್ಪನೆ. ಎಲ್ಲಿ ಬಂಡವಾಳಶಾಹಿ ವ್ಯವಸ್ಥೆ ದುರ್ಬಲವಾಗಿದ್ದು ಕಾರ್ಮಿಕರ ಕ್ರಾಂತಿ ನೆರವೇರಿಸಲು ಪರಿಸ್ಥಿತಿ ಅನುಕೂಲಕರವಾಗಿರುವಾಗ ಕಾರ್ಮಿಕರು ಕೈಕಟ್ಟಿ ಕೂರಬೇಕಿಲ್ಲ. ಅವರು ಸಮಾಜವಾದಿ ಕ್ರಾಂತಿಯನ್ನು ಮುನ್ನಡೆಸಬೇಕು ಎಂದು ಕರೆ ನೀಡಿದರು. ಲೆನಿನ್ ಒಬ್ಬ ಮಹಾನ್ ನಾಯಕ ಅಷ್ಟೇ ಅಲ್ಲದೆ, ಸತ್ಯ ಅವರ ಜೊತೆಯಲ್ಲಿತ್ತು. ಆದ್ದರಿಂದ ಅವರು ಕ್ರಾಂತಿಯನ್ನು ಜಯಗೊಳಿಸಿದರು. ಇಲ್ಲವಾದಲ್ಲಿ ಎಷ್ಟೇ ದೊಡ್ಡ ನಾಯಕನಾದರೂ ಸತ್ಯ ಅವರೊಂದಿಗೆ ಇರದಿದ್ದರೆ ಅವರ ಗೆಲುವು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದಲೇ ಅವರು ತಮ್ಮ ಏಪ್ರಿಲ್ ಥೀಸಿಸ್‌ನಲ್ಲಿ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಗೆ ಕರೆ ನೀಡಿ, ಗೆಲುವು ಸಾಧಿಸಿದರು. ಹೀಗೆ ಬದಲಾದ ಕಾಲಘಟ್ಟಕ್ಕೆ ಅನುಗುಣವಾಗಿ ಮಾರ್ಕ್ಸ್‌ವಾದವನ್ನು ನಿರ್ದಿಷ್ಟವಾಗಿ ಅಳವಡಿಸಿದ ಕೀರ್ತಿ ಲೆನಿನ್ ಅವರಿಗೆ ಸಲ್ಲುತ್ತದೆ.

ನಂತರ ರಾಜ್ಯ ಹಾಗೂ ಕ್ರಾಂತಿ ಎಂಬ ತಮ್ಮ ಕೃತಿಯಲ್ಲಿ ಹೇಗೆ ರಾಜ್ಯ ಯಂತ್ರವು ಯಾರ ಕೈಲಿ ಇರುತ್ತದೆಯೋ ಅವರ ಆಳ್ವಿಕೆ ನಡೆಯುತ್ತದೆ ಮತ್ತು ಅದರ ವಿರುದ್ಧ ಶೋಷಣೆಗೆ ಒಳಗಾದಂತಹ ವರ್ಗ ಹೋರಾಟಕ್ಕೆ ಮುಂದಾಗುತ್ತದೆ ಎಂಬುದನ್ನು ಲೆನಿನ್ ತೋರಿಸಿಕೊಟ್ಟರು. ಇಂದು ಭಾರತದ ಕ್ರಾಂತಿಯನ್ನು ಬಯಸುವ ನಾವೆಲ್ಲರೂ ಲೆನಿನ್‌ರ ಬೋಧನೆಗಳನ್ನು ಗ್ರಹಿಸಬೇಕು. ಏಕೆಂದರೆ ಕ್ರಾಂತಿ ಪೂರ್ವದ ರಷ್ಯಾಗೂ ಹಾಗೂ ನಮ್ಮ ಭಾರತದ ಪರಿಸ್ಥಿತಿಗೂ ಹೆಚ್ಚು ಸಾಮ್ಯತೆಗಳಿವೆ. ಕ್ರಾಂತಿ ಪೂರ್ವದ ರಷ್ಯಾದಲ್ಲಿ ಧಾರ್ಮಿಕ ಕಂದಾಚಾರಗಳು ಇದ್ದವು. ಮೂಢನಂಬಿಕೆಗಳು ಇದ್ದವು. ಹಸಿವು ಮತ್ತು ದಾರಿದ್ರ್ಯ ಇದ್ದವು. ಭಾರತದಲ್ಲಿಯೂ ಕೂಡ ಧಾರ್ಮಿಕ ಕಂದಾಚಾರ ಮತ್ತು ಮೌಢ್ಯಗಳು ತುಂಬಿವೆ. ಬಡತನ, ನಿರುದ್ಯೋಗ ತಾಂಡವವಾಡುತ್ತಿವೆ. ಆದರೆ ವಿಶ್ವದ 6ನೇ ಅತಿ ದೊಡ್ಡ ಆರ್ಥಿಕತೆ ನಮ್ಮದಾಗಿದೆ. ಮುಂದೆ 2030ರ ವೇಳೆಗೆ ಆರು ಟ್ರಿಲಿಯನ್ ಡಾಲರ್ ಮೊತ್ತದ ಆರ್ಥಿಕತೆ ನಮ್ಮದಾಗಲಿದೆ ಎಂದು ಈಗಿನ ಆಳ್ವಿಕರು ಹೇಳುತ್ತಿದ್ದಾರೆ. ಅಂದರೆ ಅಲ್ಲಿಗೆ ಅದು ವಿಶ್ವದ ಮೂರನೇ ದೊಡ್ಡ ಆರ್ಥಿಕತೆಯಾಗಿ ಬೆಳೆಯಲಿದೆಯಂತೆ. ಅದೇ ರೀತಿ ಕೇಂದ್ರ ಹಣಕಾಸು ಇಲಾಖೆಯ ಮಾಹಿತಿಯ ಪ್ರಕಾರ 2020ರಲ್ಲಿ ಸುಮಾರು 80,000 ಕೋಟಿ ಬಂಡವಾಳವನ್ನು ವಿದೇಶಗಳಲ್ಲಿ ಭಾರತೀಯ ಬಂಡವಾಳಗಾರರು ಹೂಡಿದ್ದಾರೆ. ಮುಂದಿನ ದಿನಗಳಲ್ಲಿ ಅದು ಒಂದು ಲಕ್ಷ ಕೋಟಿಯ ಗಡಿ ದಾಟಲಿದೆ. ಹಾಗಾದರೆ ಇದು ಕೇವಲ ಬಂಡವಾಳವಾದ ಮಾತ್ರವಲ್ಲ; ಇದು ಸಾಮ್ರಾಜ್ಯವಾದ. ಭಾರತ ಸಾಮ್ರಾಜ್ಯಶಾಹಿ ರಾಷ್ಟ್ರವಾಗಿ ಮಾರ್ಪಾಡಾಗುತ್ತಿದೆ. ಭಾರತದಲ್ಲಿ ಸಾಮ್ರಾಜ್ಯವಾದದ ಪ್ರಕ್ರಿಯೆ ಎಂದೋ ಪ್ರಾರಂಭವಾಗಿದೆ. ಆದ್ದರಿಂದ ಇಂದು ಭಾರತದಲ್ಲಿ ಕ್ರಾಂತಿ ಆಗಬೇಕೆಂದರೆ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯೇ ಆಗಬೇಕು. ಕಾರ್ಮಿಕ ವರ್ಗದ ನೇತೃತ್ವದಲ್ಲಿ ದೇಶದಲ್ಲಿರುವ ಅಪಾರ ಸಂಖ್ಯೆಯ ರೈತ ಸಮುದಾಯವು ಒಟ್ಟಿಗೆ ಸೇರಿ ಕ್ರಾಂತಿಯನ್ನು ಮುನ್ನಡೆಸಬೇಕು".

"ಆದರೆ 1956ರಲ್ಲಿ ನಡೆದ ಸಿಪಿಎಸ್‌ಯು(ಬಿ)ನ 20ನೇ ಮಹಾಧಿವೇಶನದಲ್ಲಿ ಏಕಕಾಲದಲ್ಲಿ ಸಮಾಜವಾದ ಮತ್ತು ಬಂಡವಾಳವಾದದ ಸೌಹಾರ್ದಯುತ ಸಮಾನ ಅಸ್ತಿತ್ವವನ್ನು ಪ್ರಸ್ತಾಪಿಸಲಾಯಿತು. ಕ್ರುಶ್ಚೆವ್ ಅವರ ನಾಯಕತ್ವದಲ್ಲಿ ಸಮಾಜವಾದಿ ರಾಷ್ಟ್ರದಲ್ಲಿ ಬಂಡವಾಳಶಾಹಿಗಳ ಬೆಳವಣಿಗೆಗೆ ನಾಂದಿ ಹಾಡಲಾಯಿತು. ಆದರೆ ಮುಂದೆ ಅದು ಸಮಾಜವಾದವನ್ನು ಹತ್ತಿಕ್ಕಿ ಬಂಡವಾಳವಾದ ಮೇಲುಗೈ ಪಡೆಯಲು ಕಾರಣವಾಯಿತು. ಅಲ್ಲದೆ, ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಸಮಾಜವಾದದ ಶಾಂತಿಯುತ ಸ್ಥಾಪನೆ ಬಗ್ಗೆ ಮಾತನಾಡಲಾಯಿತು. ಆದರೆ ಇದು ಫಲಿಸಲಿಲ್ಲ. 1990ರಲ್ಲಿ ಸಮಾಜವಾದಿ ಒಕ್ಕೂಟದ ಪತನಾನಂತರ ವಿಶ್ವದಲ್ಲೆಡೆ ಏಕ ಧ್ರುವ ವಿಶ್ವ ಸ್ಥಾಪನೆಗೊಂಡು ಸಾಮ್ರಾಜ್ಯಶಾಹಿಗಳ ಆಟಾಟೋಪ ಎಲ್ಲೆ ಮೀರಿದೆ. ವಿಶ್ವದೆಲ್ಲೆಡೆ ಯುದ್ಧದ ಭೀತಿ ಆವರಿಸಿಕೊಂಡಿದೆ. ಇಂದು ಭಾರತದಲ್ಲಿ ಮಾತ್ರವಲ್ಲ, ವಿಶ್ವದೆಲ್ಲೆಡೆ ಇಂತಹ ಪರಿಸ್ಥಿತಿ ಕಂಡುಬರುತ್ತಿದೆ. ಯಾವಾಗ ಸಮಾಜವಾದಿ ಬಣವು ಉತ್ತುಂಗ ಸ್ಥಿತಿಯಲ್ಲಿತ್ತೋ ಆಗ ಪರಿಸ್ಥಿತಿ ಈಗಿನಂತೆ ಇರಲಿಲ್ಲ. ಸಾಮ್ರಾಜ್ಯಶಾಹಿಗಳ ಉದ್ಧಟತನಕ್ಕೆ ಸಮಾಜವಾದಿ ಒಕ್ಕೂಟದ ನಿಯಂತ್ರಣ ಇತ್ತು. ಈಗ ಅದು ಇಲ್ಲವಾಗಿದೆ. ಅಲ್ಲದೇ ಅದೇ ಅಧಿವೇಶನದಲ್ಲಿ ಸಮಾಜವಾದ ಇರುವವರೆಗೆ ಯುದ್ಧ ಸಂಭವಿಸುವುದಿಲ್ಲ ಎಂದು ತಪ್ಪಾಗಿ ಅರ್ಥೈಸಿ ಇಡೀ ಸಮಾಜವಾದವೇ ಪತನವಾಗುವಂತೆ ಮಾಡಲಾಯಿತು. "ಇದು ಸಾಮ್ರಾಜ್ಯಶಾಹಿ ಯುದ್ಧಗಳು ಮತ್ತು ಸಮಾಜವಾದಿ ಕ್ರಾಂತಿಯ ಯುಗ" ಎಂದು ಲೆನಿನ್ನರು ನುಡಿದಿದ್ದರು. ಆದರೆ ಅವರ ಈ ಬೋಧನೆಯನ್ನು ಮರೆತ ಕಾರಣ ಇಂದು ಸಮಾಜವಾದಿ ಒಕ್ಕೂಟ ಪತನಗೊಂಡು ಎಲ್ಲೆಡೆ ಸಾಮ್ರಾಜ್ಯವಾದಿ ಯುದ್ಧದ ಭೀತಿ ತುಂಬಿದೆ.

ಇಲ್ಲಿ ಭಾರತದಲ್ಲಿ ನಮ್ಮ ಪಕ್ಷ ಎಸ್‌ಯುಸಿಐ (ಕಮ್ಯುನಿಸ್ಟ್)ನ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳು, ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರಾದ ಕಾ॥ ಶಿವದಾಸ್ ಘೋಷ್‌ರ ಬೋಧನೆಯನ್ನು ಆಧರಿಸಿ ಜನಪರ ಹೋರಾಟದ ಶಕ್ತಿಯನ್ನು ಗಟ್ಟಿಗೊಳಿಸಿ ಕ್ರಾಂತಿಯನ್ನು ನಡೆಸಬೇಕಿದೆ. ನೈಜ ಮಾರ್ಕ್ಸ್‌ವಾದಿ ಚಿಂತನೆಯನ್ನು ಗ್ರಹಿಸುವಲ್ಲಿ ಬರುವ ಎಲ್ಲಾ ದಿಕ್ಚ್ಯುತಿಗಳನ್ನು ಬದಿಗಿರಿಸಿ ಲೆನಿನ್ನರನ್ನು ಸರಿಯಾಗಿ ಅರ್ಥೈಸಿಕೊಂಡಲ್ಲಿ, ಭಾರತದ ಕ್ರಾಂತಿಯನ್ನು ಬಯಸುತ್ತಿರುವ ನಾವೆಲ್ಲರೂ ಯಶಸ್ವಿಯಾಗಲು ಸಾಧ್ಯ ಎಂದರು. ಲೆನಿನ್‌ರವರ ವಿಚಾರಗಳನ್ನು ಸರಿಯಾಗಿ ಗ್ರಹಿಸಿ ಪ್ರಸಕ್ತ ಪರಿಸ್ಥಿತಿಗೆ ನಿರ್ದಿಷ್ಟವಾಗಿ ಅನುಸರಿಸಿ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯನ್ನು ಮುನ್ನಡೆಸುವುದೇ ನಾವು ಲೆನಿನ್‌ರವರಿಗೆ ಸಲ್ಲಿಸಬಹುದಾದ ನೈಜ ಶ್ರದ್ಧಾಂಜಲಿಯಾಗಿದೆ" ಎಂದರು.

ಸಿಪಿಎಂ ಜಿಲ್ಲಾ ಸಮಿತಿ ಸದಸ್ಯ ಎನ್.ವಿಜಯಕುಮಾರ್ ಮಾತನಾಡಿ, "ಮಾನವ ಇತಿಹಾಸದಲ್ಲಿ ದುಡಿಯುವ ಜನರ ವಿಮೋಚನೆಗೆ ದಾರಿ ತೋರಿಸಿದ ಮಹಾನ್ ಕ್ರಾಂತಿ ಶಿಲ್ಪಿ ಲೆನಿನ್. ಲೆನಿನ್ ಕಾರ್ಮಿಕ ವರ್ಗದ ನಾಯಕ, ಸಮಾಜವಾದಿ ಕ್ರಾಂತಿಯ ನಾಯಕ. ಅವರು ಮಾರ್ಕ್ಸ್‌ವಾದವನ್ನು ಅರ್ಥಮಾಡಿಕೊಳ್ಳುವುದು ಮಾತ್ರವಲ್ಲ, ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದರು. ಅದು ರಷ್ಯಾದ ಕ್ರಾಂತಿ. ಒಂದು ಶತಮಾನದ ನಂತರವೂ ಎದೆಗುಂದದೆ ಲೆನಿನ್ ನಮ್ಮೊಂದಿಗಿದ್ದಾರೆ. ದೆಹಲಿಯ ಗಡಿಯಲ್ಲಿ ಹೋರಾಡುತ್ತಿರುವ ರೈತರ, ದೇಶದ ಕಾರ್ಮಿಕರ, ಸಮಾನತೆಯ ಬದುಕನ್ನು ಬಯಸುವ ಎಲ್ಲರ ಎದೆಯಲ್ಲಿ, ಆತ್ಮದಲ್ಲಿ, ಎಲ್ಲಾ ಶೋಷಿತರ, ಮಹಿಳೆಯರ ಮತ್ತು ವಿದ್ಯಾರ್ಥಿಗಳ ಧ್ವನಿಯಲ್ಲಿ ಲೆನಿನ್ ಅಡಗಿದ್ದಾರೆ" ಎಂದರು.

"ಲೆನಿನ್ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಸಮಾಜವಾದಿ ಹೋರಾಟ ರೂಪಿಸಬೇಕು" ಎಂದು ಸಿಪಿಐ ರಾಜ್ಯ ಮುಖಂಡ ಎಚ್.ಆರ್.ಶೇಷಾದ್ರಿ ಹೇಳಿದರು. ಲೆನಿನ್‌ರ ವಿಚಾರಗಳನ್ನು ಅರ್ಥಮಾಡಿಕೊಂಡು ಹೋರಾಟಗಳನ್ನು ತೀವ್ರಗೊಳಿಸುವುದು ನಾಡಿನ ಕಾರ್ಮಿಕ ವರ್ಗಕ್ಕೆ ಅಗತ್ಯವಾಗಿದೆ ಎಂದರು.

ಸಿಪಿಐ–ಎಂಎಲ್ (ಲಿಬರೇಷನ್) ರಾಜ್ಯ ಸಮಿತಿ ಸದಸ್ಯ ನಾ. ದಿವಾಕರ್, ಜಿಲ್ಲಾ ಕಾರ್ಯದರ್ಶಿ ಚೌಡಳ್ಳಿ ಜವರಯ್ಯ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್.ಬಿ. ರಾಮಕೃಷ್ಣ, ಎಸ್‌ಯುಸಿಐ(ಸಿ) ಜಿಲ್ಲಾ ಕಾರ್ಯದರ್ಶಿ ಬಿ.ರವಿ ಸಭೆಯಲ್ಲಿ ಇದ್ದರು.

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಎಸ್‌ಯುಸಿಐ(ಸಿ) ನಾಯಕರೊಂದಿಗೆ ನೇಪಾಳದ ಎಡಪಂಥೀಯರ ಚರ್ಚೆ




ನಮ್ಮ ಪಕ್ಷ ಎಸ್‌ಯುಸಿಐ(ಸಿ) ಅನ್ನು ಭಾರತದಲ್ಲಿ ಕಟ್ಟಿರುವ ಇತಿಹಾಸದಿಂದ ಪಾಠ ಕಲಿತು, ಲೆನಿನ್‌ವಾದಿ ವಿಧಾನಕ್ರಮವನ್ನು ಅನುಸರಿಸಿ ಒಂದು ಕಮ್ಯುನಿಸ್ಟ್ ಪಕ್ಷವನ್ನು ನೇಪಾಳದಲ್ಲಿ ಕಟ್ಟುವುದು ಹೇಗೆ ಎಂಬುದನ್ನು ಚರ್ಚಿಸಲು ನೇಪಾಳದಿಂದ ಕಾಮ್ರೇಡ್ ಕುಮಾರ್ ಉಪಾಧ್ಯಾಯರ ನೇತೃತ್ವದಲ್ಲಿ 4 ಕಾಮ್ರೇಡರ ನಿಯೋಗವೊಂದು ಬಿಹಾರದ ಮುಜ಼ಾಫರ್‌ಪುರದಲ್ಲಿನ ನಮ್ಮ ಪಕ್ಷದ ಕಛೇರಿಗೆ ಭೇಟಿ ನೀಡಿತ್ತು. ಕಳೆದ ಮಾರ್ಚ್ 7 ರಿಂದ 9 ರ ವರೆಗೆ ನಡೆದ ಚರ್ಚೆಯಲ್ಲಿ ನಮ್ಮ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದ ಕಾ. ಅರುಣ್ ಸಿಂಗ್ ಮತ್ತು ಕಾ. ದೇಬಶಿಶ್ ರಾಯ್ ಹಾಗೂ ಪಕ್ಷದ ಪಶ್ಚಿಮ ಬಂಗಾಲದ ಸೆಕ್ರೆಟರಿಯೆಟ್ ಸದಸ್ಯರಾದ ಕಾ. ಸೌರವ್ ಮುಖರ್ಜಿಯವರೊಂದಿಗೆ ನೇಪಾಳದ ಕಾಮ್ರೇಡರು ಚರ್ಚಿಸಿದರು. ನೇಪಾಳಿಯಲ್ಲಿ ಭಾಷಾಂತರವಾದ, 'ಏತಕ್ಕಾಗಿ ಎಸ್‌ಯುಸಿಐ(ಸಿ) ಮಾತ್ರವೇ ಭಾರತದ ನೈಜ ಕಮ್ಯುನಿಸ್ಟ್ ಪಕ್ಷ' ಎಂಬ ಕಾಮ್ರೇಡ್ ಶಿವದಾಸ್ ಘೋಷ್‌ರವರ ಪುಸ್ತಕದ ಬಗ್ಗೆ ಕಳೆದ 9 ತಿಂಗಳುಗಳಿಂದ 15 ದಿನಗಳಿಗೊಮ್ಮೆ ಎರಡೂ ದೇಶಗಳ ನಡುವೆ ಸಾಮೂಹಿಕ ಗುಂಪು ಅಧ್ಯಯನ ತರಗತಿಗಳು ನಡೆಯುತ್ತಿರುವುದರ ಬಗ್ಗೆ ಇಲ್ಲಿ ಹೇಳಬಯಸುತ್ತೇವೆ. ಕಳೆದ ಆಗಸ್ಟ್ 5ರಂದು ಕೊಲ್ಕತ್ತೆಯಲ್ಲಿ ನಡೆದ ಮಹಾನ್ ಮಾರ್ಕ್ಸ್‌ವಾದಿ ನಾಯಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರ ಜನ್ಮ ಶತಾಬ್ದಿಯ ಸಮಾರೋಪ ಕಾರ್ಯಕ್ರಮದಲ್ಲಿ ನೇಪಾಳದಿಂದ 9 ಜನ ಕಾಮ್ರೇಡರ ನಿಯೋಗ ಭಾಗವಹಿಸಿತ್ತು. ನೇಪಾಳದಲ್ಲಿ ಕಾ. ಘೋಷ್‌ರವರ ಚಿಂತನೆಯೆಡೆಗಿನ ಆಕರ್ಷಣೆ ಕ್ರಮೇಣವಾಗಿ ಹೆಚ್ಚಾಗುತ್ತಿದೆ. ಅವರ ಪುಸ್ತಕಗಳ ಅಧ್ಯಯನ ಮತ್ತು ಮಾರಾಟ, ಎರಡೂ ಗಮನಾರ್ಹವಾಗಿ ಹೆಚ್ಚುತ್ತಿವೆ. ಈ ಚರ್ಚೆಯಲ್ಲಿ, ಕಾ. ಘೋಷ್‌ರವರ ಕೃತಿಗಳಲ್ಲಿ ಅಡಕವಾಗಿರುವ ಅವರ ಬೋಧನೆಗಳ ಸಾರವನ್ನು ಆಳವಾಗಿ ಅಭ್ಯಸಿಸುವ ಮತ್ತು ಅದನ್ನು ಗ್ರಹಿಸುವ ಹಾಗೂ ಅವುಗಳ ಉದ್ದೇಶವನ್ನು ಸಾಕಾರಗೊಳಿಸುವಂಥಾ ಸಂಘರ್ಷವನ್ನು ನಡೆಸುವ ತಮ್ಮ ಇಚ್ಛೆಯನ್ನು ನೇಪಾಳದ ಪ್ರತಿನಿಧಿಗಳು ವ್ಯಕ್ತಪಡಿಸಿದರು.

# ಜರ್ಮನಿಯ ಎಡಪಂಥೀಯ ಪಕ್ಷದ ಪ್ರತಿನಿಧಿಗಳಿಂದ ಕಾಮ್ರೇಡ್ ಪ್ರವಾಶ್ ಘೋಷ್‌ರ ಭೇಟಿ




**ಕಾ. ಪ್ರವಾಶ್ ಘೋಷ್‌ರವರನ್ನು** (ಬಲದಿಂದ ಮೂರನೆಯವರು) **ಭೇಟಿಮಾಡಿದ MLPDಯ ಛೇರ್‌ಪರ್ಸನ್ ಕಾ. ಗಬಿ ಫ್ಲೆಚ್‌ನರ್** (ಮಧ್ಯದಲ್ಲಿರುವವರು)

ಜರ್ಮನಿಯ ಎಡಪಂಥೀಯ ಪಕ್ಷವಾದ ಡೊಯಿಚ್‌ಲ್ಯಾಂಟ್ (ಜರ್ಮನಿಯ ಇನ್ನೊಂದು ಹೆಸರು)ನ ಮಾರ್ಕ್ಸಿಸ್ಟ್–ಲೆನಿನಿಸ್ಟ್ ಪಕ್ಷ(Marxist-Leninist Party of Deutschland- MLPD)ದ 4 ಸದಸ್ಯರ ನಿಯೋಗವೊಂದು ಮಾರ್ಚ್ 6ರಂದು ಕೊಲ್ಕತ್ತಾದಲ್ಲಿನ ನಮ್ಮ ಪಕ್ಷ ಎಸ್‌ಯುಸಿಐ(ಸಿ)ಯ ಕೇಂದ್ರ ಕಛೇರಿಗೆ ಭೇಟಿ ನೀಡಿತ್ತು; ಅಲ್ಲಿ ಅವರೆಲ್ಲಾ ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್‌ರವರನ್ನು, ಹಿರಿಯ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಅಸಿತ್ ಭಟ್ಟಾಚಾರ್ಯರವರನ್ನು, ಮತ್ತು ಅಲ್ಲಿದ್ದ ಇತರ ಪಾಲಿಟ್ ಬ್ಯೂರೋ ಸದಸ್ಯರನ್ನು ಭೇಟಿ ಮಾಡಿ ಸೋದರಭಾವದಿಂದ ಕ್ರಾಂತಿಕಾರಿ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಹಿಂದಿನ ದಿನ ಅವರು ನಮ್ಮ ಪಕ್ಷದ ಸಮೂಹ ಮತ್ತು ವರ್ಗ ಮುಂದಳಗಳ ನಾಯಕರನ್ನು ಭೇಟಿ ಮಾಡಿದ್ದರು.

### ಮಾಧ್ಯಮಗಳಲ್ಲಿ ವರದಿಯಾದಂತೆ.....

# ಇಸ್ರೇಲ್‌ನ ಗಾಜಾ ನೀತಿಯ ವಿರುದ್ಧ ಪಾಶ್ಚಿಮಾತ್ಯ ದೇಶಗಳ ಅಧಿಕಾರಿಗಳ ಪ್ರತಿರೋಧ

ಅಮೆರಿಕ ಮತ್ತು ಯೂರೋಪ್‌ನಲ್ಲಿ ಸೇವೆ ಸಲ್ಲಿಸುತ್ತಿರುವ 800 ಕ್ಕೂ ಹೆಚ್ಚು ಅಧಿಕಾರಿಗಳು, ಇಸ್ರೇಲ್ – ಗಾಝಾ ಯುದ್ಧದ ಬಗ್ಗೆ ತಮ್ಮದೇ ಸರ್ಕಾರಗಳ ನೀತಿಗಳು "ಅಂತರರಾಷ್ಟ್ರೀಯ ಕಾನೂನಿನ ಗಂಭೀರ ಉಲ್ಲಂಘನೆ" ಎಂದು ಎಚ್ಚರಿಸುವ ಹೇಳಿಕೆಗೆ ಸಹಿ ಹಾಕಿದ್ದಾರೆ. ಈ ಹೇಳಿಕೆಯನ್ನು ಬಿಬಿಸಿಗೆ ತಲುಪಿಸಲಾಗಿದೆ. ಈ "ಟ್ರಾನ್ಸ್ ಅಟ್ಲಾಂಟಿಕ್ ಹೇಳಿಕೆ"ಯಲ್ಲಿ ಇವರ ಆಡಳಿತವು "ಈ ಶತಮಾನದ ಅತ್ಯಂತ ಕೆಟ್ಟ ಮಾನವ ದುರಂತಗಳಲ್ಲಿ ಒಂದಾಗಿದೆ" ಎಂದಿದ್ದಾರೆ. ಈ ಸಂದರ್ಭದಲ್ಲಿ ತಜ್ಞರ ಸಲಹೆಯನ್ನು ಬದಿಗೊತ್ತಲಾಗಿದೆ ಎಂಬುದು ಹೇಳಿಕೆಯಲ್ಲಿದೆ. ... "ಇಲ್ಲಿ ನಿಜವಾಗಿಯೂ ವಿಭಿನ್ನವಾದ ಸಂಗತಿಯೆಂದರೆ, ನಾವು ಯಾವುದನ್ನು ತಡೆಯಬೇಕಾಗಿತ್ತೋ, ಅದನ್ನು ಮಾಡದೇ ಅದರ ಬದಲಾಗಿ ಅದರೊಂದಿಗೆ ನಾವು ಸಕ್ರಿಯವಾಗಿ ಶಾಮೀಲಾಗಿದ್ದೇವೆ. ನಾನು ನೆನಪಿಸಿಕೊಳ್ಳಬಹುದಾದ ಇನ್ನಾವ ಪರಿಸ್ಥಿತಿಗಿಂತಲೂ ಈ ಸಂದರ್ಭ ಮೂಲಭೂತವಾಗಿಯೇ ವಿಭಿನ್ನವಾಗಿದೆ", ತಮ್ಮ ಹೆಸರನ್ನು ಬಹಿರಂಗಗೊಳಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಹೀಗೆಂದಿದ್ದಾರೆ.

ಈ ಹೇಳಿಕೆಗೆ ಅಮೆರಿಕ, ಯೂರೋಪಿಯನ್ ಯೂನಿಯನ್ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿ ಸೇರಿದಂತೆ 11 ಯುರೋಪಿಯನ್ ರಾಷ್ಟ್ರಗಳ ಅಧಿಕಾರಿಗಳು ಸಹಿ ಮಾಡಿದ್ದಾರೆ. ಇಸ್ರೇಲ್ ಗಾಜಾದಲ್ಲಿನ ತನ್ನ ಮಿಲಿಟರಿ ಕಾರ್ಯಾಚರಣೆಗಳಲ್ಲಿ ಯಾವುದೇ ಮಿತಿಯನ್ನೂ ತೋರಿಸಿಲ್ಲ ಎಂದು ಅದು ಹೇಳುತ್ತದೆ. "ಇದು ಹತ್ತಾರು ಸಾವಿರ ನಾಗರಿಕರ ಸಾವುಗಳಿಗೆ ಕಾರಣವಾಯಿತು; ಮತ್ತು ... ಬೇರೆಡೆಯಿಂದ ನಿರಾಶ್ರಿತರಿಗೆ ಬಂದ ಸಹಾಯವನ್ನು ಉದ್ದೇಶಪೂರ್ವಕವಾಗಿ ನಿರ್ಬಂಧಿಸಿರುವುದು ... ಸಾವಿರಾರು ನಾಗರಿಕರನ್ನು ಹಸಿವು ಮತ್ತು ನಿಧಾನಗತಿಯ ಸಾವಿನ ಅಪಾಯಕ್ಕೆ ತಳ್ಳುತ್ತಿದೆ." "ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ, ಯುದ್ಧ ಅಪರಾಧಗಳು ಮತ್ತು

> **"ಇದು ಹತ್ತಾರು ಸಾವಿರ ನಾಗರಿಕರ ಸಾವುಗಳಿಗೆ ಕಾರಣವಾಯಿತು; ಮತ್ತು ... ಬೇರೆಡೆಯಿಂದ ನಿರಾಶ್ರಿತರಿಗೆ ಬಂದ ಸಹಾಯವನ್ನು ಉದ್ದೇಶಪೂರ್ವಕವಾಗಿ ನಿರ್ಬಂಧಿಸಿರುವುದು ... ಸಾವಿರಾರು ನಾಗರಿಕರನ್ನು ಹಸಿವು ಮತ್ತು ನಿಧಾನಗತಿಯ ಸಾವಿನ ಅಪಾಯಕ್ಕೆ ತಳ್ಳುತ್ತಿದೆ." "ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ, ಯುದ್ಧ ಅಪರಾಧಗಳು ಮತ್ತು ಜನಾಂಗೀಯ ಶುದ್ಧೀಕರಣ ಅಥವಾ ನರಮೇಧದಂತಹ ಕುಕೃತ್ಯಗಳಿಗೆ ನಮ್ಮ ಸರ್ಕಾರಗಳ ನೀತಿಗಳು ಕಾರಣವಾಗುವ ಸಂಭವವಿದೆ".**
>
> **– ಅಮೇರಿಕ ಮತ್ತು ಯೂರೋಪ್‌ನಲ್ಲಿ ಸೇವೆ ಸಲ್ಲಿಸುತ್ತಿರುವ 800 ಕ್ಕೂ ಹೆಚ್ಚು ಅಧಿಕಾರಿಗಳು**

ಜನಾಂಗೀಯ ಶುದ್ಧೀಕರಣ ಅಥವಾ ನರಮೇಧದಂತಹ ಕುಕೃತ್ಯಗಳಿಗೆ ನಮ್ಮ ಸರ್ಕಾರಗಳ ನೀತಿಗಳು ಕಾರಣವಾಗುವ ಸಂಭವವಿದೆ" ಎಂದು ಅತಂಕ ವ್ಯಕ್ತಪಡಿಸಿದ್ದಾರೆ. ಹೇಳಿಕೆಗೆ ಸಹಿ ಮಾಡಿದ ಅಥವಾ ಅನುಮೋದಿಸಿದವರ ಗುರುತುಗಳನ್ನು ಸಾರ್ವಜನಿಕಗೊಳಿಸಲಾಗಿಲ್ಲ ಮತ್ತು ಬಿಬಿಸಿ ಹೆಸರುಗಳ ಪಟ್ಟಿಯನ್ನು ನೋಡಿಲ್ಲ, ಆದರೆ ಸುಮಾರು ಅರ್ಧದಷ್ಟು ಜನರು ಸರ್ಕಾರದಲ್ಲಿ ಕನಿಷ್ಠ ಒಂದು ದಶಕದ ಅನುಭವವನ್ನು ಹೊಂದಿರುವ ಅಧಿಕಾರಿಗಳು ಎಂಬುದು ತಿಳಿದುಬಂದಿದೆ.

ವಿಭಿನ್ನ ಸರ್ಕಾರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ಒಕ್ಕೊರಲಿನ ಪ್ರತಿರೋಧದ ಧ್ವನಿಯು ಅಭೂತಪೂರ್ವ ಎಂದು ಅಮೇರಿಕದ ನಿವೃತ್ತ ರಾಯಭಾರಿಯೊಬ್ಬರು ಬಿಬಿಸಿಗೆ ತಿಳಿಸಿದ್ದಾರೆ. ... ಈ ಹಿಂದೆ 2003 ರಲ್ಲಿ ಇರಾಕ್ ಮೇಲಿನ ಆಕ್ರಮಣಕ್ಕೆ ಕಾರಣವಾದ ದೋಷಯುಕ್ತ ಗುಪ್ತಚರ್ಯೆಯ ಬಗ್ಗೆ ಅನೇಕರು ಕಳವಳ ವ್ಯಕ್ತಪಡಿಸಿದ್ದರು. ಆದರೆ ಈ ಬಾರಿ ಅನೇಕ ಅಧಿಕಾರಿಗಳು ಮೌನವಾಗಿರಲು ಬಯಸಲಿಲ್ಲ ಎಂದು ಹೇಳುತ್ತಾರೆ.... ಗಾಜಾ ಮೇಲೆ ಇಸ್ರೇಲ್‌ನ ಮಿಲಿಟರಿ ದಾಳಿಯಿಂದಾಗಿ ಸಂಭವಿಸಿದ ಎಲ್ಲೆಗೂ ಮೀರಿದ ಜನ ಜೀವನ ಹಾನಿ ಒಂದೆಡೆಯಾದರೆ ಹಮಾಸ್‌ನ ದಾಳಿಯಿಂದ ಮುಕ್ತಗೊಳಿಸುವ ಹಾಗೂ ದೀರ್ಘ ಕಾಲಾವಧಿಗೆ ಇಸ್ರೇಲ್‌ನ ಭದ್ರತೆಯನ್ನು ಖಚಿತಪಡಿಸಿಕೊಳ್ಳುವ ರಾಜಕೀಯ ಪರಿಹಾರಕ್ಕಾಗಿಯೂ ಕಾರ್ಯರೂಪಕ್ಕೆ ತರಬಹುದಾದ ಯಾವ ತಂತ್ರವೂ ಇಲ್ಲಿಲ್ಲ..

... ಶನಿವಾರದಂದು ಇಸ್ರೇಲಿ ಮಿಲಿಟರಿ ಹೀಗೆ ಹೇಳಿದೆ: "ಖಾನ್ ಯುನಿಸ್ ನಗರದಾದ್ಯಂತ, ನಗರದಲ್ಲಿನ ಮತ್ತು ಭೂಗತ ಒಟ್ಟು 2,000 ಭಯೋತ್ಪಾದಕರನ್ನು ನಿರ್ಮೂಲನೆ ಮಾಡಿದ್ದೇವೆ." ... ಕೊಲ್ಲಲ್ಪಟ್ಟವರಲ್ಲಿ 9,000 ಹಮಾಸ್ ಭಯೋತ್ಪಾದಕರು ಎಂದು ಇಸ್ರೇಲಿ ಅಧಿಕಾರಿಗಳು ಹೇಳುತ್ತಾರೆಯಾದರೂ ಅದಕ್ಕೆ ಪುರಾವೆಗಳನ್ನು ಒದಗಿಸಿಲ್ಲ. ... ಅಮೆರಿಕಾ ಆಡಳಿತವು ಗಾಜಾದಲ್ಲಿ "ಅತೀ ಹೆಚ್ಚು ಪ್ಯಾಲೆಸ್ತೀನಿಯಾದವರನ್ನು ಕೊಲ್ಲಲಾಗಿದೆ" ಎಂದು ಪದೇ ಪದೇ ಹೇಳಿದೆ ಹಾಗೂ ಅಕ್ಟೋಬರ್ 7 ಮತ್ತೊಮ್ಮೆ ಮರುಕಳಿಸದಂತೆ ಖಚಿತಪಡಿಸಿಕೊಳ್ಳುವ ಹಕ್ಕನ್ನು ಇಸ್ರೇಲ್ ಹೊಂದಿದೆ ಎಂದೂ ಹೇಳಿದೆ. (BBC–03–02–24)

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120. Website: www.sucicommunist.org EDITOR: K.RADHAKRISHNA